ಮೈಸೂರು ವಿಶ್ವವಿದ್ಯಾನಿಲಯ

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ–೧

ಟಪ್ಪಾಲ್ ಸಂಸ್ಥೆಯ ವಿವರ

ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.
ಪೋಸ್ಟ್ ಮಾಸ್ಟರ್, ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟ
ಬೆಂಗಳೂರು
೧೯೪೧

ಬೆಲೆ: ೨ ಆಣೆ

ಮೈಸೂರು ವಿಶ್ವವಿದ್ಯಾನಿಲಯ

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ–೧


ಟಪ್ಪಾಲ್ ಸಂಸ್ಥೆಯ ವಿವರ

ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.
ಪೋಸ್ಟ್ ಮಾಸ್ಟರ್, ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚುಕೂಟ
ಬೆಂಗಳೂರು
೧೯೪೧

ಮೊದಲನೆಯ ಮುದ್ರಣ - ೨೦೦೦ ಪ್ರತಿಗಳು

ವಿಷಯ ಸೂಚಿಕೆ



ಇಂಡಿಯನ್ ಪೋಸ್ಟ್ಸ್ ಮತ್ತು ಟೆಲಿಗ್ರಾಫ್ಸ್ ಇಲಾಖೆಯ
ಡೈರೆಕ್ಟರ್ ಜನರಲ್‌ರಾದ

ಸರ್ ಗುರುನಾಥ ಬೇವೂರ್ ಅವರು

ಟಪ್ಪಾಲ್ ಸಂಸ್ಥೆಯ ವಿವರ

೧. ಪರಿಚಯ

ಮುಖಪತ್ರದಲ್ಲಿರುವ ಭಾವ ಚಿತ್ರವು ಸರ್ ಗುರುನಾಥ ಬೇವೂರ್ ಅವರದು. ಇವರು ಟಪ್ಪಾಲ್ ಮತ್ತು ತಂತೀ ಇಲಾಖೆಯ ಅಧಿಪತಿಗಳು. ಇವರು ಕನ್ನಡಿಗರೆಂಬುದೂ ಕರ್ಣಾಟಕ ಭಾಷಾಭಿಮಾನಿಗಳೆಂಬುದೂ ಅನೇಕರಿಗೆ ತಿಳಿದಿರಲಾರದು. ಮೈಸೂರು ಪಟ್ಟಣದಲ್ಲಿ ಟಪ್ಪಾಲು ಮತ್ತು ತಂತೀ ಕಛೇರಿಗೋಸ್ಕರ ಮೈಸೂರು ಸರ್ಕಾರದವರು ಕಟ್ಟಿಸಿ ಕೊಟ್ಟಿರುವ ಭವನಕ್ಕೆ ಇವರ ಹೆಸರನ್ನು ಇಟ್ಟಿರುತ್ತದೆ.

ಇವರ ಅಧಿಕಾರಕ್ಕೆ ಒಳಪಟ್ಟ ಶಾಖೆಗಳ ಪೈಕಿ ಟಪ್ಪಾಲೇ ಬಹಳ ಮುಖ್ಯವಾದುದು - ಸುಮಾರು ಮೂರರಲ್ಲಿ ಎರಡು ಭಾಗವಾಗಿರುತ್ತದೆ. ಬಾಕಿ ಒಂದಂಶವು ಟೆಲಿಗ್ರಾಫ್, ಟೆಲಿಫೋನ್ ಮತ್ತು ಬಾನುಲಿ (Wireless) ಶಾಖೆಗಳನ್ನು ಒಳಗೊಂಡಿದೆ.

ಟಪ್ಪಾಲಾಫೀಸನ್ನು ಅರಿಯದವರು ಯಾರು? ಹಳ್ಳಿ, ತಾಲ್ಲೂಕು ಮತ್ತು ದೊಡ್ಡ ಪಟ್ಟಣಗಳಲ್ಲೆಲ್ಲಾ ಇದರ ವ್ಯಾಪನೆಯು ಇರುತ್ತದೆ.

ಟಪ್ಪಾಲಾಫೀಸುಗಳಲ್ಲಿ ಮೂರು ದರ್ಜೆಗಳಿರುತ್ತವೆ. ಚಿಕ್ಕ ಹೋಬಳಿಗಳು ಮತ್ತು ದೊಡ್ಡ ಹಳ್ಳಿಗಳಲ್ಲಿರುವ ಬ್ರಾಂಚ್ (Branch) ಪೋಸ್ಟಾಫೀಸುಗಳು ಸಾಮಾನ್ಯವಾಗಿ ಶಾಲೆಯ ಉಪಾಧ್ಯಾಯರಿಂದಲೋ, ಜಮೀನ್ದಾರರು

ಮತ್ತು ವ್ಯವಸಾಯಗಾರರಿಂದಲೋ ಅಥವಾ ವರ್ತಕರಿಂದಲೋ ನಡೆಸಲ್ಪಡುತ್ತವೆ. ತಾಲ್ಲೂಕುಗಳಲ್ಲಿರುವ ಆಫೀಸಿಗೆ ಸಬ್ (Sub) ಪೋಸ್ಟಾಫೀಸೆಂದು ಹೆಸರು. ಮೈಸೂರಿನಂತಹ ಪಟ್ಟಣಗಳಲ್ಲಿರುವ ಆಫೀಸಿಗೆ ಹೆಡ್ (Head) ಪೋಸ್ಟಾಫೀಸೆಂದು ಕರೆಯುವರು. ಬ್ರಾಂಚ್ ಆಫೀಸಿನ ಲೆಕ್ಕಗಳು ಪ್ರತಿದಿನವೂ ಸಬ್ ಆಫೀಸಿಗೋ ಅಥವಾ ಹೆಡ್ ಆಫೀಸಿಗೋ ಹೋಗಿ ಅಲ್ಲಿನ ಲೆಕ್ಕಗಳೊಡನೆ ಮಿಳಿತವಾಗುವುವು. ಸಬ್ ಆಫೀಸಿನ ಲೆಕ್ಕಗಳು ಹೆಡ್ ಆಫೀಸಿನ ಲೆಕ್ಕಗಳೊಡನೆ ಸೇರುತ್ತವೆ. ಮೈಸೂರು ಸೀಮೆಯಲ್ಲಿ ಸುಮಾರು ೪೫೦ ಬ್ರಾಂಚ್ ಆಫೀಸುಗಳು ಮತ್ತು ೧೬೦ ಸಬ್ ಆಫೀಸುಗಳು ಇವೆ.

ಮೈಸೂರು, ಬೆಂಗಳೂರು, ಶಿವಮೊಗ್ಗ ಮತ್ತು ಚಿಕ್ಕಮಗಳೂರು—ಈ ನಾಲ್ಕು ಊರುಗಳಲ್ಲಿ ಹೆಡ್ ಪೋಸ್ಟಾಫೀಸುಗಳಿವೆ. ಮೈಸೂರು ಮತ್ತು ಮಂಡ್ಯ ಡಿಸ್ಟ್ರಿಕ್ಟುಗಳಲ್ಲಿರುವ ಮತ್ತು ಕೊಡಗಿನಲ್ಲಿರುವ ಟಪ್ಪಾಲ್ ಆಫೀಸುಗಳ ಲೆಕ್ಕಗಳೆಲ್ಲವನ್ನೂ ಮೈಸೂರು ಹೆಡ್ ಆಫೀಸಿನಲ್ಲಿ ತನಿಖೆ ಮಾಡಿ ಒಟ್ಟುಗೂಡಿಸುತ್ತಾರೆ. ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟ್‌ಗಳ ಟಪ್ಪಾಲ್ ಆಫೀಸುಗಳಿಗೆ ಚಿಕ್ಕಮಗಳೂರು ಹೆಡ್ ಪೋಸ್ಟಾಫೀಸಾಗಿದೆ ಎನ್ನಬಹುದು. ಹಾಗೆಯೆ ಶಿವಮೊಗ್ಗಾದಲ್ಲಿರುವ ಪೋಸ್ಟಾಫೀಸಿನಲ್ಲಿ ಶಿವಮೊಗ್ಗಾ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್‌ಗಳ ಲೆಕ್ಕಗಳು ಒಟ್ಟುಗೂಡುತ್ತವೆ. ಮಿಕ್ಕ ಮೂರು ಡಿಸ್ಟ್ರಿಕ್ಟ್‌ಗಳಲ್ಲಿನ ಟಪ್ಪಾಲಾಫೀಸುಗಳ ಲೆಕ್ಕಗಳು ಬೆಂಗಳೂರಿನಲ್ಲಿರುವ ಕಛೇರಿಯಲ್ಲಿ ಮಿಳಿತವಾಗುತ್ತವೆ.

ಡಿಸ್ಟ್ರಿಕ್ಟಿನ ವಿಭಾಗಗಳು ಮೇಲೆ ಹೇಳಿದಂತೆ ಸಾಮಾನ್ಯವಾಗಿ ಇದ್ದರೂ ಕೆಲವು ಪ್ರತಿಷೇಧಗಳಿವೆ.

ಬೆಂಗಳೂರು ಸಿಟಿ ಮತ್ತು ಸಿ. ಅಂಡ್ ಎಂ. ಸ್ಟೇಷನ್ನಿನಲ್ಲಿರುವ ಆಫೀಸುಗಳನ್ನು ಬಿಟ್ಟು, ಮೈಸೂರು ಸೀಮೆಯ ಮಿಕ್ಕ ಪೋಸ್ಟಾಫೀಸುಗಳ ಆಡಳಿತವು ಇಬ್ಬರು ಸೂಪರಿಂಟೆಂಡೆಂಟರ ಅಧಿಕಾರಕ್ಕೆ ಒಳಪಟ್ಟಿದೆ. ಒಬ್ಬರು ಮೈಸೂರಿನಲ್ಲಿದ್ದು ಮೈಸೂರು, ಮಂಡ್ಯ, ಹಾಸನ, ಕಡೂರು ಡಿಸ್ಟ್ರಿಕ್ಟುಗಳಲ್ಲಿನ ಮತ್ತು ಕೊಡಗಿನಲ್ಲಿನ ಆಫೀಸುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾರೆ. ಮತ್ತೊಬ್ಬರು ಬೆಂಗಳೂರಿನಲ್ಲಿರುತ್ತಾರೆ. ಬೆಂಗಳೂರನ್ನು ಬಿಟ್ಟು ಮಿಕ್ಕಳ ಡಿಸ್ಟ್ರಿಕ್ಟುಗಳಲ್ಲಿರುವ ಆಫೀಸುಗಳ ಮೇಲ್ವಿಚಾರಣೆಯು ಇವರ ಅಧಿಕಾರಕ್ಕೆ ಒಳಪಟ್ಟಿದೆ. ಇವರ ಸಹಾಯಕ್ಕೆ ಹಲವು ಇನ್ಸ್ಪೆಕ್ಟರುಗಳಿದಾರೆ. ಇವರಂತೆಯೆ ಬೆಂಗಳೂರಿನಲ್ಲಿರುವ ಪೋಸ್ಟ್ಮಾಸ್ಟರು ಆ ಊರಿನಲ್ಲಿರುವ ಎಲ್ಲಾ ಪೋಸ್ಟಾಫೀಸುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವರು.

ಸೂಪರಿಂಟೆಂಡೆಂಟರು ಇರತಕ್ಕ ವಿಭಾಗಗಳು (Divisions) ಹಿಂದೂಸ್ಥಾನದಲ್ಲಿ ೧೧೨ ಇರುತ್ತವೆ. ಬೆಂಗಳೂರಿನಂತಹ ಆಫೀಸುಗಳು ಇನ್ನೂ ೨೮ ಇಂಡಿಯದಲ್ಲಿವೆ. ಸೂಪರಿಂಟೆಂಡೆಂಟರು ಮತ್ತು ಬೆಂಗಳೂರಿನಂತಹ ಸ್ಥಳಗಳಲ್ಲಿರುವ ಪೋಸ್ಟ್ಮಾಸ್ಟರುಗಳು ಪೋಸ್ಟ್ಮಾಸ್ಟರ್ ಜನರಲ್‌ರ ಅಧಿಕಾರಕ್ಕೆ ಒಳಪಟ್ಟಿರುವರು. ಪ್ರತಿ ಒಂದು ಅಥವಾ ಎರಡು ಪ್ರಾಂತ್ಯಗಳಿಗೆ ಒಬ್ಬೊಬ್ಬ ಪೋಸ್ಟ್ಮಾಸ್ಟರ್ ಜನರಲ್‌ರಿರುವರು. ಮದ್ರಾಸಿನಲ್ಲಿರುವವರಿಗೆ

ಮದ್ರಾಸ್ ಪ್ರಾಂತ್ಯ, ಹೈದರಬಾದು ಮತ್ತು ಮೈಸೂರು ಸೀಮೆ ಮತ್ತು ಕೆಲವು ಸಂಸ್ಥಾನಗಳು ಸೇರಿರುತ್ತವೆ. ಹೀಗೆಯೇ ಬೊಂಬಾಯಿ, ಕಲ್ಕತ್ತಾ, ಲಾಹೋರ್, ಲಕ್ನೋ, ಪಾಟ್ನಾ ಮತ್ತು ನಾಗಪುರ–ಈ ಸ್ಥಳಗಳಲ್ಲಿ ಪೋಸ್ಟ್ ಮಾಸ್ಟರ್ ಜನರಲ್‌ರ ಆಫೀಸುಗಳಿವೆ. ಸಿಂಧು ಮತ್ತು ಬೆಲೂಚಿಸ್ಥಾನಗಳಲ್ಲಿನ ಆಫೀಸುಗಳ ಮೇಲಿನಾಡಳಿತದ ಅಧಿಕಾರವನ್ನು ಕರಾಚಿಯಲ್ಲಿದ್ದು ಜರುಗಿಸುವವರಿಗೆ ಡೈರೆಕ್ಟರ್ ಎಂದು ಹೆಸರು.

ಹೆಡ್ ಪೋಸ್ಟಾಫೀಸುಗಳ ಲೆಕ್ಕಗಳನ್ನು ತನಿಖೆಮಾಡುವುದಕ್ಕೆ ೪ ಊರುಗಳಲ್ಲಿ ಕಛೇರಿಗಳಿವೆ. ಇವುಗಳಿಗೆ ಆಡಿಟ್ ಆಫೀಸು ಎಂದು ಹೆಸರು. ಅಲ್ಲಿನ ಮುಖ್ಯಾಧಿಕಾರಿಯನ್ನು ಡೆಪ್ಯುಟಿ ಅಕೌಂಟೆಂಟ್ ಜನರಲ್ ಎಂದು ಕರೆಯುತ್ತಾರೆ. ಕಲ್ಕತ್ತೆಯಲ್ಲಿರುವ ಕಛೇರಿಯಲ್ಲಿ ಬಂಗಾಳ, ಅಸ್ಸಾಂ, ಬಿಹಾರ ಮತ್ತು ಒರಿಸ್ಸಾ ಪ್ರಾಂತ್ಯಗಳಲ್ಲಿರುವ ಹೆಡ್ ಪೋಸ್ಟಾಫೀಸುಗಳ ಲೆಕ್ಕಗಳನ್ನು ಪರೀಕ್ಷಿಸುತ್ತಾರೆ. ಪಂಜಾಬ್, ವಾಯವ್ಯ ಸರಹದ್ದಿನ ಪ್ರಾಂತ್ಯ, ಸಂಯುಕ್ತ ಪ್ರಾಂತ್ಯ ಇವುಗಳ ಟಪ್ಪಾಲಾಫೀಸುಗಳು ತಮ್ಮ ಲೆಕ್ಕಗಳನ್ನು ದೆಹಲಿಯಲ್ಲಿರುವ ಆಫೀಸಿಗೆ ಕಳುಹಿಸುತ್ತವೆ. ನಾಗಪುರದಲ್ಲಿರುವ ಕಛೇರಿಯಲ್ಲಿ ಬೊಂಬಾಯಿ, ಸಿಂಧು, ಬೆಲೂಚಿಸ್ಥಾನ ಮತ್ತು ಮಧ್ಯಪ್ರಾಂತ್ಯಗಳಲ್ಲಿನ ಆಫೀಸುಗಳ ಲೆಕ್ಕಗಳನ್ನು ನೋಡುತ್ತಾರೆ. ಮದ್ರಾಸ್ ಆಧಿಪತ್ಯದ ಲೆಕ್ಕಗಳು ಮದ್ರಾಸಿನಲ್ಲಿರುವ ಕಛೇರಿಯಲ್ಲಿ ಪರೀಕ್ಷಿಸಲ್ಪಡುತ್ತವೆ. ಈ ನಾಲ್ಕು ಲೆಕ್ಕ ತನಿಖೆಯ ಕಛೇರಿಗಳಲ್ಲಿ

ಆಗುವ ಲೆಕ್ಕಗಳನ್ನು ಹೊಸ ದೆಹಲಿಯಲ್ಲಿರುವ ಈ ಇಲಾಖೆಯ ಅಕೌಂಟೆಂಟ್ ಜನರಲ್‌ರ ಆಫೀಸಿನಲ್ಲಿ ಒಟ್ಟುಗೂಡಿಸುತ್ತಾರೆ.

ಇಂಡಿಯನ್ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಮೇಲ್ವಿಚಾರಣೆಯು ಗೌರ್ನರ್ ಜನರಲ್‌ರ ಕಾರ್ಯದಕ್ಷತೆ ಸಭೆಯ (Executive Council) ಸಂದೇಶವಾಹಕಗಳ (Communications) ಸಚಿವರಿಗೆ ಸೇರಿದೆ. ಇದಕ್ಕೆ ಮೊದಲು ಬೇರೆ ಬೇರೆ ಸಚಿವರಿಗೆ ಸೇರಿತ್ತು.

ಟಪ್ಪಾಲ್ ಮತ್ತು ತಂತೀ ಇಲಾಖೆಗಳು ಮೊದಲು ಬೇರೆಯಾಗಿದ್ದವು. ಎರಡು ಖಾತೆಗಳಿಗೂ ಇಬ್ಬರು ಡೈರೆಕ್ಟರ್ ಜನರಲ್‌ರು ಇದ್ದರು. ೧೯೧೨ ರಿಂದ ಈಚೆಗೆ ಈ ಎರಡು ಇಲಾಖೆಗಳನ್ನು ಒಟ್ಟುಗೂಡಿಸಿ ಒಬ್ಬ ಯಜಮಾನರನ್ನೇ ನೇಮಿಸಿದರು. ಅಂದಿನಿಂದ ಇಲ್ಲಿಯವರೆಗೆ ಇಬ್ಬರು ದೇಶೀಯರು ಈ ಅಧಿಕಾರಕ್ಕೆ ನೇಮಿಸಲ್ಪಟ್ಟಿರುವರು. ಮೊದಲನೆಯವರು ಸರ್ ಗಣೇನ್ ರಾಯ್ ಅವರು; ಎರಡನೆಯವರೇ ಈಗಿನ ಸರ್ ಗುರುನಾಥ ಬೇವೂರ್ ಅವರು.

ಮೇಲಿನ ಕೆಲವು ಅಧಿಕಾರಗಳಿಗೆ ಇಂಡಿಯನ್ ಸಿವಿಲ್ ಸರ್ವಿಸ್‌ನವರನ್ನು ಆರಿಸುತ್ತಾರೆ. ಉಳಿದ ಅಧಿಕಾರಗಳಿಗೆ ಇಲಾಖೆಯ ನೌಕರರಿಂದ ಚುನಾಯಿಸುತ್ತಾರೆ. ಇಂಡಿಯನ್ ಆಡಿಟ್ ಮತ್ತು ಅಕೌಂಟ್ಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರ ಪೈಕಿ ಕೆಲವರನ್ನು ಸೂಪರಿಂಟೆಂಡೆಂಟರ ಕೆಲಸಕ್ಕೂ, ಕೆಲವರನ್ನು ಇಂಜನಿಯರಿಂಗ್ ಇಲಾಖೆಯ ಕೆಲಸಗಳಿಗೂ ಚುನಾಯಿಸುತ್ತಾರೆ. ಮಿಕ್ಕ ಸೂಪರಿಂಟೆಂ

ಡೆಂಟರ ಕೆಲಸಗಳಿಗೆ ಇಲಾಖೆಯಲ್ಲಿನ ಇನ್‌ಸ್ಪೆಕ್ಟರು ಗಳಿಂದ ಆರಿಸುತ್ತಾರೆ. ಇಲಾಖೆಯ ಗುಮಾಸ್ತರನ್ನು ಪರೀಕ್ಷಿಸಿ ಅವರಲ್ಲಿ ಉತ್ತಮರಾದವರಿಗೆ ಇನ್‌ಸ್ಪೆಕ್ಟರುಗಳ ಕೆಲಸವನ್ನು ಕೊಡುತ್ತಾರೆ. ಗುಮಾಸ್ತೆಯ ಕೆಲಸಕ್ಕಾದರೋ ವಿದ್ಯಾ ಖಾತೆಯ ಮೂಲಕ ಪರೀಕ್ಷೆ ನಡೆಸಿ ಯೋಗ್ಯತೆಯ ಮೇರೆಗೆ ಕೆಲಸಕ್ಕೆ ನಿಯಮಿಸುತ್ತಾರೆ. ಈ ಪರೀಕ್ಷೆಗೆ ಕೂತು ಕೊಳ್ಳಲು ಮೆಟ್ರಿಕ್ಯುಲೇಷನ್ ಅಥವಾ ಅದಕ್ಕೆ ಸರಿಸಮಾನ ವಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ವಯಸ್ಸು ೧೮ಕ್ಕೆ ಮೀರಿ ೨೧ರ ಒಳಗಿರುವವರು ಮಾತ್ರ ಈ ಪರೀಕ್ಷೆಗೆ ಕೂತುಕೊಳ್ಳಬಹುದು. ಆಯಾ ಜಿಲ್ಲೆಗೆ ಸೇರಿದವರನ್ನೇ ಆರಿಸಬೇಕೆಂಬ ನಿಯಮವಿದೆ. ಮೈಸೂರು ದೇಶವೆಲ್ಲವೂ ಒಂದು ಜಿಲ್ಲೆಯಂತೆ ಭಾವಿಸಲ್ಪಟ್ಟಿದೆ. ಕೆಳ ದರ್ಜೆಯ ಕೆಲಸಗಳಿಗೂ ಪರೀಕ್ಷೆ ನಡೆಸಿ ಉಮೇದುವಾರರನ್ನು ಚುನಾಯಿಸುತ್ತಾರೆ. ಇಲಾಖೆಯ ನೌಕರರ ಮಕ್ಕಳು ಯೋಗ್ಯರಾಗಿದ್ದು ಪರೀಕ್ಷೆಯಲ್ಲಿ ತೇರ್ಗಡೆಯಾಧರೆ ಅಂಥವರಿಗೆ ಶೇಕಡಾ ೧೫ ಕೆಲಸಗಳನ್ನು ಕೊಡಬಹುದೆಂದು ಸೂಚನೆ ಇರುತ್ತದೆ. ಪ್ರಜಾಸಂಖ್ಯೆಗೆ ಅನುಗುಣವಾಗಿ ಹಿಂದುಳಿದವರ ಸಲುವಾಗಿಯೇ ಕೆಲವು ನೌಕರಿಗಳನ್ನು ಪ್ರತ್ಯೇಕಿಸಿ (Reserved) ಇಟ್ಟರೂ, ಯೋಗ್ಯರಾದವ ರನ್ನೇ ಈ ಇಲಾಖೆಯಲ್ಲಿ ನೇಮಿಸಬೇಕೆಂಬುದು ಮುಖ್ಯೋದ್ದೇಶವಾಗಿರುತ್ತದೆ.

ನಮ್ಮ ದೇಶದಲ್ಲಿ ಈ ಇಲಾಖೆಯ ವ್ಯವಸ್ಥಿತವಾದ ಏರ್ಪಾಡು ೧೮೫೪ನೆಯ ಸಾಲಿನಿಂದೀಚಿನದು. ಕಾಗದಪತ್ರ

ಗಳನ್ನೂ ಸಣ್ಣ ಪುಟ್ಟ ಸಾಮಾನುಗಳನ್ನೂ ಊರಿಂದೂರಿಗೆ ಕಳುಹಿಸುವ ಹಕ್ಕನ್ನು ಸರ್ಕಾರದವರೇ ಇಟ್ಟುಕೊಂಡಿರುವರು. ಈ ನಿಯಮವನ್ನು ಉಲ್ಲಂಘಿಸುವವರು, ಅಂದರೆ ರುಸುಂ ತೆಗೆದುಕೊಂಡು ಕಾಗದಗಳನ್ನು ಒಟ್ಟುಗೂಡಿಸುವುದೇ ಆಗಲಿ, ರವಾನಿಸುವುದೇ ಆಗಲಿ ಅಥವಾ ಹಂಚುವುದೇ ಆಗಲಿ ಮಾಡಿದರೆ ಪೋಸ್ಟ್ ಆಫೀಸಿನ ಆಕ್ಟ್ (Post Office Act) ನಲ್ಲಿ ನಮೂದಿಸಿರುವ ಶಿಕ್ಷೆಗೆ ಒಳಗಾಗುತ್ತಾರೆ.

೨. ಪರಿಸ್ಥಿತಿ

ಜನಗಳು ಬರೆದ ಕಾಗದಗಳನ್ನು ಒಟ್ಟುಗೂಡಿಸುವುದು, ಅವುಗಳ ರವಾನೆ ಮತ್ತು ವಿಳಾಸದಾರರಿಗೆ ಹಂಚುವುದು– ಇವು ಟಪ್ಪಾಲಾಫೀಸಿನ ಮುಖ್ಯ ಕಾರ್ಯಗಳು. ಈ ಕಾರ್ಯಗಳ ಹಕ್ಕನ್ನೆಲ್ಲಾ ಸರ್ಕಾರದವರೇ ಇಟ್ಟುಕೊಂಡಿರುವರು. ಆದರ್ಶವಾದ (Ideal) ಟಪ್ಪಾಲಾಫೀಸು ಪ್ರತಿ ಮನೆಯಿಂದಲೂ ಕಾಗದಗಳನ್ನು ಒಟ್ಟುಗೂಡಿಸಿ ಆಯಾ ವಿಳಾಸದಾರರಿಗೆ ಅವರವರ ಮನೆಯಲ್ಲಿ ತಲಪಿಸತಕ್ಕದ್ದು. ವಸ್ತುತಃ ಅಂತಹದು ಎಲ್ಲಿಯೂ ಇಲ್ಲವೆಂದು ಹೇಳಬಹುದು. ಅಮೆರಿಕದ ಸಂಯುಕ್ತ ಸಂಸ್ಥಾನಗಳ (United States of America) ದೊಡ್ಡ ಪಟ್ಟಣಗಳಲ್ಲಿ ಪ್ರತಿ ಮನೆಯವರೂ, ಟಪ್ಪಾಲಾಫೀಸಿನವರು ಒಪ್ಪಿದಂಥ ಒಂದೊಂದು ಪೆಟ್ಟಿಗೆಯನ್ನು ಇಡುವ ಪದ್ಧತಿಯನ್ನು ಆಚರಣೆಗೆ ತಂದರು.

ಟಪ್ಪಾಲಿನವನು ವಿಳಾಸದಾರರಿಗೆ ಬಂದ ಕಾಗದಗಳನ್ನು ಅಂತಹ ಪೆಟ್ಟಿಗೆಗಳಲ್ಲಿ ಹಾಕುವಾಗ, ಅದರೊಳಗೆ ವಾಸಸ್ಥರು ಹಾಕಿದ್ದ ಕಾಗದಗಳನ್ನು ಟಪ್ಪಾಲಾಫೀಸಿಗೆ ತೆಗೆದುಕೊಂಡು ಹೋಗುವ ವಾಡಿಕೆ ಬಂದಿತು. ನಮ್ಮ ದೇಶದಲ್ಲಿಯಾದರೋ ಹಳ್ಳಿಗಳಿಗೆ ಹೋಗುವ ಟಪ್ಪಾಲಿನವನು (Village Postman) ಆ ರೀತಿಯಲ್ಲಿಯೆ ಕಾಗದದ ಪೆಟ್ಟಿಗೆಗಳಲ್ಲಿ ಹಾಕಿದ ಕಾಗದಗಳನ್ನು ಟಪ್ಪಾಲಾಫೀಸಿಗೆ ಒಯ್ಯುವುದಲ್ಲದೆ ಹಳ್ಳಿಗಳಲ್ಲಿ ಕೊಡುವ ಕಾಗದಗಳನ್ನು ರಿಜಿಸ್ಟರ್ ಮಾಡುವುದೂ ಉಂಟು. ದೊಡ್ಡ ದೊಡ್ಡ ಅಂಗಡಿಗಳಿಂದ ಭಾಂಗಿಗಳನ್ನು ಟಪ್ಪಾಲ್ ಆಫೀಸಿಗೆ ಸಾಗಿಸುವ ಏರ್ಪಾಡು ಲಂಡನ್‌ನಲ್ಲಿರುತ್ತದೆ.

ಪ್ರತಿ ಮನೆಯಿಂದಲೂ ಕಾಗದಗಳನ್ನು ಒಟ್ಟುಗೂಡಿಸುವುದು ಕಷ್ಟತರವಾದದ್ದು. ಈ ವ್ಯವಸ್ಥೆಗೆ ತಕ್ಕಷ್ಟು ಕಾಗದಗಳನ್ನು ಬರೆಯುವ ಅಭ್ಯಾಸವೂ ಇಲ್ಲ. ಆದಕಾರಣ ಕಾಗದಗಳು ಹೇರಳವಾಗಿ ಸೇರಬಹುದಾದ ಜಾಗಗಳಲ್ಲೆಲ್ಲಾ ಪೆಟ್ಟಿಗೆಗಳನ್ನು (Letter Box) ಇಟ್ಟು ಅವುಗಳನ್ನು ನಿಯಮಿತ ವೇಳೆಗಳಲ್ಲಿ ತೆರೆದು ಅವುಗಳಿಂದ ಕಾಗದಪತ್ರಗಳನ್ನು ಟಪ್ಪಾಲಾಫೀಸಿಗೆ ಒಯ್ಯುತ್ತಾರೆ. ಟಪ್ಪಾಲಾಫೀಸುಗಳು ಸಾವಿರಾರು ಇರುವುದರಿಂದ ಜನಗಳಿಗೆ ಇವುಗಳ ಮೂಲಕ ಸೌಕರ್ಯಗಳನ್ನು ಕಲ್ಪಿಸಿಕೊಡಲು ಸುಲಭವಾಗಿರುತ್ತದೆ. ನಾಗರಿಕತೆಯು ಹೆಚ್ಚಿದಹಾಗೆಲ್ಲಾ ಟಪ್ಪಾಲಾಫೀಸಿನ ಕಾರ್ಯಕಲಾಪಗಳು ನಾನಾವಿಧವಾಗುತ್ತ ಬಂದುವು. ಪಾರ್ಸಲ್ ಮತ್ತು ಮನಿ ಆರ್ಡರ್ ಕೆಲಸಗಳು

ಈ ಇಲಾಖೆಗೆ ಸೇರಿದವುಗಳೆಂಬ ಭಾವನೆಯು ಜನರಲ್ಲಿ ರೂಢಿಯಾಗಿರುತ್ತದೆ. ಆದರೆ ಸರ್ಕಾರದವರು ಅವುಗಳ ವಿಚಾರದಲ್ಲಿ ವಿಶಿಷ್ಟ ಹಕ್ಕನ್ನು ಇಟ್ಟುಕೊಂಡಿಲ್ಲ.

ಪಾರ್ಸಲ್‌ಗೆ ನಮ್ಮ ದೇಶದಲ್ಲಿ ಭಾಂಗಿ ಎಂದು ಕರೆಯುತ್ತಾರೆ. ಹಿಂದಿನ ಕಾಲದಲ್ಲಿ ಭಾರವಾದ ಸಾಮಾನುಗಳನ್ನು ಸಾಗಿಸಲು ಅಡ್ಡೆಯನ್ನು ಉಪಯೋಗಿಸುತ್ತಿದ್ದರು. ಈಗಲೂ ನೀರು ಹೊರುವುದಕ್ಕೆ ಇದನ್ನು ಎಷ್ಟೋ ಕಡೆಯಲ್ಲಿ ಉಪಯೋಗಿಸುತ್ತಾರೆ. ಅಡ್ಡೆಗೆ ಭಾಂಗಿ ಎಂದೂ ಹೆಸರು. ೧೮೫೪ರಲ್ಲಿ ಭಾಂಗಿಗಳನ್ನು ಟಪ್ಪಾಲು ಮೂಲಕ ಕಳುಹಿಸುವ ಏರ್ಪಾಡು ಮೊದಲಾಯಿತು. ಮೊಟ್ಟಮೊದಲು ಸರ್ಕಾರಿ ದಫ್ತರುಗಳು ಭಾರವಾಗಿದ್ದುದರಿಂದ ಅವುಗಳು ಭಾಂಗಿ ಮೂಲಕ ರವಾನೆಯಾಗುತ್ತಿದ್ದುವು. ಈ ಭಾಂಗಿಗಳನ್ನು ಸಾಗಿಸುವ ವಿಚಾರದಲ್ಲಿ ಟಪ್ಪಾಲ್ ಇಲಾಖೆಯವರಿಗೂ ರೈಲಿನವರಿಗೂ ಪದೇ ಪದೇ ಮನಸ್ತಾಪಗಳು ಇರುತ್ತಲೇ ಇದ್ದವು. ಇವುಗಳನ್ನು ಪರಿಹರಿಸಲು ಇಂಡಿಯಾ ಸರ್ಕಾರದವರು ಮತ್ತೆಮತ್ತೆ ತಲೆಹಾಕಬೇಕಾಗುತ್ತಿತ್ತು. ಈ ವೈಷಮ್ಯಗಳಿಗೆ ಮುಖ್ಯ ಕಾರಣವೇನೆಂದರೆ: ಭಾಂಗಿಗಳು ಟಪ್ಪಾಲಿನ ಅಂಶಗಳಾದುದರಿಂದ ರೈಲಿನವರು ದುಡ್ಡಿಲ್ಲದೆ ಸಾಗಿಸಬೇಕೆಂದು ಟಪ್ಪಾಲ್ ಇಲಾಖೆಯವರೂ ಭಾಂಗಿಗಳನ್ನು ಸಾಗಿಸಲು ಇತರ ಸಾಮಾನು (Goods) ಗಳಿಗೆ ಅನ್ವಯವಾಗುವ ಹಾಸಲನ್ನು ಟಪ್ಪಾಲಿನವರು ಕೊಡಬೇಕೆಂದು ರೈಲಿನವರೂ ಭಿನ್ನಾಭಿಪ್ರಾಯಗಳಿಂದ ಜಗಳವಾಡುತ್ತಿದ್ದರು. ಈ ಕಾರಣದಿಂದ ೧೮೭೭ರಿಂದ

೧೯೧೯ರ ವರೆಗೆ ಭಾಂಗಿಗಳ ದರಗಳು ಪದೇ ಪದೇ ಬದಲಾಯಿಸಲ್ಪಡುತ್ತಿದ್ದುವು. ೧೮೬೯ರಲ್ಲಿ ರೈಲು ಹೋಗುವ ಊರುಗಳಿಗೆ ಮಾತ್ರ ೨,೦೦೦ ತೊಲಗಳ ವರೆಗೆ ಭಾಂಗಿಗಳಿರಬಹುದೆಂದೂ ಪಾದಚಾರಿಯಾದ ದೂತನು ಹೋಗುವ ಕಡೆ ೬೦೦ ತೊಲಗಳಿಗೆ ಮೀರಿರಕೂಡದೆಂದೂ ಗೊತ್ತು ಮಾಡಿದರು. ೧೯೦೭ರಲ್ಲಿ ಟಪ್ಪಾಲಿನ ಮೂಲಕ ಭಾಂಗಿಗಳನ್ನು ಸಾಗಿಸುವುದರಿಂದ ರೈಲಿನವರಿಗೆ ಬಹು ನಷ್ಟ ಸಂಭವಿಸಿತೆಂದು ರೈಲ್ವೆ ಆಫೀಸರುಗಳ ಕೂಟದಲ್ಲಿ ಬೊಬ್ಬೆಯಾಗಲು, ಟಪ್ಪಾಲು ಮೂಲಕ ಸಾಗಿಸಬಹುದಾದ ಭಾಂಗಿಗಳ ತೂಕದ ಪರಿಮಿತಿಯನ್ನು ೨,೦೦೦ ತೊಲಗಳಿಂದ ೮೦೦ ತೊಲಗಳಿಗೆ ಇಳಿಸಿದರು. ಅದೇ ವರ್ಷ ಭಾಂಗಿಗಳ ದರಗಳನ್ನು ತಗ್ಗಿಸಿದ ಕಾರಣ ೬ ಲಕ್ಷಕ್ಕೆ ಮೀರಿದ ಭಾಂಗಿಗಳು ಟಪ್ಪಾಲು ಮೂಲಕ ಸಾಗಿಸಲ್ಪಟ್ಟುವು. ಈಚೀಚೆಗೆ ಭಾಂಗಿಗಳ ತೂಕವು ೧,೦೦೦ ತೊಲಗಳ ವರೆಗಿರಬಹುದೆಂದು ತೀರ್ಮಾನವಾಗಿದೆ.

ವಿ. ಪಿ. – ಅಂದರೆ (Value Payable) ಮೌಲ್ಯವನ್ನು ಕೊಡಬೇಕಾದದ್ದು

ಈ ಪದ್ಧತಿಯು ೧೮೭೮ರಲ್ಲಿ ಆಚರಣೆಗೆ ಬಂದಿತು. ಈ ವ್ಯವಸ್ಥೆಯನ್ನು ಸಣ್ಣ ಅಂಗಡಿಯವರು ಬಹಳ ಮಟ್ಟಿಗೆ ಉಪಯೋಗಿಸುತ್ತಾರೆ. ವ್ಯಾಪಾರಸ್ಥರು ಕಳುಹಿಸಿದ ಪದಾರ್ಥಗಳನ್ನು ವಿಳಾಸದಾರರಿಗೆ ಮೌಲ್ಯವನ್ನು ವಸೂಲ್ಮಾಡಿದನಂತರ ತಲಪಿಸಿ, ಆ ಮೊಬಲಗನ್ನು ವ್ಯಾಪಾರಗಾರರಿಗೆ ಕೊಡಲಾಗುತ್ತದೆ. ದೂರಬಾರದಲ್ಲಿ ವಾಸಿಸುವವರಿಗೆ ಈ

ರೀತಿಯ ವ್ಯಾಪಾರವು ಬಹಳ ಅನುಕೂಲ. ಆದರೆ ದೈವ ನಿಯಾಮಕವೋ ಎಂಬಂತೆ ಇದರ ಅನುಕೂಲದ ಜೊತೆಗೆ ಅನಾನುಕೂಲಗಳೂ ಇರುತ್ತವೆ. ಈ ಅನಾನುಕೂಲಗಳಿಂದ ಇಲಾಖೆಯವರಿಗೆ ತೊಂದರೆಯಾಗಿರುತ್ತದೆ. ಪದಾರ್ಥಗಳನ್ನು ನೋಡದೆಯೆ ಕೊಳ್ಳುವುದು ಈ ವ್ಯವಸ್ಥೆಯ ಮುಖ್ಯ ನ್ಯೂನತೆ. ಪ್ರಕಟನೆಗಳನ್ನು ಓದಿ ಜನರು ಸಾಮಾನುಗಳನ್ನು ವಿ. ಪಿ. ಮೂಲಕ ಕಳುಹಿಸುವಂತೆ ಬರೆಯುವರು. ಹಣ ಕೊಟ್ಟನಂತರ ಪದಾರ್ಥವು ತಮ್ಮ ನಿರೀಕ್ಷಣೆಗೆ ಸರಿ ಹೋಗದಿದ್ದರೆ ಟಪ್ಪಾಲಾಫೀಸನ್ನು ದೂರುವರು. ಇಷ್ಟೇ ಅಲ್ಲ – ವ್ಯಾಪಾರಗಾರರು ಗಿರಾಕಿಗಳನ್ನು ಸಂಪಾದಿಸುವ ಉದ್ದೇಶದಿಂದ ಅಪೇಕ್ಷಿಸದಿದ್ದರೂ ವಿ. ಪಿ. ಮೂಲಕ ಸಾಮಾನುಗಳನ್ನು ಕಳುಹಿಸುವುದು ರೂಢಿಗೆ ಬಂದಿದೆ. ಆದರೆ ಇದು ನಿಯಮಕ್ಕೆ ವಿರುದ್ಧ. ಇದಕ್ಕೆ ವ್ಯಾಪಾರಸ್ಥರ ಆಶೋತ್ತರವೇ ಕಾರಣ. ಪದಾರ್ಥಗಳನ್ನು ರೈಲು ಮೂಲಕ ಕಳುಹಿಸಿ, ರೈಲ್ವೆ ರಸೀತಿಯನ್ನು ವಿ. ಪಿ. ಮೂಲಕ ಕಳುಹಿಸುವುದೂ ವಾಡಿಕೆಗೆ ಬಂದಿದೆ. ರೈಲಿನಲ್ಲೇ ಸಾಮಾನು ಹೆಚ್ಚು ಕಡಮೆಯಾದರೂ ಟಪ್ಪಾಲಾಫೀಸಿಗೆ ದೂರು ಬರುವುದು ತಪ್ಪುವುದಿಲ್ಲ.

ಕಳೆದ ವರ್ಷ ಮುಕ್ಕಾಲು ಕೋಟಿ ಪದಾರ್ಥಗಳು ವಿ. ಪಿ. ಮೂಲಕ ರವಾನೆಯಾಗಿ, ಅವುಗಳ ಮೌಲ್ಯವಾದ ಸುಮಾರು ೧೫ ಕೋಟಿ ೮೦ ಲಕ್ಷ ರೂಪಾಯಿಗಳನ್ನು ವಸೂಲ್ಮಾಡಿ ವ್ಯಾಪಾರಗಾರರಿಗೆ ಹಿಂದೂಸ್ಥಾನದ ಟಪ್ಪಾಲ್ ಇಲಾಖೆಯವರು ಕೊಟ್ಟರು.

ಮನಿ ಆರ್ಡರ್

೧೮೮೦ನೆಯ ವರ್ಷಕ್ಕೆ ಮುಂಚೆ ಸರ್ಕಾರದ ಖಜಾನೆಯವರು ಊರಿಂದೂರಿಗೆ ಹಣವನ್ನು ಕಳುಹಿಸುವ ಏರ್ಪಾಡನ್ನು ಇಟ್ಟಿದ್ದರು. ಅಂತಹ ವ್ಯವಸ್ಥೆಯನ್ನು ಈಗಲೂ ಮೈಸೂರು ಸೀಮೆಯ ಸರ್ಕಾರದವರು ಇಟ್ಟುಕೊಂಡಿರುವರು. ಒಂದೂರಿನಿಂದ ಮತ್ತೊಂದೂರಿಗೆ, ಒಬ್ಬನಿಂದ ಮತ್ತೊಬ್ಬನಿಗೆ ಹಣವನ್ನು ಕಳುಹಿಸುವ ಏರ್ಪಾಡಿಗೆ ಮನಿ ಆರ್ಡರ್ ಎಂದು ಹೆಸರು. ಇಂಡಿಯಾ ದೇಶದಲ್ಲೆಲ್ಲಾ ೨೮೩ ಖಜಾನೆಗಳು ಮಾತ್ರ ಇದ್ದುದರಿಂದ ಈ ಪದ್ಧತಿಯು ಜನಗಳಲ್ಲಿ ಹೆಚ್ಚು ರೂಢಿಗೆ ಬರಲಿಲ್ಲ; ಮತ್ತು ಕರೆನ್ಸಿ ನೋಟುಗಳನ್ನು ಟಪ್ಪಾಲ್ ಮುಖಾಂತರ ಕಳುಹಿಸುವುದೇ ಹೆಚ್ಚಾಗಿದ್ದಿತು. ೧೮೭೮ರಲ್ಲಿ ಈ ವ್ಯವಹಾರವನ್ನು ಸರ್ಕಾರದ ಖಜಾನೆಗಳಿಂದ ಪೋಸ್ಟ್ ಆಫೀಸಿಗೆ ಒಪ್ಪಿಸಬೇಕೆಂದು ಆಗಿನ ಡೈರೆಕ್ಟರ್ ಜನರಲ್‌ರು ಸೂಚಿಸಿದರು. ೫,೫೦೦ ಟಪ್ಪಾಲ್ ಆಫೀಸುಗಳು ಇರುವುದರಿಂದ ಜನಗಳಿಗೆ ಹೆಚ್ಚು ಸೌಕರ್ಯವಾಗುವುದಲ್ಲದೆ ದಿನೆ ದಿನೆ ವ್ಯವಹಾರವು ಹೆಚ್ಚುವುದೆಂದು ಅವರು ಒತ್ತಿ ಹೇಳಿದುದನ್ನು ಹಣಕಾಸಿನ ಇಲಾಖೆಯ ಅಧಿಕಾರಿಗಳು (Comptroller General) ನಿರೋಧಿಸಿದರು. ಆದರೂ ಕೂಡ ಸರ್ಕಾರದವರು ಈ ಸೂಚನೆಯನ್ನು ಅಂಗೀಕರಿಸಿ, ಇಂಡಿಯದ ಸ್ಟೇಟ್ ಸೆಕ್ರೆಟರಿಯವರ ಅನುಮತಿಯನ್ನು ಪಡೆದು ೧೮೮೦ನೆಯ ಜನವರಿಯಿಂದ ಟಪ್ಪಾಲ್ ಇಲಾಖೆಗೆ ಈ ವ್ಯವಹಾರವನ್ನು ವಹಿಸಿದರು. ಕಾಲಕ್ರಮೇಣ ವಿದೇಶಗಳಿಗೆ ಹಣವನ್ನು ಕಳುಹಿಸುವುದು ರೂಢಿಗೆ

ಬಂದಿತು. ಹೋದ ವರುಷದಲ್ಲಿ ಟಪ್ಪಾಲ್ ಆಫೀಸುಗಳ ಮುಖಾಂತರ ೮೨ ಕೋಟಿ ರೂಪಾಯಿಗಳ ಮೊಬಲಗಿನ ೪೨ ಕೋಟಿ ಮನಿ ಆರ್ಡರ್‌ಗಳು ಪಾವತಿ ಮಾಡಲ್ಪಟ್ಟವು. ಭೂಕಂದಾಯ (Revenue) ವನ್ನೂ ಬಾಡಿಗೆಯನ್ನೂ (Rent) ಕಳುಹಿಸುವ ಸಲುವಾಗಿ ಬೇರೆ ಬೇರೆ ಜಾತಿಯ ಮನಿ ಆರ್ಡರ್ ಫಾರಂಗಳನ್ನು ವಿಧಿಸಿದರು. ೧೮೮೬ರಲ್ಲಿ ಅಜಮಾಯಿಷಿಗೋಸ್ಕರ ಮನಿ ಆರ್ಡರುಗಳನ್ನು ವಿಳಾಸದಾರರ ಮನೆಗೆ ತೆಗೆದುಕೊಂಡು ಹೋಗಿ ಕೊಡುವ ಏರ್ಪಾಡನ್ನು ಜಾರಿಗೆ ತಂದರು. ಈ ಪದ್ಧತಿಗೆ, ಜರ್ಮನಿ ದೇಶಕ್ಕೆ ನಮ್ಮ ದೇಶವು ಋಣಿಯಾಗಿದೆ. ಈ ಏರ್ಪಾಡು ಬಹು ಸಮರ್ಪಕವಾಗಿ ಕಂಡುಬಂದಿತು. ಜನಗಳಲ್ಲಿ ಹೆಚ್ಚು ಮೆಚ್ಚುಗೆಯನ್ನು ಪಡೆದುದಲ್ಲದೆ, ಟಪ್ಪಾಲಾಫೀಸಿನಲ್ಲಿ ಹಣವನ್ನು ಶೇಖರಿಸುವುದರ ಆವಶ್ಯಕತೆಯನ್ನು ಕಮ್ಮಿಮಾಡಿ ಲೆಕ್ಕಗಳನ್ನು ಬೇಗ ಮುಗಿಸಲು ಸಹಕಾರಿಯಾಯಿತು.

೧೮೮೪ರಲ್ಲಿ ತಂತೀ ಮೂಲಕ ಮನಿ ಆರ್ಡರುಗಳನ್ನು ಕಳುಹಿಸುವ ವ್ಯವಸ್ಥೆಯು ಆಚರಣೆಗೆ ಬಂದಿತು. ಈ ಪದ್ಧತಿಯು ನಮ್ಮ ದೇಶದಲ್ಲಿ ಆರಂಭವಾದ ಐದು ವರ್ಷಗಳ ನಂತರ ಇಂಗ್ಲೆಂಡಿನಲ್ಲಿ ಜಾರಿಗೆ ಬಂದಿತು. ಈ ಪದ್ಧತಿಯು ಎಲ್ಲೆಲ್ಲಿಯೂ ವಂಚಕರಿಗೆ ಧನಾರ್ಜನೆ ಮಾಡಲು ಸಹಕಾರಿಯಾಯಿತು. ಕಾಶಿ, ರಾಮೇಶ್ವರ, ತಿರುಪತಿ ಮೊದಲಾದ ಯಾತ್ರಾಸ್ಥಳಗಳಲ್ಲಿ ಇವರು ಬಹುಮಟ್ಟಿಗೆ ಸುಳಿದಾಡುವರು. ಮಾರ್ಗದರ್ಶಕರಿಗಾಗಿ ಕಾದಿರುವ ಯಾತ್ರಿಕರು ಬಲು ಬೇಗನೆ ಈ ವಂಚಕರ ಬಲೆಗೆ ಬೀಳುವರು. ದಯಾಳುವಾದ

ಸ್ನೇಹಿತನಂತೆ ನಟಿಸಿ ಯಾತ್ರಿಕನ ಅಥವಾ ಪ್ರಯಾಣಿಕನ ಸಂಸಾರದ ವಿಚಾರವನ್ನೆಲ್ಲಾ ಉಪಾಯದಿಂದ ತಿಳಿದು, ಯಾತ್ರಿಕನ ಹಣವೆಲ್ಲಾ ಕಳುವಾಯಿತೆಂದು, ಅವನ ಹೆಸರಿನಲ್ಲಿ ಯಾತ್ರಿಕನ ಬಂಧುಗಳಿಗೆ ತಂತೀ ಸಮಾಚಾರವನ್ನು ಕಳುಹಿಸುವನು. ಇಂತಹ ಸಂದರ್ಭದಲ್ಲಿ ಸ್ವಲ್ಪವೂ ಸಂದೇಹಪಡದೆ, ಯಾತ್ರಿಕನಿಗೆ ತೊಂದರೆಯಾಗದಿರಲೆಂದು ಅವನ ಬಂಧುಗಳು ತಕ್ಷಣವೇ ತಂತೀ ಮನಿ ಆರ್ಡರ್ ಮೂಲಕ ಹಣವನ್ನು ಕಳುಹಿಸುವರು. ಈ ವಂಚಕನು ಉಪಾಯಾಂತರದಿಂದ ಹಣವನ್ನು ಟಪ್ಪಾಲಾಫೀಸಿನಿಂದ ಪಡೆದು ಪರಾರಿಯಾಗುವುದು ಸಾಮಾನ್ಯವಾಗಿದೆ. ಇಂತಹ ವಂಚನೆಗಳನ್ನು ತಪ್ಪಿಸಲು ಕಠಿಣ ನಿಯಮಗಳಿವೆ. ಅವುಗಳನ್ನು ಆಚರಣೆಗೆ ತಂದರೆ, ವಾಸ್ತವಿಕ ಸಂದರ್ಭದಲ್ಲಿಯೂ ಜನಗಳಿಗೆ ತೊಂದರೆಯಾಗುವುದು. ಆಯಾ ಸ್ಥಳಗಳಲ್ಲಿ ಗಣ್ಯರಾದ ಸ್ಥಳೀಯ ಮನುಷ್ಯರು ಗುರುತಿಸಿದ ಹೊರತು ಈ ತಂತೀ ಮನಿ ಆರ್ಡರುಗಳ ಹಣವನ್ನು ಪಾವತಿಮಾಡುವುದಿಲ್ಲ. ಅಷ್ಟೇ ಅಲ್ಲದೆ, ಸಾಕ್ಷ್ಯ ಕೊಡುವವನಿಂದ ಹಣವನ್ನು ಪಡೆಯುವವನ ವಿಳಾಸವನ್ನು ಬರೆಸಿಕೊಳ್ಳುವುದೂ ಉಂಟು. ಎಷ್ಟೇ ಎಚ್ಚರಿಕೆಯಿಂದ ಇದ್ದರೂ ಈ ವಂಚಕರ ಹಾವಳಿಯು ತಪ್ಪದು. ಇದರ ಸಲುವಾಗಿಯೇ ಈಗ ನಾಲ್ಕೈದು ವರ್ಷಗಳಿಂದ ಗುರ್ತೀಕರಿಸುವ (Identify) ಕಾರ್ಡುಗಳನ್ನು ಟಪ್ಪಾಲಾಫೀಸಿನವರು ಮಾರುತ್ತಾರೆ.

ಬಹುಮಟ್ಟಿಗೆ ಬಡವನು ತನ್ನ ಅಲ್ಪ ಹಣವನ್ನು ಊರಿಂದೂರಿಗೆ ಕಳುಹಿಸಲು ಟಪ್ಪಾಲಾಫೀಸಿನಲ್ಲಿಟ್ಟಿರುವಷ್ಟು

ಭರವಸೆಯು ನಮ್ಮ ಹಿಂದೂಸ್ಥಾನದಲ್ಲಲ್ಲದೆ ಬೇರೆ ಎಲ್ಲಿಯೂ ಇಲ್ಲ. ಕೇವಲ ಐದು ರೂಪಾಯಿಗಳನ್ನು ತಂತೀ ಮೂಲಕ ಮನಿ ಆರ್ಡರ್ ಕಳುಹಿಸುವುದೂ ಉಂಟು. ಹಣವನ್ನು ತಲಪಿಸುವ ಅನುಕೂಲ ಮತ್ತು ಜನಗಳಿಗೆ ಇರುವ ಪೂರ್ಣ ಭರವಸೆ–ಇವೇ ಇದಕ್ಕೆ ಕಾರಣ. ದೂರ ದೇಶದಲ್ಲಿ ದುಡಿಯುವ ಕೂಲಿಯವನು ತಾನು ಗಳಿಸಿದ ಹಣವನ್ನು ತನ್ನ ಹೆಸರಿಗೇ ಮನಿ ಆರ್ಡರ್ ಮಾಡಿ ತಾನು ಊರಿಗೆ ಬಂದ ನಂತರ ಹಣವನ್ನು ಪಡೆಯುವುದೂ ರೂಢಿಯಲ್ಲಿದೆ. ಈ ಮನಿ ಆರ್ಡರ್ ಪದ್ಧತಿಯು ನಮ್ಮ ದೇಶದಲ್ಲಿ ಜನ ಜೀವನದ ಮುಖ್ಯಾಂಶವಾಗಿದೆ ಎಂದರೂ ಉತ್ಪ್ರೇಕ್ಷೆಯಾಗಲಾರದು; ಸ್ನೇಹಿತರಿಗೆ ಸಹಾಯ ಮಾಡುವುದಕ್ಕೂ, ಶತ್ರುಗಳನ್ನು ಎದುರಿಸುವುದಕ್ಕೂ ಬಹು ಅನುಕೂಲವಾದದ್ದು. ಮನಿ ಆರ್ಡರ್ ರಸೀತಿಯು ಕೇವಲ ಒಂದು ಚೂರು ಕಾಗದವಾದರೂ, ನೂರು ಸಾಕ್ಷಿಗಳನ್ನಾದರೂ ಹಿಂದಟ್ಟಬಲ್ಲ ಮಹಿಮೆಯುಳ್ಳದ್ದು.

ಸೇವಿಂಗ್ಸ್ ಬ್ಯಾಂಕ್

ಜನರ ಸೌಕರ್ಯಕ್ಕೋಸ್ಕರ ಅನೇಕ ತರದ ಕಾರ್ಯಕಲಾಪಗಳು ಟಪ್ಪಾಲಾಫೀಸಿನ ಮೂಲಕ ನಡೆಯುತ್ತವೆ ಎಂದು ಹಿಂದೆ ಹೇಳಿದೆ. ಅವುಗಳ ಪೈಕಿ ಭಾಂಗಿ, ವಿ. ಪಿ. ಮತ್ತು ಮನಿ ಆರ್ಡರುಗಳು ನಿಜವಾಗಿ ಟಪ್ಪಾಲಿನ ಮುಖ್ಯ ಕರ್ತವ್ಯಗಳಲ್ಲದಿದ್ದರೂ ಬಹುಕಾಲದ ಉಪಯೋಗದಿಂದ ಅವುಗಳು ಈ ಇಲಾಖೆಯ ಅಂಶಗಳೆಂಬ ಭಾವನೆಯು ಬಂದಿರುತ್ತದೆ. ಮತ್ತೆ ಕೆಲವು ಕಾರ್ಯಗಳು ಟಪ್ಪಾಲ್

ಆಫೀಸಿನ ಮೂಲಕ ಜರುಗಿದರೂ ಅವುಗಳು ಅದಕ್ಕೆ ಸಂಬಂಧಪಟ್ಟುವಲ್ಲವೆಂಬುದು ಈಗಲೂ ಗೋಚರವಾಗುವುದು. ಇಂತಹ ವ್ಯವಹಾರಗಳನೇಕವಿವೆ. ಅವುಗಳ ಪೈಕಿ ಮುಖ್ಯವಾದುದು ಸೇವಿಂಗ್ಸ್ ಬ್ಯಾಂಕಿನ ಕಾರ್ಯ. ೧೮೮೨ನೆಯ ವರ್ಷಕ್ಕೆ ಮುಂಚೆ ಜನಗಳು ಹಣವನ್ನು ಉಳಿಸಲು ಅಥವಾ ಭದ್ರಪಡಿಸಲು ದೊಡ್ಡ ಪಟ್ಟಣಗಳಲ್ಲಿದ್ದ ಸರ್ಕಾರದ ಬ್ಯಾಂಕುಗಳಲ್ಲಿಡುತ್ತಿದ್ದರು. ಈ ಬ್ಯಾಂಕುಗಳ ಕೆಲಸವನ್ನು ಟಪ್ಪಾಲಾಫೀಸುಗಳಿಗೆ ವಹಿಸಬೇಕೆಂಬ ಸೂಚನೆ ಮಾಡಿದಾಗ ಕಂಟ್ರೋಲರ್ ಜನರಲ್‌ರು (Comptroller General) ಆಗಕೂಡದೆಂದು ವಿರೋಧಿಸಿದರು. ಆದರೂ ೧೮೮೨ರಲ್ಲಿ ಕಲ್ಕತ್ತಾ, ಬೊಂಬಾಯಿ ಮತ್ತು ಮದ್ರಾಸಿನ ಕೆಲವು ಮುಖ್ಯ ಪಟ್ಟಣಗಳು ಹೊರತು ಇತರ ಎಲ್ಲಾ ಟಪ್ಪಾಲಾಫೀಸುಗಳಲ್ಲೂ ಸೇವಿಂಗ್ಸ್ ಬ್ಯಾಂಕುಗಳನ್ನು ಸ್ಥಾಪಿಸಿದರು. ೧೮೮೬ರಲ್ಲಿ ಜಿಲ್ಲಾ ಬ್ಯಾಂಕುಗಳನ್ನು ತೆಗೆದುಹಾಕಿ, ಅವುಗಳಲ್ಲಿದ್ದ ಹಣವನ್ನೆಲ್ಲಾ ಪೋಸ್ಟಾಫೀಸಿಗೆ ತಂದರು. ೧೮೯೬ ರಿಂದ ಕಲ್ಕತ್ತ, ಬೊಂಬಾಯಿ ಮತ್ತು ಮದ್ರಾಸು ಊರುಗಳಲ್ಲಿಯೂ ಈ ಮಾರ್ಪಾಡಾಯಿತು. ಜನರು ಗಳಿಸಿದ ಹಣವನ್ನು ಭದ್ರವಾಗಿ ಕೂಡಿಡುವುದಕ್ಕೆ ಸುಲಭಮಾರ್ಗವನ್ನು ಕಲ್ಪಿಸಿ ಅವರಲ್ಲಿ ಮಿತವ್ಯಯವನ್ನು ಪ್ರೋತ್ಸಾಹಿಸುವುದಕ್ಕೆ ಸೇವಿಂಗ್ಸ್ ಬ್ಯಾಂಕುಗಳು ಕಾರಣವಾಗಿರುತ್ತವೆ.

೧೯೦೪ರಲ್ಲಿ ಠೇವಣಿದಾರರ ಲೆಕ್ಕದಲ್ಲಿ ಒಟ್ಟು ೧೩ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿದ್ದಿತು. ಸರ್ಕಾರದವರು ಈ ಅಪಾರವಾದ ಹಣದಲ್ಲಿ ತಮ್ಮ ಜವಾಬ್ದಾರಿಯ

ಪರಿಣಾಮವನ್ನು ಯೋಚಿಸತೊಡಗಿದರು. ಠೇವಣಿದಾರರೆಲ್ಲರೂ ತಮ್ಮ ಹಣವನ್ನು ಏಕಕಾಲದಲ್ಲಿ ಅಪೇಕ್ಷಿಸಿದರೆ ಸರ್ಕಾರಕ್ಕೆ ಹೊರೆ ಹೆಚ್ಚೀತೆಂಬ ಶಂಕೆಯು ಹುಟ್ಟಿ ಅದರ ರಕ್ಷಣಾರ್ಥವಾಗಿ ಒಂದು ಹೊಸ ನಿಯಮವನ್ನು ಹೊರಡಿಸಿದರು. ಆರು ತಿಂಗಳು ವಾಯಿದೆ ಕೊಟ್ಟು ವಾಪಸು ಪಡೆಯುವ ಹಣಕ್ಕೆ ಶೇಕಡಾ ನಾಲ್ಕು ಆಣೆ ಹೆಚ್ಚು ಬಡ್ಡಿ ಕೊಡುವುದಾಗಿ ಪ್ರಕಟಿಸಿದರು. ಆದರೆ ಇದು ಜನಗಳಿಗೆ ರುಚಿಸಲಿಲ್ಲ. ಆರು ತಿಂಗಳ ವರೆಗೆ ಹಣವನ್ನು ಬಿಟ್ಟಿರಲು ಒಪ್ಪುವುದಕ್ಕೆ ಸಾಕಾದಷ್ಟು ಆಶೆಯು ಇಲ್ಲದೆಹೋಯಿತು. ಈ ಇಲಾಖೆಯ ಕೆಲಸವಾದರೋ ಬಹುಮಟ್ಟಿಗೆ ಹೆಚ್ಚಿತು. ಠೇವಣಿದಾರರ ಒಟ್ಟು ಶಿಲ್ಕಿನ ಪೈಕಿ ಶೇಕಡಾ ಮೂರು ರೂಪಾಯಿಗಳು ಮಾತ್ರ ಈ ಆರು ತಿಂಗಳ ವಾಯಿದೆಗೆ ಒಳಪಟ್ಟದ್ದಿತು. ೧೯೦೮ರಲ್ಲಿ ಈ ಪದ್ಧತಿಯನ್ನು ವಜಾ ಮಾಡಿದರು. ೧೮೮೨ರಿಂದ ಇದುವರೆಗೂ ಒಂದೇ ಸಮನಾದ ಅಭಿವೃದ್ಧಿಯು ತೋರಿಬರುವುದು. ಎರಡು ಮೂರು ಸಲ ಮಾತ್ರ ಕ್ರಾಂತಿಗಳು (Raids) ಒದಗಿದುವು. ಅಂತಹ ಸಂದರ್ಭಗಳಾವುವೆಂದರೆ: ೧೮೮೫ರಲ್ಲಿನ ರಷ್ಯದ ಗಲಭೆ, ೧೮೯೬–೯೭ರಲ್ಲಿನ ಘೋರ ಕ್ಷಾಮ ಮತ್ತು ೧೯೦೭–೮ರಲ್ಲಿನ ರಾಜದ್ರೋಹಯುತವಾದ ಅಶಾಂತಿ.

ಸರ್ಕಾರದ ಆಧಾರಪತ್ರಗಳು

ಟಪ್ಪಾಲಾಫೀಸಿನ ಮೂಲಕ ಸರ್ಕಾರದ ಆಧಾರಪತ್ರಗಳನ್ನು ಕೊಳ್ಳುವ, ಮಾರುವ ಮತ್ತು ರಕ್ಷಣೆಯಲ್ಲಿಡುವ ಏರ್ಪಾಡು ಇರುತ್ತದೆ. ಅಂತಹ ಆಧಾರಪತ್ರಗಳ ಬಡ್ಡಿಯು

ಪೋಸ್ಟಾಫೀಸಿನ ಖಾತೆಗೆ ಆರು ತಿಂಗಳಿಗೊಂದಾವರ್ತಿ ಸೇರಿಸ ಲಾಗುತ್ತದೆ. ಇದರಿಂದ ಜನಗಳಿಗೆ ಬಹು ಅನುಕೂಲ.

ಕ್ಯಾಷ್ ಸರ್ಟಿಫಿಕೇಟ್

ಕಳೆದ ಯುದ್ಧದ ಕಾಲದಲ್ಲಿ ಟಪ್ಪಾಲ್ ಆಫೀಸಿನ ಮೂಲಕ ಕ್ಯಾಷ್ ಸರ್ಟಿಫಿಕೇಟ್ (Cash Certificate) ಗಳನ್ನು ಮಾರಾಟಕ್ಕೆ ತಂದರು. ಇವುಗಳಲ್ಲಿ ಬಡ್ಡಿಯನ್ನು ಅಸಲಿಗೆ ಸೇರಿಸಿ ಐದು ವರ್ಷಗಳನಂತರ ಪೂರಾ ಮೊಬಲಗು ಕೊಡಲ್ಪಡುವುದು. ೧೦, ೫೦, ೧೦೦, ೫೦೦ ಮತ್ತು ೧,೦೦೦ ರೂಪಾಯಿಗಳ ಸರ್ಟಿಫಿಕೇಟ್‌ಗಳನ್ನು ನಿಯಮಿತ ಮೊಬಲಗಿಗೆ ಕೊಳ್ಳಬಹುದು. ಈಚೆಗೆ ೨,೦೦೦, ೩,೦೦೦, ೪,೦೦೦ ಮತ್ತು ೫,೦೦೦ ರೂಪಾಯಿಗಳ ಸರ್ಟಿಫಿಕೇಟ್‌ಗಳನ್ನು ಆಚರಣೆಗೆ ತಂದಿರುವರು. ಈಗ ನಡೆಯುತ್ತಿರುವ ಯುದ್ಧದ ಸಹಾಯಾರ್ಥವಾಗಿ ಹತ್ತು ವರ್ಷಗಳನಂತರ ಹಣವನ್ನು ಪಡೆಯಬಹುದಾದ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ (Defence Savings Certificate) ಗಳನ್ನು ಪೋಸ್ಟಾಫೀಸಿನಿಂದ ಪಡೆಯಬಹುದು. ಈ ರೀತಿ ಹಣವನ್ನು ಲಾಭಕ್ಕಾಗಿ ಹಾಕುವ ವಿವಿಧ ಮಾರ್ಗಗಳು ಜನಗಳಿಗೆ ಆದರಣೀಯವಾಗಿವೆ.

ಕಳೆದ ವರ್ಷ ಠೇವಣಿದಾರರ ಸಂಖ್ಯೆಯು ೪೨೫ ಲಕ್ಷದಷ್ಟಿತ್ತು. ಇವರ ಖಾತೆಗಳ ಶಿಲ್ಕು ೮೨ ಕೋಟಿ ರೂಪಾಯಿಗಳವರೆಗೆ ಇದ್ದಿತು. ಅದೇ ವರ್ಷ ಟಪ್ಪಾಲಾಫೀಸುಗಳ ಮೂಲಕ ೨೪ ಕೋಟಿ ರೂಪಾಯಿಗಳ ಸರ್ಕಾರದ ಆಧಾರ ಪತ್ರಗಳನ್ನು ಜನಗಳು ಕೊಂಡುಕೊಂಡರು; ಮತ್ತು

೩೮ ಲಕ್ಷ ರೂಪಾಯಿಗಳ ಪತ್ರಗಳನ್ನು ಮಾರಿದರು. ಸುಮಾರು ೧೦ ಕೋಟಿ ರೂಪಾಯಿಗಳ ಪತ್ರಗಳನ್ನು ಟಪ್ಪಾಲಾಫೀಸಿನ ರಕ್ಷಣೆಯಲ್ಲಿಟ್ಟಿರುವರು.

ಜೀವವಿಮೆಯ ನಿಧಿ

೧೮೭೨ರಲ್ಲಿ, ಸರ್ಕಾರಕ್ಕೆ ಸಂಬಂಧಿಸಿದಂತೆ, ಒಂದು ಜೀವವಿಮೆಯ ಪದ್ಧತಿಯನ್ನು ಪ್ರಾರಂಭಿಸಬೇಕೆಂಬ ಸೂಚನೆಯಮೇಲೆ ಬಹಳ ಚರ್ಚೆ ನಡೆದು ಅದು ಅಂಗೀಕಾರ ವಾಗಲಿಲ್ಲ. ಒಂಬತ್ತು ವರ್ಷಗಳನಂತರ ೧೮೮೧ರಲ್ಲಿ ಈ ವಿಷಯದಲ್ಲಿ ಟಪ್ಪಾಲಾಫೀಸಿನ ಆಗಿನ ಡೈರೆಕ್ಟರ್ ಜನರಲ್‌ರು ಒತ್ತಾಯಪಡಿಸಿ ಇಂಡಿಯಾ ಸರ್ಕಾರದ ಮತ್ತು ಇಂಡಿಯದ ಸ್ಟೇಟ್ ಸೆಕ್ರೆಟರಿಯವರ ಅನುಮತಿಯನ್ನು ಪಡೆದು ೧೮೮೪ನೆಯ ಫೆಬ್ರುವರಿಯಲ್ಲಿ ಜೀವವಿಮೆಯನ್ನು ಆರಂಭಿಸಿದರು. ಮೊಟ್ಟಮೊದಲು ಈ ಜೀವವಿಮೆಯು ಪೋಸ್ಟಾಫೀಸ್ ನೌಕರರಿಗೆ ಮಾತ್ರ ಅನ್ವಯಿಸುತ್ತಿದ್ದಿತು. ೫೦ ರೂಪಾಯಿಗಳಿಗೆ ಕಡಮೆಯಿಲ್ಲದೆ ಮತ್ತು ೪,೦೦೦ ರೂಪಾಯಿಗಳಿಗೆ ಮೀರದಂತೆ ವಿಮಾ ಮಾಡಬಹುದಾದ ಏರ್ಪಾಡನ್ನು ಮಾಡಿದರು. ವಿಮಾದಾರರ ಕಂತು ಹಣ ವನ್ನು ಪ್ರತಿ ತಿಂಗಳಲ್ಲಿಯೂ ಸಂಬಳದಲ್ಲಿ ಹಿಡಿಯುತ್ತಿದ್ದರು. ಇದರ ಕಾಗದ ಪತ್ರಗಳಿಗೆ ಸ್ಟಾಂಪು ತೆರಿಗೆಯಿಲ್ಲ.

ಈ ಏರ್ಪಾಡು ಸುಲಲಿತವಾಗಿ ನಡೆಯಿತು. ೧೮೯೮ರಲ್ಲಿ ಸರ್ಕಾರದ ಎಲ್ಲಾ ನೌಕರರಿಗೂ ಈ ನಿಧಿಗೆ ಸೇರಲು ಅಂಗೀಕಾರವಿತ್ತರು. ಕಾಲಕ್ರಮೇಣ ಪರಿಮಿತಿಯನ್ನು ೨೦,೦೦೦ಕ್ಕೆ ಹೆಚ್ಚಿಸಿದರು. ಇಂಡಿಯಾ ಸರ್ಕಾರದ

ನೌಕರರಲ್ಲಿ ಇದು ಐಚ್ಛಿಕವಾದರೂ ಬಹುಮಟ್ಟಿಗೆ ರೂಢಿ ಬಂದಿದೆ. ಕಳೆದ ವರ್ಷದಲ್ಲಿ ಸುಮಾರು ೮೧ ಲಕ್ಷ ರೂಪಾಯಿ ಕಂತು ಹಣ ವಸೂಲಾಯಿತು. ೫೫ ಲಕ್ಷ ರೂಪಾಯಿಗಳನ್ನು ವಿಮಾದಾರರಿಗೆ ಅಥವಾ ಅವರ ವಾರಸುದಾರರಿಗೆ ಪಾವತಿ ಮಾಡಿದರು. ಒಟ್ಟು ಹಿಂದೂಸ್ಥಾನದ ಒಂದೇ ಒಂದು ಕಂಪೆನಿಯಲ್ಲಿ ಇದಕ್ಕೆ ಹೆಚ್ಚಿದ ಕಾರ್ಯಗಳು ನಡೆಯುತ್ತವೆ. ೧೯ ಕೋಟಿ ರೂಪಾಯಿಗಳಿಗೆ ಮೀರಿದ ಸುಮಾರು ೧ ಲಕ್ಷ ಪಾಲಿಸಿಗಳು ಈಗ ಜಾರಿಯಲ್ಲಿವೆ. ಒಟ್ಟು ಈ ನಿಧಿಯಲ್ಲಿ ಕಳೆದ ವರ್ಷದ ಆಖೈರಿನಲ್ಲಿ ೮½ ಕೋಟಿ ರೂಪಾಯಿಗಳ ಶಿಲ್ಕು ಇದ್ದಿತು.

ಸಾಮಾನ್ಯವಾಗಿ, ಎಲ್ಲಾ ವಿಮಾ ಕಂಪೆನಿಗಳಲ್ಲಿಯೂ ಸ್ತ್ರೀಯರ ಜೀವವಿಮೆಗೆ, ಅಬಲೆಯರೆಂಬ ಹೆಸರನ್ನು ಸಾರ್ಥಕಗೊಳಿಸುವುದಕ್ಕೋ ಎಂಬಂತೆ ಹೆಚ್ಚು ಕಂತು ಹಣವನ್ನು ವಸೂಲ್ಮಾಡುತ್ತಾರೆ. ಆದರೆ ಟಪ್ಪಾಲಿನ ಜೀವವಿಮೆಯಲ್ಲಿ ಹೆಂಗಸರಿಗೆ ಸಮಾನಾಧಿಕಾರವನ್ನು ಕೊಟ್ಟಿದೆ.

ಸೈನಿಕ ನಿವೃತ್ತಿವೇತನ (Military Pension)

ಪಂಜಾಬ್ ಪ್ರಾಂತ್ಯದಿಂದ ಸೈನ್ಯಕ್ಕೆ ಬಹಳ ಮಂದಿ ಸೇರಿರುವರೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಸೈನ್ಯದಿಂದ ನಿವೃತ್ತರಾದವರು ತಮ್ಮ ನಿವೃತ್ತಿವೇತನವನ್ನು ಪಡೆಯಲು ಬಹುದೂರ ಪ್ರಯಾಸಪಟ್ಟು ಹೋಗಬೇಕಾಗಿದ್ದಿತು. ೧೮೯೦ರಲ್ಲಿ ಟಪ್ಪಾಲಾಫೀಸಿನವರು ಈ ನಿವೃತ್ತಿವೇತನವನ್ನು ಬಟವಾಡೆ ಮಾಡುವ ಕೆಲಸವನ್ನು ವಹಿಸಿ

ಕೊಂಡರು. ಇದು ಪಂಜಾಬು ಮತ್ತು ವಾಯವ್ಯ ಪ್ರಾಂತ್ಯಗಳಲ್ಲಿ ಹೆಚ್ಚಾಗಿಯೂ ಸಿಂಧು, ಬೆಲೂಚಿಸ್ಥಾನ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಸ್ವಲ್ಪವಾಗಿಯೂ ಜಾರಿಯಲ್ಲಿರುತ್ತದೆ. ಕಳೆದ ವರ್ಷದಲ್ಲಿ ಸುಮಾರು ೧ ಲಕ್ಷ ೪೨ ಸಾವಿರ ಸೈನಿಕರ ನಿವೃತ್ತಿವೇತನವನ್ನು ಹಂಚಿದರು. ಹಾಗೆ ಹಂಚಿದ ಒಟ್ಟು ಮೊಬಲಗು ೧ ಕೋಟಿ ೭೨ ಲಕ್ಷ ರೂಪಾಯಿಗಳು. ೧೯೩೫ನೆಯ ಏಪ್ರಿಲ್ ವರೆಗೆ ಟಪ್ಪಾಲ್ ಆಫೀಸಿನಿಂದ ನಿವೃತ್ತರಾದವರು ತಮ್ಮ ವೇತನಕ್ಕೆ ಸಿವಿಲ್ ಟ್ರೆಜರಿಗಳಿಗೆ ಹೋಗಿ ಅಲೆಯಬೇಕಾಗಿತ್ತು ಎಂಬುದನ್ನು ಲಕ್ಷಿಸಿದರೆ, ಸ್ವಾರ್ಥದ ಕಡೆ ಮನಗೊಡದೆ ಜನಸೇವೆಯನ್ನು ಮೊದಲಿನಿಂದಲೂ ಈ ಇಲಾಖೆಯು ಕೈಗೊಂಡಿರುವುದಕ್ಕೆ ಈ ಒಂದು ನಿದರ್ಶನವೇ ಸಾಕಲ್ಲವೆ?

ಕ್ವಿನೀನಿನ ಮಾರಾಟ

ನಮ್ಮ ದೇಶದಲ್ಲಿ ಮಲೇರಿಯಾ ಜ್ವರವು ಬಹುಮಟ್ಟಿಗೆ ಹರಡಿ ಜನಗಳ ಅನಾರೋಗ್ಯಕ್ಕೆ ಕಾರಣವಾಗಿರುವುದು ಎಲ್ಲರಿಗೂ ತಿಳಿದೇ ಇದೆ. ಈ ಜ್ವರಕ್ಕೆ ಕ್ವಿನೀನು ಒಳ್ಳೆಯ ಔಷಧಿಯೆಂದು ಪಾಶ್ಚಾತ್ಯ ವೈದ್ಯರು ನಿರ್ಧರಿಸಿರುವರು. ಈ ಔಷಧವು ಎಲ್ಲರಿಗೂ ಸಿಗಬೇಕೆಂಬ ಉದ್ದೇಶದಿಂದ ಅದನ್ನು ಟಪ್ಪಾಲಾಫೀಸುಗಳಲ್ಲಿ ಮಾರಾಟಕ್ಕೆ ಇಟ್ಟಿರುತ್ತಾರೆ. ಹೋದ ವರ್ಷ ೧೬,೧೫೮ ಪೌಂಡುಗಳ ಕ್ವಿನೀನು ಈ ರೀತಿ ಮಾರಲ್ಪಟ್ಟಿತು; ಮತ್ತು ಆ ವ್ಯಾಪಾರದಿಂದ ಬಂದ ಮೊಬಲಗು ೩ ಲಕ್ಷ ೩೨ ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿದ್ದಿತು.

ಬಾನುಲಿ

ಆಕಾಶವಾಣಿಯ ಸಂಗೀತ ಸಮಾಚಾರಗಳನ್ನು Wireless Receiving Sets ಎಂಬ ಯಂತ್ರಗಳ ಮೂಲಕ ನಮ್ಮಲ್ಲಿ ಅನೇಕರು ಕೇಳುತ್ತಾರೆ. ಇಂತಹ ಯಂತ್ರಗಳನ್ನು ಇಟ್ಟುಕೊಂಡಿರಲು ಸರ್ಕಾರದ ಅನುಮತಿಯನ್ನು ಪಡೆಯಬೇಕು. ಅಂತಹ ಅನುಮತಿ ಪತ್ರ (Licence) ಗಳನ್ನು ಟಪ್ಪಾಲಾಫೀಸಿನಿಂದ ಪಡೆಯಬಹುದು. ಇದು ಬ್ರಿಟಿಷ್ ಇಂಡಿಯಕ್ಕೆ ಮಾತ್ರ ಅನ್ವಯಿಸುತ್ತದೆ. ಆಶ್ರಿತ ಸಂಸ್ಥಾನಗಳಲ್ಲಿ ಆಯಾ ಸಂಸ್ಥಾನಗಳ ಅಧಿಕಾರಿಗಳು ಈ ಅನುಮತಿ ಪತ್ರಗಳನ್ನು ಕೊಡುತ್ತಾರೆ. ಟಪ್ಪಾಲಾಫೀಸುಗಳಿಂದ ಪಡೆದ ಲೈಸೆನ್ಸ್‌ದಾರರು ಈಗ ಸುಮಾರು ೧ ಲಕ್ಷ ಜನರಿರುತ್ತಾರೆ.

ಇಷ್ಟೇ ಅಲ್ಲದೆ ಸರ್ಕಾರಕ್ಕೂ ಜನಸಮುದಾಯಕ್ಕೂ ಸಂಬಂಧವನ್ನುಂಟುಮಾಡಲು ಟಪ್ಪಾಲಾಫೀಸು ಬಹಳ ಕಾರ್ಯಕಾರಿಯಾಗುವುದು. ಹಿಂದಿನ ಯುದ್ಧದ ಸಮಯದಲ್ಲಿ ಒಂದು ರೂಪಾಯಿನ ನೋಟುಗಳಿದ್ದದ್ದು ಅನೇಕರ ನೆನಪಿನಲ್ಲಿರಬಹುದು. ಅಂತಹ ನೋಟುಗಳನ್ನಿಡಲು ಕಿತ್ತಾನಾರು (Canvas) ಚೀಲಗಳನ್ನು ತಯಾರಿಸಿ ಟಪ್ಪಾಲು ಆಫೀಸುಗಳಲ್ಲಿ ಮಾರಾಟಕ್ಕೆ ಇಟ್ಟಿದ್ದರು. ಈಗಲೂ ಯುದ್ಧದ ಸಹಾಯಾರ್ಥವಾಗಿ Seals ಎಂಬ ಹೆಸರಿನಿಂದ ಚೀಟಿಗಳನ್ನು ಮಾರಾಟಕ್ಕೆ ಇಟ್ಟಿರುತ್ತಾರೆ. ಆದರೆ ಈ ಚೀಟಿಗಳನ್ನು ಟಪ್ಪಾಲಾಫೀಸಿನ ತಲೆಚೀಟಿಗಳ ಜೊತೆಗೆ ಹಚ್ಚಬೇಕೆಂಬ ವಿಷಯವನ್ನು ನೆನಪಿನಲ್ಲಿಡುವುದು ಆವಶ್ಯಕ.

ಪಾಶ್ಚಾತ್ಯ ದೇಶಗಳಲ್ಲಿ ಬಂದೂಕಿನ, ಮೋಟಾರ್ ಗಾಡಿಗಳ ಮತ್ತು ನಾಯಿಯ ಲೈಸೆನ್ಸ್‌ಗಳನ್ನೂ ಕೂಡ ಟಪ್ಪಾಲಾಫೀಸುಗಳ ಮೂಲಕ ಪಡೆಯುವ ವಾಡಿಕೆ ಅಲ್ಲಲ್ಲಿರುತ್ತದೆ. ನಮ್ಮ ದೇಶದಲ್ಲಿಯೂ ಕೂಡ ರೈಲ್ವೆ ಟಿಕೆಟ್‌ಗಳನ್ನು ಟಪ್ಪಾಲ್ ಆಫೀಸುಗಳ ಮೂಲಕ ಮಾರಾಟಕ್ಕೆ ಇಡಬೇಕೆಂಬ ಸೂಚನೆಯು ಬಂದಿತ್ತು. ಆದರೆ ಆಗಿನ ಡೈರೆಕ್ಟರ್ ಜನರಲ್‌ರು ಅದು ಖಂಡಿತವಾಗಿ ಆಗಕೂಡದೆಂದೂ ಹಾಗೆ ಮಾಡಿದ್ದೇ ಆದರೆ ಟಪ್ಪಾಲಾಫೀಸಿನ ನಿಜಕಾರ್ಯಗಳು ಜರುಗಲು ಕುಂದಕವುಂಟಾಗುವುದೆಂದೂ ನಿರೋಧಿಸಿದರು.

೩. ಪೋಸ್ಟಾಫೀಸಿನ ಪೂರ್ವೋತ್ತರ

ಪೋಸ್ಟಾಫೀಸಿನ ಕೆಲಸವು ಯಾವುದಾದರೂ ಒಂದು ರೂಪದಿಂದ ಬಹುಕಾಲದಿಂದಲೂ ನಡೆದುಬಂದಿರುತ್ತದೆ ಎಂದು ಜಗತ್ತಿನ ಇತಿಹಾಸದಿಂದ ತಿಳಿಯಬರುತ್ತದೆ.

ಪೆರೂ ದೇಶದ ವಿಜಯದ ಚರಿತ್ರೆಯಲ್ಲಿ ಪ್ರೆಸ್‌ಕಾಟ್ಟನು ಆ ದೇಶದ ಅಸಾಧಾರಣವಾದ ರಸ್ತೆಗಳನ್ನು ವಿವರಿಸಿ, ಮುಖ್ಯ ದಾರಿಗಳಲ್ಲಿ ಟಪ್ಪಾಲನ್ನು ಒಯ್ಯುವುದಕ್ಕೆ ನಿಯಮಿಸಲ್ಪಟ್ಟಿದ್ದವರ ವಸತಿಗಾಗಿ ಸಣ್ಣ ಕಟ್ಟಡಗಳಿದ್ದುವೆಂದು ಹೇಳಿರುತ್ತಾನೆ. ಸುದ್ದಿಗಳನ್ನು ಬಾಯಿಯಿಂದಾಗಲಿ, ವಿವಿಧ ಗಾತ್ರಗಳ ಮತ್ತು ಬಣ್ಣಗಳ ಉಣ್ಣೆಯ ದಾರಗಳಿಂದಾಗಲಿ ಕಳುಹಿಸುತ್ತಿದ್ದರು. ಈ ದಾರಗಳ ದಪ್ಪ ಮತ್ತು ಬಣ್ಣ – ಇವುಗಳ ವ್ಯತ್ಯಾಸದಿಂದ ಅಕ್ಷರಗಳ ರಚನೆಯನ್ನು ಮಾಡಿಕೊಂಡಿದ್ದರು.

ಹಿಂದಿನ ಕಾಲದಲ್ಲಿ ಟಪ್ಪಾಲನ್ನು ಒಯ್ಯುವುದಕ್ಕೆ ಮಾಡಿದ್ದ ಎಲ್ಲಾ ವ್ಯವಸ್ಥೆಗಳಲ್ಲಿ ಕಲೀಫರು ಏರ್ಪಡಿಸಿದ್ದ ವ್ಯವಸ್ಥೆಯು ಬಹಳ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಅದಕ್ಕೂ ಮತ್ತು ಈಗಿನ ಕಾಲದ ಪದ್ಧತಿಗೂ ಅನೇಕ ಹೋಲಿಕೆಗಳಿರುವುದರಿಂದ ಅದು ಹೆಚ್ಚು ಆದರಣೀಯ ವಾಗಿರುತ್ತದೆ. ಕೆಲವು ಪ್ರದೇಶಗಳಲ್ಲಿ ಕುದುರೆಗಳ ಟಪ್ಪೆ ಗಳನ್ನು ಏರ್ಪಡಿಸಿದ್ದರು: ಸಿರಿಯಾ ಮತ್ತು ಅರೇಬಿಯಾ ದೇಶಗಳಲ್ಲಿ ಒಂಟೆಗಳಮೇಲೆ ಸವಾರಿಮಾಡಿ ಟಪ್ಪಾಲನ್ನು ತೆಗೆದುಕೊಂಡುಹೋಗುತ್ತಿದ್ದರು. ಪರ್ಷಿಯಾದಲ್ಲಿ ಪಾದ ಚಾರಿಗಳಾದ ಮನುಷ್ಯರೇ ಟಪ್ಪಾಲನ್ನು ಸಾಗಿಸುತ್ತಿದ್ದರು. ಆಗಿನ ಟಪ್ಪಾಲಾಫೀಸುಗಳಲ್ಲಿ ಆಯಾ ಸ್ಥಳಗಳಲ್ಲಿ ಜನರು ಹಾಕುವ ಕಾಗದ ಪತ್ರಗಳ ಮತ್ತು ಬೇರೆ ಊರುಗಳಿಂದ ಬರುವ ಕಾಗದ ಪತ್ರಗಳ ಸಂಖ್ಯೆ, ಪತ್ತೆ – ಇವುಗಳನ್ನು ಬೇರೆ ಬೇರೆ ಪಟ್ಟಿಗಳಲ್ಲಿ ನಮೂದಿಸುತ್ತಿದ್ದರು. ಈ ಪದ್ಧತಿಯು ನಮ್ಮ ದೇಶದಲ್ಲಿ ಕೆಲವು ವರ್ಷಗಳ ವರೆಗೆ ಆಚರಣೆಯಲ್ಲಿದ್ದಿತು. ಒಟ್ಟಿನಲ್ಲಿ ಟಪ್ಪಾಲಿನ ಕೆಲಸವು ರಾಜಕಾರ್ಯದ ಬಹು ಮುಖ್ಯವಾದ ಮತ್ತು ಸ್ವತಂತ್ರವಾದ ಅಂಗವೆಂದು ಗಣಿಸಲ್ಪಟ್ಟಿದ್ದಿತು.

೧೪ನೆಯ ಶತಮಾನದ ಮಧ್ಯಭಾಗದಲ್ಲಿ ಮಹಮ್ಮದ್ ಬಿನ್ ತೊಗಲಕ್‌ನ (Muhamad Bin Tugalukh) ಆಳ್ವಿಕೆಯಲ್ಲಿ ಸಂಚರಿಸಿದವರಲ್ಲೊಬ್ಬನು, ಆ ಕಾಲದಲ್ಲಿ ನಮ್ಮ ದೇಶದ ಪತ್ರವಾಹಕರ ಒಂದು ಗುಂಪು ಸುವ್ಯವಸ್ಥಿತ ವಾಗಿದ್ದಿತೆಂದು ಬರೆದಿರುತ್ತಾನೆ. ಈ ಪದ್ಧತಿಯು ರೋಮನ್

ಚಕ್ರಾಧಿಪತ್ಯದ ಪದ್ಧತಿಯನ್ನು ಹೋಲುತ್ತಿದ್ದಿತು. ಅವನು ಬರೆದಿರುವುದರ ಮುಖ್ಯ ಸಾರಾಂಶವನ್ನು ಈ ಕೆಳಗೆ ಕೊಟ್ಟಿದೆ:

"ಹಿಂದೂಸ್ಥಾನದಲ್ಲಿ ಎರಡು ಬಗೆಯ ಹರಿಕಾರರಿರುವರು; ಪಾದಚಾರರು ಮತ್ತು ಅಶ್ವಾರೂಢರು. ಮೈಲಿಗೆ ಒಬ್ಬೊಬ್ಬರು ಪಾದಚಾರಿಗಳೂ ನಾಲ್ಕು ಮೈಲಿಗೊಬ್ಬೊಬ್ಬ ಅಶ್ವಾರೂಢರೂ ಇರುತ್ತಾರೆ. ಹಳ್ಳಿಗಳು ಸಾಮಾನ್ಯವಾಗಿ ಅನೇಕ ಮೈಲಿಗಳ ದೂರದಲ್ಲಿವೆ. ಇಲ್ಲಿ ಹರಿಕಾರರು ತಮ್ಮ ಕೆಲಸದ ನಿಮಿತ್ತ ಸೊಂಟಕಟ್ಟಿ ಕಾದುಕೊಂಡಿರುವರು. ಪ್ರತಿಯೊಬ್ಬನ ನಡುವಿನಲ್ಲಿ ಈಟಿ ಇರುತ್ತದೆ. ಅದರ ಕೊನೆಯಲ್ಲಿ ಗಂಟೆಗಳು ತೂಗುಹಾಕಿರುತ್ತವೆ. ಒಂದು ಕೈಯಲ್ಲಿ ಅವನು ಟಪ್ಪಾಲು ಚೀಲವನ್ನು ಹಿಡಿದು, ಇನ್ನೊಂದರಲ್ಲಿ ಈಟಿಯನ್ನು ತಿರುಗಿಸುತ್ತ ಹೊರಡುವನು. ಒಂದು ಮೈಲಿ ನಡೆದು ಮುಂದಿನ ಪಹರೆಯ ಬಳಿ ಈಟಿಯ ಕೊನೆಗೆ ಕಟ್ಟಿರುವ ಗಂಟೆಯ ಶಬ್ದವನ್ನು ಕೇಳುತ್ತಲೇ ಅಲ್ಲಿ ಕಾದಿರುವ ಹರಿಕಾರನು ಈತನಿಂದ ಟಪ್ಪಾಲನ್ನು ತೆಗೆದುಕೊಂಡು ಮುಂದಿನ ನೆಲೆಗೆ ಹೊರಡುವನು. ಈ ತೆರನಾದ ವ್ಯವಸ್ಥೆಯಿಂದ ಸುಲ್ತಾನನಿಗೆ ಬೇಗನೆ ಸಮಾಚಾರವು ಮುಟ್ಟುವುದು."

ಬಹುಕಾಲದ ಹಿಂದೆ ಪ್ರಖ್ಯಾತವಾದ ದೇವಾಲಯಗಳಿಗೆ ಹೂವು ಹಣ್ಣುಗಳನ್ನು ಕೊಂಡೊಯ್ಯಲು ಈ ರೀತಿಯಾದ ಚಾರರ ಏರ್ಪಾಡಿದ್ದಿತೆಂದೂ ಅಂತಹದು ಉದಯಪುರದಿಂದ ಪುಷ್ಕರಕ್ಕೆ ಇದ್ದಿತೆಂದೂ "ಮರಾಟರ ಶಿಬಿರ ಪತ್ರಗಳು" ಎಂಬ ಕರ್ನಲ್ ಬ್ರೂಟನ್‌ರವರ ಪುಸ್ತಕದಿಂದ ತಿಳಿಯ ಬರುತ್ತದೆ. ಸನ್ ೧೬೭೩ರಲ್ಲಿ ಪಟ್ಟಾಭಿಷಿಕ್ತರಾದ ಮೈಸೂರಿನ

ಚಿಕ್ಕದೇವರಾಜ ಒಡೆಯರವರ ರಾಜ್ಯಾಡಳಿತದಲ್ಲಿ ಟಪ್ಪಾಲು ಸಂಸ್ಥೆಯ ವ್ಯವಸ್ಥೆಯು ಚೆನ್ನಾಗಿದ್ದಿತೆಂದು ಕರ್ನಲ್ ವಿಲ್ಕ್ಸ (Colonel Wilkes) ರವರ ಪುಸ್ತಕದಿಂದ ತಿಳಿಯಬರುತ್ತದೆ. ಕೇವಲ ಕಾಗದ ಪತ್ರಗಳನ್ನು ಒಯ್ಯುವುದಲ್ಲದೆ ಬೇರೆ ಕೆಲಸವೂ ಈ ಸಂಸ್ಥೆಗೆ ಸೇರಿತ್ತು. ಇದರ ಅಧಿಕಾರಿಗಳು ಆಯಾ ಪ್ರಾಂತ್ಯಗಳ ಒಳಗುಟ್ಟುಗಳನ್ನೆಲ್ಲಾ ರಾಜರಿಗೆ ತಿಳಿಸುವ ಗೂಢಚಾರರಾಗಿಯೂ ಇದ್ದರು.

ಮೈಸೂರಿನಲ್ಲಿ ಟಪ್ಪಾಲಿಗೆ ಅಂಚೆ ಎಂದು ಹೆಸರಿದ್ದಿತು. ಆ ಇಲಾಖೆಯ ಮುಖ್ಯಾಧಿಕಾರಿಯನ್ನು ಅಂಚೆ ಬಕ್ಷಿಯೆಂದು ಕರೆಯುತ್ತಿದ್ದರು. ಅಂಚೆಯ ಕೆಲಸವನ್ನು ಹೋಬಳಿ ಶಾಲೋಪಾಧ್ಯಾಯರಿಗೆ ವಹಿಸಿ ಅನೇಕ ಆಫೀಸುಗಳನ್ನು ೧೮೮೨ರ ಅನಂತರ ಹೆಚ್ಚಿಸಿದರು. ಈ ಅಲ್ಪ ಕೆಲಸಕ್ಕೆ ಸಂಬಳದ ಜೊತೆಗೆ ಮಾಸಾಶನವನ್ನೂ ಕೊಡುತ್ತಿದ್ದರು. ಆದರೆ ಟಪ್ಪಾಲು ಹಾಸಲೆಲ್ಲವನ್ನೂ ನಗದು ವಸೂಲುಮಾಡಿ ಸಂದ ಹಣಕ್ಕೆ ರಸೀತಿ ಕೊಡುವ ಪದ್ಧತಿ ಇತ್ತು. ಇದರ ಸಲುವಾಗಿ ಅನೇಕ ಲೆಕ್ಕಾಚಾರದ ಪುಸ್ತಕಗಳನ್ನು ಇಡಬೇಕಾಗಿದ್ದಿತು. ತಲೆಚೀಟಿಗಳನ್ನು ಉಪಯೋಗಕ್ಕೆ ತರುವ ಸಲಹೆಯನ್ನು ಆಚರಣೆಗೆ ತರಲು ಅನೇಕ ಕಷ್ಟಗಳು ಒದಗಿದುವು. ಬಹು ಚರ್ಚೆಯಾದನಂತರ ಇಂಡಿಯಾ ಸರ್ಕಾರದ ಟಪ್ಪಾಲಿನೊಡನೆ ಅಂಚೆಯು ೧೮೮೯ನೆಯ ಏಪ್ರಿಲ್‌ನಲ್ಲಿ ಮಿಳಿತವಾಗಿ, ಅಂಚೆಯ ಆಡಳಿತವನ್ನು ಟಪ್ಪಾಲ್ ಇಲಾಖೆಗೆ ವಹಿಸಿದರು. ಟಪ್ಪಾಲು ಬಾಬತ್ತಿನ ಖರ್ಚೆಲ್ಲವನ್ನೂ ಇಂಡಿಯಾ ಸರ್ಕಾರದವರು ವಹಿಸಬೇಕೆಂದೂ ಮೈಸೂರು

ಸೀಮೆಯ ಸರ್ಕಾರಿ ಕಾಗದ ಪತ್ರಗಳನ್ನೆಲ್ಲ ಸೀಮೆಯೊಳಗೆ ಹಾಸಲಿಲ್ಲದೆ ಸಾಗಿಸಬೇಕೆಂದೂ ಒಪ್ಪಂದವಾಯಿತು. ಇದರ ಸದ್ಯದ ಫಲಿತಾಂಶವು ಮೈಸೂರು ಸೀಮೆಗೆ ವರ್ಷಕ್ಕೆ ೬೦ ಸಾವಿರ ರೂಪಾಯಿಗಳ ಉಳಿತಾಯವಲ್ಲದೆ, ಜನಗಳಿಗೆ ಹೆಚ್ಚು ಸೌಕರ್ಯಗಳು ಕಲ್ಪಿತವಾದುವು.

ಅಕ್ಬರನು ಮುಖ್ಯ ಮಾರ್ಗಗಳಲ್ಲಿ ಹತ್ತು ಮೈಲಿಗಳಿಗೆ ಒಂದೊಂದರಂತೆ ನಿಲ್ದಾಣಗಳನ್ನು ಏರ್ಪಡಿಸಿ, ಎಲ್ಲಾ ಸ್ಥಳ ಗಳಲ್ಲಿಯೂ ವೇಗವಾಗಿ ಓಡುವ ತುರ್ಕಿ ಕುದುರೆಗಳ ನ್ನಿಟ್ಟನು. ಹದಿನೆಂಟನೆಯ ಶತಮಾನದ ಆದಿಯಲ್ಲಿ ನೂರು ಮೈಲಿಗಳಿಗಿಂತ ಹೆಚ್ಚಾಗಿ ಕಾಗದಗಳನ್ನು ಕಳುಹಿಸು ವುದು ಪ್ರಯಾಸವಾಗಿದ್ದಿತು. ಲಾರ್ಡ್ ಕ್ಲೈವನು (Lord Clive) ೧೭೬೬ರಲ್ಲಿ ಮೊದಲನೆಯ ಸಾರಿ ಸರಿಯಾದ ಪೋಸ್ಟ್ ಇಲಾಖೆಯನ್ನು ಸ್ಥಾಪಿಸಿದನು. ಪತ್ರಗಳನ್ನು ಸಾಗಿಸುವುದಕ್ಕಾಗಿ ಆಯಾ ಸ್ಥಳಗಳ ಜಮೀನ್ದಾರರೇ ಹರಿ ಕಾರರನ್ನು ಹವಣಿಸಬೇಕಾಗಿದ್ದಿತು. ಇದಕ್ಕೆ ಪ್ರತಿಯಾಗಿ ಕಂದಾಯದಲ್ಲಿ ಸ್ವಲ್ಪ ರಿಯಾಯತಿ ಇತ್ತು. ವಾರನ್ ಹೇಸ್ಟಿಂಗ್ಸನ (Warren Hastings) ಕಾಲದಲ್ಲಿ ಹಿಂದೂ ಸ್ಥಾನದ ಆಡಳಿತವು ಹೆಚ್ಚಾಗಿ ಭದ್ರಪಡಿಸಲ್ಪಟ್ಟಿತು. ಪೋಸ್ಟ್ ಮಾಸ್ಟರ್ ಜನರಲ್ (Postmaster General) ಎಂಬೊಬ್ಬ ಅಧಿಕಾರಿಯನ್ನು ನಿಯಮಿಸಿ, ಸರ್ಕಾರಕ್ಕೆ ಸಂಬಂಧಪಡದ ಕಾಗದಗಳ ಮೇಲೆ ಹಾಸಲನ್ನು ಮೊದಲ ನೆಯ ಸಾರಿ ವಿಧಿಸಿದರು. ಕಾಗದಗಳಿಗೆ ನೂರು ಮೈಲಿ ಗಳಿಗೆ ಎರಡಾಣೆಯಂತೆ, ಆರಂಭದ ಹಾಸಲಾಗಿದ್ದಿತು.

ಮುಂದಿನ ಶತಮಾನಾರ್ಧದಲ್ಲಿ ಈ ಇಲಾಖೆಯ ಆಡಳಿತವಾಗಲಿ, ಅಭಿವೃದ್ಧಿಯಾಗಲಿ ಹೆಚ್ಚು ಗಮನಕ್ಕೆ ಬರಲಿಲ್ಲ. ೧೮೫೦ರಲ್ಲಿ ಪೋಸ್ಟಾಫೀಸಿನ ಉಪಯೋಗವನ್ನು ಅಭಿವೃದ್ಧಿಪಡಿಸಿ ಜನಗಳಿಗೆ ವಿಶೇಷವಾದ ಅನುಕೂಲಗಳನ್ನು ಕಲ್ಪಿಸುವ ಉದ್ದೇಶದಿಂದ ಸರಕಾರದವರು ಒಂದು ವಿಚಾರಣಾ ಸಮಿತಿಯನ್ನು ಏರ್ಪಡಿಸಿದರು. ಆ ಸಮಿತಿಯವರು ಆಗಿನ ಪೋಸ್ಟಾಫೀಸುಗಳ ಕೊರತೆಗಳನ್ನು ಕೂಲಂಕಷವಾಗಿ ವಿಮರ್ಶೆ ಮಾಡಿರುವರು. ಈಗಿನ ಪೋಸ್ಟಾಫೀಸಿನ ಸಕಲ ಅಡಳಿತವೂ ಈ ಸಮಿತಿಯವರ ವರದಿಯನ್ನೇ ಅವಲಂಬಿಸಿರುತ್ತದೆ. ಇವರ ವರದಿಯಿಂದ ತಿಳಿದುಬರುವ ಮುಖ್ಯಾಂಶಗಳನ್ನು ಕೆಳಗೆ ಕೊಟ್ಟಿದೆ:

(೧) ದೂರವನ್ನು ಲೆಕ್ಕಿಸದೆ ಒಂದೇ ಸಮನಾದ ಹಾಸಲನ್ನು ವಿಧಿಸುವುದರ ಆವಶ್ಯಕತೆ.

(೨) ತಲೆಚೀಟಿ (Stamps) ಗಳನ್ನು ಅಂಟಿಸಿ ಕಾಗದಗಳ ಹಾಸಲನ್ನು ಮುಂಗಡವಾಗಿ ವಸೂಲು ಮಾಡುವುದು.

(೩) ಮೊದಲು ಕೊಡಬೇಕಾದ ಹಾಸಲನ್ನು (Initial Postage) ಆದಷ್ಟು ಕಡಮೆ ಮಾಡುವುದು.

(೪) ಪೋಸ್ಟ್ ಆಫೀಸಿನ ಆಡಳಿತವನ್ನು ಸಾಮ್ರಾಜ್ಯ ಸರ್ಕಾರಕ್ಕೆ ಸೇರಿಸಿ ಡೈರೆಕ್ಟರ್ ಜನರಲ್ ಎಂಬ ಮುಖ್ಯಾಧಿಕಾರಿಯ ಅಧೀನದಲ್ಲಿ ಪ್ರಾಂತಿಕ ಮುಖ್ಯಾಧಿಕಾರಿಗಳು (Postmaster General) ತಮ್ಮ ಪ್ರಾಂತದ ವಿಷಯಗಳಿಗೆ

ಜವಾಬ್ದಾರಿಯನ್ನು ವಹಿಸುವುದು. ಈ ಪ್ರಾಂತಿಕ ಅಧಿಕಾರಿಗಳಿಗೂ ಸ್ಥಳೀಯ ಸರ್ಕಾರಕ್ಕೂ ಯಾವ ಸಂಬಂಧವೂ ಇರಕೂಡದು.

(೫) ನೌಕರರ ಉಪಯೋಗಕ್ಕಾಗಿ ಸೂತ್ರಗಳ ಕೈಪಿಡಿಯನ್ನು ತಯಾರಿಸುವುದು.

ಈ ಸಮಿತಿಯ ವರದಿಯು ೬೦೦ ಪುಟಗಳನ್ನು ಮೀರಿದೆ. ಇದರ ಅವತರಣಿಕೆಯಲ್ಲಿ ಬಹಳ ಉಪಯುಕ್ತಾಂಶಗಳು ಗೋಚರಕ್ಕೆ ಬರುತ್ತವೆ. ಅವುಗಳಲ್ಲಿ ಕೆಲವನ್ನು ಕೆಳಗೆ ಸಂಗ್ರಹಿಸಿ ಕೊಟ್ಟಿದೆ.

ಪೋಸ್ಟ್ ಆಫೀಸು ಜನಗಳ ಅನುಕೂಲಕ್ಕಾಗಿಯೇ ಸ್ಥಾಪಿತವಾದುದು. ಸುಧಾರಣೆಗಳೆಲ್ಲವೂ ಈ ಅಭಿಪ್ರಾಯವನ್ನೇ ಅವಲಂಬಿಸಿವೆ. ಸರ್ಕಾರಕ್ಕೆ ಹೆಚ್ಚು ಆದಾಯ ತರುವುದಕ್ಕಾಗಿ ಈ ಸಂಸ್ಥೆಯನ್ನು ಏರ್ಪಡಿಸಿಲ್ಲ. ಆರ್ಥಿಕ ಪರಿಸ್ಥಿತಿಯ ಬಿಕ್ಕಟ್ಟಿನಿಂದ ಈ ಧ್ಯೇಯಕ್ಕೆ ವಿರುದ್ಧವಾಗಿ ನಡೆಯಲು ಎಷ್ಟೋ ಸಮಯಗಳು ಒದಗಿದರೂ, ಒಂದೇ ಸಮನಾಗಿ ಈ ಧ್ಯೇಯವನ್ನೇ ಅನುಸರಿಸಿಕೊಂಡು ಬಂದಿರುವುದು ಇಂಡಿಯಾ ಸರ್ಕಾರದ ಮಹತ್ವವೇ ಸರಿ.

ಆ ಕಾಲದಲ್ಲಿ ಜನಗಳಿಗೆ ಇದ್ದ ಅಡಚಣೆಗಳನ್ನು ಅವಗಾಹನೆಗೆ ತರುವುದು ಕಷ್ಟ. ಜನಗಳ ದಾರಿದ್ರ್ಯವು ಮುಖ್ಯವಾದುದು. ಈ ವಿಚಾರದಲ್ಲಿ ಸಮಿತಿಯವರ ವರದಿಯಲ್ಲಿ ಸದಸ್ಯರ ಅಭಿಪ್ರಾಯವು ಗಮನಾರ್ಹವಾದುದು :

"ಇಂಡಿಯಾ ದೇಶದ ವಿದ್ಯಮಾನಕ್ಕನುಗುಣವಾಗಿಯೂ ಜನಗಳಿಗೆ ಹೆಚ್ಚು ಅನುಕೂಲವಾಗುವಂತೆಯೂ ಟಪ್ಪಾಲ್

ಹಾಸಲನ್ನು ವಿಧಿಸುವ ಮಾರ್ಗವನ್ನು ಹುಡುಕುವಾಗ, ನಾವು ಜನಗಳ ಸಾಮಾಜಿಕ ಸ್ಥಿತಿ, ಈ ದೇಶದ ವಾಣಿಜ್ಯ, ಇಲಾಖೆಯ ಮುಂದಿನ ಆರ್ಥಿಕ ಅಭಿವೃದ್ಧಿ ಮತ್ತು ಆಂಗ್ಲೇಯರಿಗೂ ದೇಶೀಯರಿಗೂ ಇರುವ ಜೀವನದ ವ್ಯತ್ಯಾಸ– ಇವುಗಳೆಲ್ಲವನ್ನೂ ಗಮನಿಸಬೇಕು. ಹಿಂದೂ ಸ್ಥಾನದಲ್ಲಿ ಆಂಗ್ಲೇಯರು ವಿರಳ. ಇರುವ ಹಲವರು ವಿದ್ಯಾವಂತರು ಮತ್ತು ಧನವಂತರು. ಅವರು ಅಭ್ಯಾಸದಿಂದಲೂ ಇಚ್ಛೆಯಿಂದಲೂ ಸಾಮಾಜಿಕ ವಿಷಯಗಳಲ್ಲಿ ಪತ್ರವ್ಯವಹಾರ ನಡೆಸುವರು. ಅವರು ಅಲ್ಲಲ್ಲಿ ಗುಂಪುಗುಂಪಾಗಿ ಸೇರುವುದರಿಂದ ಈ ವ್ಯವಹಾರಕ್ಕೆ ವಿಶೇಷ ಅನುಕೂಲಗಳಿವೆ. ಅಲ್ಲದೆ ಖರ್ಚಿಗೆ ಹಿಂತೆಗೆಯುವುದಿಲ್ಲ. ಅಲ್ಪ ಸ್ವಲ್ಪ ತೂಕ ವ್ಯತ್ಯಾಸದಿಂದ ಆಗಬಹುದಾದ ಉಳಿತಾಯದ ಕಡೆ ಗಮನ ಕೊಡುವುದಿಲ್ಲ. ದೇಶೀಯರಾದರೋ ಅಪರಿಮಿತ ಸಂಖ್ಯಾಕರು. ಆಂಗ್ಲೇಯನೊಬ್ಬನಿಗೆ ಎರಡು ಸಾವಿರಕ್ಕೆ ಕಮ್ಮಿ ಇಲ್ಲದಂತೆ ದೇಶೀಯರಿರುವರು. ಇವರಲ್ಲಿ ಬುದ್ಧಿವಂತರೂ ಓದುಬರಹ ಬಂದವರೂ ಬಹು ಕಡಮೆ. ಹೀಗಿದ್ದರೂ ಪ್ರತಿಯೊಬ್ಬ ಆಂಗ್ಲೇಯನಿಗೂ ಸುಮಾರು ಇಪ್ಪತ್ತು ಮಂದಿ ದೇಶೀಯರು ಸಹಾಯವನ್ನು ಅಪೇಕ್ಷಿಸದೆಯೆ ಪತ್ರವ್ಯವಹಾರವನ್ನು ಮಾಡಬಲ್ಲರು. ಆದರೆ ಇವರಿಗಿರುವ ಅನಾನುಕೂಲಗಳೆರಡು – ಟಪ್ಪಾಲು ಹಾಸಲು ಅವರ ಶಕ್ತಿಯನ್ನು ಮೀರಿರುವುದು; ಕಾಗದಗಳು ಎಲ್ಲಿಯೋ ಕಳೆದುಹೋಗುವುವೆಂಬ ಭಯ. ಇವರು ಬಡವರು. ಪತ್ರವ್ಯವಹಾರದಲ್ಲಿ ಅಭಿರುಚಿಯಿದ್ದರೂ ದೂರದೇಶಗಳ ಹಾಸಲು ಹೆಚ್ಚಿರುವುದರಿಂದಲೂ, ಟಪ್ಪಾಲ್

ಆಫೀಸುಗಳು ದೂರಬಾರದಲ್ಲಿರುವುದರಿಂದಲೂ, ಇದರಿಂದ ಉಂಟಾಗುವ ತೊಂದರೆ, ಖರ್ಚು, ಅನಿಶ್ಚಿತತೆ ಮತ್ತು ಪ್ರಾಯಶಃ ನಷ್ಟ–ಇವೆಲ್ಲವೂ ಈ ಪತ್ರವ್ಯವಹಾರದಲ್ಲಡಗಿರುವುದು. ಆಂಗ್ಲೇಯರೆಲ್ಲರೂ ಸಾಮಾನ್ಯವಾಗಿ ಸರ್ಕಾರಿ ಉದ್ಯೋಗಿಗಳು. ಅವರಿಗೆ ತಮ್ಮ ಸ್ವಂತ ವಿಷಯಗಳಲ್ಲದೆ ಪತ್ರವ್ಯವಹಾರಕ್ಕೆ ಕಾರಣವಿಲ್ಲ. ಸ್ಥಳೀಕರಾದರೊ ಎಲ್ಲರೂ ವ್ಯಾಪಾರಿಗಳು. ವ್ಯಾಪಾರ ಸಂಬಂಧವಾದ ಪತ್ರವ್ಯವಹಾರವು ಇವರಲ್ಲಿ ಬಹು ಹೆಚ್ಚು. ಆದುದರಿಂದ ಇಲ್ಲಿನ ಆಂಗ್ಲೇಯರಿಗಿಂತ ಸ್ಥಳೀಕರಿಗೆ ಪೋಸ್ಟಾಫೀಸಿನ ಆವಶ್ಯಕತೆಯು ಹೆಚ್ಚಾಗಿದೆ. ತಿರುಗಾಡುವ ಮಾರ್ಗಗಳು, ವ್ಯಾಪಾರಾಭಿವೃದ್ಧಿ, ಜನಗಳಲ್ಲಿ ಅರಿವು–ಇವು ಹೆಚ್ಚಿದ ಹಾಗೆಲ್ಲಾ ಪತ್ರವ್ಯವಹಾರವು ಇಲ್ಲಿನ ಜನಗಳಲ್ಲಿ ಹೆಚ್ಚುವುದು. ಇಷ್ಟಾದರೂ ಅವರು ಕಾಗದಗಳಿಗಾಗಿ ಎಷ್ಟು ಹಣವನ್ನು ವ್ಯಯಮಾಡಬಲ್ಲರೆಂಬುದನ್ನು ನಾವು ಗಮನಿಸಬೇಕು. ಅವರು ಬಡವರಾದುದರಿಂದ ಆದಷ್ಟು ಹಾಸಲನ್ನು ಕಡಮೆ ಮಾಡಿಕೊಳ್ಳಲು ಬಹಳ ಪ್ರಯತ್ನಿಸಿ, ಕಾಗದಗಳನ್ನು ಕ್ಲುಪ್ತವಾದ ತೂಕದೊಳಗೆ ಕಳುಹಿಸುವರು. ಇಲಾಖೆಯವರು ಈ ಹಾಸಲನ್ನು ಕಡಮೆ ಮಾಡುವವರೆಗೂ ಇಲ್ಲಿನ ಜನಗಳು ಹೆಚ್ಚು ವ್ಯಯಕ್ಕೆ ಬೆದರಿ ದೂರದೇಶಗಳೊಡನೆ ಪತ್ರವ್ಯವಹಾರವನ್ನು ಬಿಟ್ಟೇಬಿಡಬಹುದು."

ಈ ಮೇಲಿನ ಅಂಶಗಳಿಂದ ಸಮಿತಿಯ ಸದಸ್ಯರ ಉದಾರ ಭಾವವು ವ್ಯಕ್ತವಾಗುವುದು. ಅವರು ನಿಜವಾಗಿಯೂ ಸಾಮ್ರಾಜ್ಯಹಿತೈಷಿಗಳು. ಜನಸಮುದಾಯದಲ್ಲಿ

ಅನೇಕರಿಗೆ ಬಹಳ ಅನುಕೂಲಗಳನ್ನು ಮಾಡಬೇಕೆಂಬ ನೀತಿಯನ್ನೇ ಅನುಸರಿಸಿರುವರು. ಅವರ ಹೆಸರುಗಳು ಈಗ ಜ್ಞಾಪಕದಲ್ಲಿಲ್ಲದಿದ್ದರೂ ಅವರ ಶ್ರಮವು ಈಗಿನ ಹಿಂದೂಸ್ಥಾನದ ಪೋಸ್ಟ್ ಆಫೀಸ್ ಎಂಬ ಸುವ್ಯವಸ್ಥಿತ ಸಂಸ್ಥೆಯಲ್ಲಿ ಪರಿಣಮಿಸಿದೆ.

೪. ಟಪ್ಪಾಲು ಹಾಸಲು ದರಗಳು, ತಲೆಚೀಟಿಗಳು ಮತ್ತು ಮುದ್ರೆಗಳು

A. Postage Rates. B. Postage Stamps and C. Post markings

ಟಪ್ಪಾಲು ಹಾಸಲಿನ ದರಗಳು

ಟಪ್ಪಾಲು ಹಾಸಲಿನ ನಿಯಮಗಳಲ್ಲಿ ನಾಲ್ಕು ಅಂಶಗಳನ್ನು ವಿಮರ್ಶಿಸಬೇಕು. ಮೊದಲನೆಯದು ಪದಾರ್ಥದ ತೂಕ. ಎರಡನೆಯದು ದೂರ ಅಂದರೆ ಎಷ್ಟು ದೂರ ಸಾಗಿಸಬೇಕೆಂಬುದು. ಮೂರನೆಯದು ಪದಾರ್ಥದ ಪ್ರಕಾರ ಅಥವಾ ಸ್ವಭಾವ. ನಾಲ್ಕನೆಯದು ವಾಹನ ಅಂದರೆ ಯಾವ ಮಾರ್ಗವಾಗಿ ರವಾನೆಯಾಗುವುದೆಂಬುದು. ಈ ನಾಲ್ಕರ ಪೈಕಿ ಎರಡನೆಯದು ಬಹಳ ಅಲ್ಪವಾದುದೆಂದೂ ಮತ್ತು ಗಣನೀಯವಾದುದಲ್ಲವೆಂದೂ ರೌಲೆಂಡ್ ಹಿಲ್ (Rowland Hill) ಎಂಬ ಮಹನೀಯನು ತೋರಿಸಿಕೊಟ್ಟನು. ಇದರ ವಿಚಾರ ಮುಂದೆ ವಿಶದವಾಗಿ ಹೇಳಲ್ಪಡುತ್ತದೆ.

೧೮೩೭ನೆಯ ಸಾಲಿನಲ್ಲಿ ೧೭ನೆಯ ನಿಬಂಧನೆಯಂತೆ ಸರ್ಕಾರದವರು ಕಾಗದಗಳನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುವ ಸಂಪೂರ್ಣವಾದ ಹಕ್ಕನ್ನು ವಹಿಸಿಕೊಂಡರು. ಈ ನಿಬಂಧನೆಯನ್ನು ಉಲ್ಲಂಘಿಸಿ ಕಾಗದಗಳನ್ನು ಸಾಗಿಸಿದರೆ ಪ್ರತಿ ಕಾಗದಕ್ಕೂ ೫೦ ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿದರು. ಈ ನಿಬಂಧನೆಯು ಈಗಲೂ ಜಾರಿಯಲ್ಲಿದೆ. ಆ ಕಾಲದಲ್ಲಿ ತೂಕ ಮತ್ತು ದೂರ ಎರಡನ್ನೂ ಗಣನೆಗೆ ತಂದುಕೊಂಡು ಹಾಸಲನ್ನು ಈ ಕೆಳಗಿನ ರೀತಿ ವಿಧಿಸಿದರು :

೨೦ ಮೈಲಿ ದೂರದೊಳಗೆ	೧ ತೊಲಕ್ಕೆ	ಮೀರದ	ಕಾಗದಕ್ಕೆ	ಹಾಸಲು	೧ಆ.
೫೦	”	”	”	”	೨
೧೦೦	”	”	”	”	೩
	ಪ್ರತಿ ೫೦ ಮೈಲಿಗೆ ೧ ಆಣೆ ಹೆಚ್ಚು				
೩೦೦	”	”	”	”	೬
	ಪ್ರತಿ ೧೦೦ ಮೈಲಿಗೆ ೧ ಆಣೆ ಹೆಚ್ಚು				
೧೦೦೦	”	”	”	”	೧೪
	ಪ್ರತಿ ೨೦೦ ಮೈಲಿಗೆ ೧ ಆಣೆ ಹೆಚ್ಚು				
೧೪೦೦	”	”	”	”	೧ ರೂ.

ಒಂದು ತೊಲಕ್ಕೆ ಮೀರಿದ ಕಾಗದಗಳಿಗೆ ಪ್ರತಿ ಹೆಚ್ಚಿನ ತೊಲಕ್ಕೂ ಅಥವಾ ಅದರ ಅಂಶಕ್ಕೂ ಮೊದಲಿನಂತೆಯೇ ಹಾಸಲನ್ನು ಕೊಡಬೇಕಾಗಿದ್ದಿತು. ಬೆಂಗಳೂರಿನಿಂದ ಮದ್ರಾಸಿಗೆ ಕಾಗದ ಕಳುಹಿಸಲು ೭ ಆಣೆಗಳನ್ನು ಕೊಡಬೇಕಾಗಿದ್ದಿತು. ಬೊಂಬಾಯಿನಿಂದ ಕಲ್ಕತ್ತೆಗೆ ಸುಮಾರು ಒಂದು ರೂಪಾಯಿಯನ್ನು ಖರ್ಚುಮಾಡಬೇಕಾಗಿದ್ದಿತು.

ಆಗಲೂ ವೃತ್ತಾಂತ ಪತ್ರಿಕೆಗಳಿಗೂ ಅಚ್ಚು ಹಾಕಿದ ಕಾಗದಗಳಿಗೂ ದರಗಳಲ್ಲಿ ರಿಯಾಯಿತಿಯನ್ನು ತೋರಿಸಿದ್ದರು. ೧೮೫೪ರಲ್ಲಿ ದೂರವನ್ನು ಗಮನಿಸದೆ ಬರಿಯ ತೂಕ ಪ್ರಕಾರ ಹಾಸಲನ್ನು ಕಾಗದಗಳಿಗೆ ವಿಧಿಸಿದರು. ಆಗಲೂ ಭಾಂಗಿಗಳನ್ನು ಸಾಗಿಸುವ ವಿಚಾರದಲ್ಲಿ ದೂರವನ್ನು ಲೆಕ್ಕಿಸುತ್ತಿದ್ದರು. ಆಗ ಈ ಕೆಳಗೆ ತೋರಿಸಿರುವಂತೆ ಭಾಂಗಿಗಳಿಗೆ ಹಾಸಲು ವಿಧಾಯಕವಾಗಿತ್ತು.

	೨೦ ತೊಲದ ಒಳಗಿದ್ದರೆ			೧೦೦ ಅಥವಾ ಪ್ರತಿ ೧೦೦ ಅಥವಾ ಭಿನ್ನಾಂಶ ತೊಲಕ್ಕೆ		
೧೦೦ ಮೈಲಿ ಮೀರದಿದ್ದರೆ	೦	೨	೦	೦	೪	೦
೧೨೦೦ ,, ,, ...	೧	೮	೦	೩	೦	೦
೧೨೦೦ ,, ಮೀರಿದ್ದರೆ	೧	೧೪	೦	೩	೧೨	೦

ಒಂದು ಸಣ್ಣ ಭಾಂಗಿಯನ್ನು ಬೆಂಗಳೂರಿನಿಂದ ಕಲ್ಕತ್ತೆಗೆ ಕಳುಹಿಸಲು ಒಂದು ರೂಪಾಯಿ ಹದಿನಾಲ್ಕು ಆಣೆಗಳನ್ನು ಖರ್ಚುಮಾಡಬೇಕಾಗಿದ್ದಿತು. ೧೮೭೧ನೆಯ ವರ್ಷದಲ್ಲಿ ಟಪ್ಪಾಲಿನ ಮೂಲಕ ಕಳುಹಿಸುವ ಭಾಂಗಿಗಳ ವಿಚಾರದಲ್ಲಿ ಫಾಸಲೆಯನ್ನು ಲೆಕ್ಕಿಸುವುದನ್ನು ತ್ಯಜಿಸಿದರು.

ತೂಕವನ್ನೇನೊ ತಕ್ಕಡಿಗಳಿಂದ ಕಂಡುಹಿಡಿಯಬಹುದು. ಊರಿಂದೂರಿಗೆ ಇರುವ ದೂರವನ್ನು ಕಂಡುಹಿಡಿಯಲು ದೊಡ್ಡ ಕೋಷ್ಟಕಗಳನ್ನು ತಯಾರಿಸಿ ಪ್ರತಿ ಟಪ್ಪಾಲಾಫೀಸಿನಲ್ಲಿಯೂ ಇಡಬೇಕಾಗಿದ್ದಿತು. ಜನಗಳ ಲೆಕ್ಕಕ್ಕೂ ಟಪ್ಪಾಲಾಫೀಸಿನವರ ಲೆಕ್ಕಕ್ಕೂ ದೂರದ

ವಿಚಾರದಲ್ಲಿ ಯಾವಾಗಲೂ ವ್ಯತ್ಯಾಸಗಳು ಇರುತ್ತಲೇ ಇದ್ದುವು. ಜನರು ಹತ್ತಿರದ ಮಾರ್ಗದ ಲೆಕ್ಕವನ್ನೇ ಹಿಡಿಯುತ್ತಿದ್ದರು. ಸರ್ಕಾರದವರು ದೂರದ ಮಾರ್ಗದ ಲೆಕ್ಕವನ್ನೇ ಹಿಡಿಯುತ್ತಿದ್ದರು.

ಟಪ್ಪಾಲ್ ಇಲಾಖೆಯ ವರಮಾನವು ಹೆಚ್ಚು ಕಡಮೆಯಾದ ಹಾಗೆಲ್ಲಾ ಹಾಸಲಿನ ದರಗಳನ್ನು ವ್ಯತ್ಯಸ್ತ ಮಾಡುವುದು ಬಹು ದಿನದಿಂದಲೂ ಆಚರಣೆಯಲ್ಲಿರುತ್ತದೆ. ವೃತ್ತಪತ್ರಿಕೆಗಳಿಗೆ ಉತ್ತೇಜನ ಕೊಡುವುದರಿಂದ, ಜನಗಳಿಗೆ ಜ್ಞಾನಾಭಿವೃದ್ಧಿಯಾಗುವುದೆಂಬ ಉದ್ದೇಶದಿಂದ ಅವುಗಳ ವಿಚಾರದಲ್ಲಿ ಕಡಮೆ ದರಗಳನ್ನು ಗೊತ್ತುಮಾಡಿರುತ್ತಾರೆ. ಅದರಂತೆಯೇ ಕುರುಡರ ಲಿಪಿಗೂ ಕಡಮೆ ದರವು ಅನ್ವಯಿಸುತ್ತದೆ. ವ್ಯಾಪಾರಾಭಿವೃದ್ಧಿ ಮಾಡುವ ಕಾರಣದಿಂದ ಬುಕ್ ಪ್ಯಾಕೆಟ್ಸಿಗೂ, ಸ್ಯಾಂಪಲ್ (ನಮೂನೆ) ಪ್ಯಾಕೆಟ್ಸಿಗೂ ಕಡಮೆ ಹಾಸಲನ್ನು ಇಟ್ಟಿರುವರು.

ಟಪ್ಪಾಲನ್ನು ಸಾಗಿಸುವುದರಲ್ಲಿ ದೂರದ ಗಣನೆಯು ಅತ್ಯಲ್ಪ ವಿಷಯವೆಂದೂ ಅದನ್ನು ಲೆಕ್ಕಿಸದೆ ಇದ್ದರೆ ಸರ್ಕಾರಕ್ಕೆ ನಷ್ಟ ಉಂಟಾಗುವುದಿಲ್ಲವೆಂದೂ ರೌಲೆಂಡ್ ಹಿಲ್ ಎಂಬ ಆಂಗ್ಲೇಯ ಶಾಲೋಪಾಧ್ಯಾಯನು ವಾದಿಸಿದನು. ಇವನ ಜನನ ೧೭೯೫ರಲ್ಲಿ. ಟಪ್ಪಾಲು ಹಾಸಲು ಹೆಚ್ಚಾಗಿದ್ದ ಪ್ರಯುಕ್ತ ಇವನೂ ಮತ್ತು ಇವನ ಭವಿಷ್ಯ ಹೆಂಡತಿಯೂ ಹದಿನೈದು ದಿನಗಳಿಗೊಂದಾವರ್ತಿ ಒಂದು ಔನ್ಸಿಗೆ ಮೀರದಂತೆ ಪರಸ್ಪರ ಕಾಗದ ಬರೆಯುತ್ತಿದ್ದರು. ಇದಕ್ಕಿಂತ ಹೆಚ್ಚಾಗಿ ಬರೆಯಲು ಆರ್ಥಿಕ ದೃಷ್ಟಿಯಿಂದ

ಕಷ್ಟವಾಗಿದ್ದಿತು. ಆದಕಾರಣ ಈ ಹಾಸಲಿನ ವಿಷಯ ವನ್ನು ಕುರಿತು ಅವನು ಆಲೋಚಿಸಲಾರಂಭಿಸಿದನು. ೧೮೩೭ರಲ್ಲಿ (ನಮ್ಮ ದೇಶದಲ್ಲಿ ಟಪ್ಪಾಲು ಸಂಸ್ಥೆಯು ಈ ವರ್ಷದಲ್ಲೇ ಏರ್ಪಾಡಾಯಿತು ಎನ್ನಬಹುದು) "ಪೋಸ್ಟ್ ಆಫೀಸಿನ ತಿದ್ದುಪಡಿ – ಅದರ ಪ್ರಾಮುಖ್ಯತೆ ಮತ್ತು ಸಾಧ್ಯತೆ" (Post Office Reform – Its importance and practicability) ಎಂಬ ಸಣ್ಣ ಪುಸ್ತಕವನ್ನು ಪ್ರಕಟಿಸಿದನು.

೧೮೧೫ ರಿಂದ ೧೮೩೫ರವರೆಗೆ ವ್ಯಾಪಾರವು ಹೆಚ್ಚಿತು. ಪ್ರಜಾ ಸಂಖ್ಯೆಯೂ ಹೆಚ್ಚಿತು. ಆದರೂ ಟಪ್ಪಾಲಿನವರ ವರಮಾನವು ಒಂದೇ ಸಮನಾಗಿದ್ದಿತೆಂದೂ ಐದು ಲಕ್ಷ ಪೌಂಡುಗಳಷ್ಟಾದರೂ ಆದಾಯವು ಹೆಚ್ಚಬೇಕಾಗಿದ್ದಿತೆಂದೂ, ಕಾಗದ ಒಂದಕ್ಕೆ ತಗಲುವ ೬¼ ಪೆನ್ನಿಗಳಲ್ಲಿ ಸುಮಾರು ಒಂದು ಪೆನ್ನಿಯು ರವಾನೆಗೆ ತಗಲುವುದೆಂದೂ, ದೂರಕ್ಕೆ ಅನುಗುಣವಾಗಿ ಹಾಸಲನ್ನು ವಸೂಲ್ಮಾಡುವ ಹಾಗಿದ್ದರೆ ಅಷ್ಟು ಮಾತ್ರ ವಸೂಲ್ಮಾಡಬೇಕೆಂದೂ, ಹಾಗೆ ಮಾಡುವುದು ಸಾಧ್ಯವಲ್ಲವೆಂದೂ, ಆಗಿನ ಶಿಸ್ತಿನಲ್ಲಿ ಲೆಕ್ಕಾಚಾರವನ್ನಿಡುವುದು ಅನೇಕ ತೊಡಕುಗಳಿಂದ ಕೂಡಿ ದುಬಾರಿ ಖರ್ಚಿನದಾಗಿರುವುದಲ್ಲದೆ ಮೋಸಕ್ಕೆ ಅವಕಾಶ ವಿರುವುದೆಂದೂ, ದೂರವನ್ನು ಗಮನಿಸದೆ ಒಂದೇ ಸಮನಾದ ಹಾಸಲನ್ನು ವಿಧಿಸಿ, ಆ ಹಾಸಲನ್ನು ತಲೆಚೀಟಿಗಳ ಮೂಲಕ ವಸೂಲು ಮಾಡಿದರೆ ಟಪ್ಪಾಲಾಫೀಸಿನ ಕೆಲಸವು ಕಡಮೆಯಾಗಿ, ಲೆಕ್ಕಾಚಾರದಲ್ಲಿ ನಡೆಯುತ್ತಿದ್ದ ಖರ್ಚೆಲ್ಲವೂ

ಉಳಿಯುವುದೆಂದೂ, ಒಂದು ಔನ್ಸಿನ ಕಾಗದಕ್ಕೆ ಒಂದು ಪೆನ್ನಿ ಮಾತ್ರ ಹಾಸಲಾಗಿರಬೇಕೆಂದೂ ವಾದಿಸಿದನು. ಹಾಸಲನ್ನು ನಗದು ವಸೂಲ್ಮಾಡುವುದರಲ್ಲಿ, ತಲೆಚೀಟಿಗಳಿಂದ ಹಾಸಲನ್ನು ವಸೂಲ್ಮಾಡುವುದರ ಆರರಷ್ಟು ಹೊತ್ತು ಹಿಡಿಯುವುದೆಂದು ತೋರಿಸಿದನು. ಈ ರೀತಿ ಬರೆದಿರುವ ಪುಸ್ತಕದ ಪ್ರಕಟನೆಯು ಜನಗಳಲ್ಲಿ, ಮುಖ್ಯವಾಗಿ ವ್ಯಾಪಾರಸ್ಥರಲ್ಲಿ ಅಲ್ಲೋಲಕಲ್ಲೋಲವನ್ನುಂಟುಮಾಡಿತು. ಇದರ ಫಲಿತಾಂಶವಾಗಿ, ೧೮೩೮ರಲ್ಲಿ, ಈ ವಿಚಾರದ ಬಗ್ಗೆ ಒಂದು ಸಮಿತಿ ಏರ್ಪಾಡಾಯಿತು. ಆ ಸಮಿತಿಯವರು ರೌಲೆಂಡ್ ಹಿಲ್‌ನ ವಾದವು ಸಮರ್ಪಕವಾದುದು ಎಂದು ಅನುಮೋದಿಸಿ ಶಿಫಾರಸು ಮಾಡಿದರು. ಆ ಸಮಯದಲ್ಲಿ ಎಷ್ಟೋ ಅನುಕೂಲವಾದ ಸನ್ನಿವೇಶಗಳು ಒದಗಿದ ಕಾರಣ ೧೮೪೦ರಲ್ಲಿ ಅರ್ಧ ಔನ್ಸಿಗೆ ಒಂದು ಪೆನ್ನಿಯ ದರವನ್ನು ವಿಧಿಸಿ ಆಚರಣೆಗೆ ತಂದರು. ಮೊದಲನೆಯ ವರ್ಷ ಕಾಗದಗಳ ಸಂಖ್ಯೆಯು ದ್ವಿಗುಣವಾಯಿತು. ಹನ್ನೆರಡನೆಯ ವರ್ಷದಲ್ಲಿ ಮೊದಲಿದ್ದ ವರಮಾನಕ್ಕಿಂತ ಹೆಚ್ಚಾಗಿ ಉಂಟಾಯಿತು. ೨೦ ವರ್ಷಗಳನಂತರ ಅಂದರೆ ೧೮೬೦ರಲ್ಲಿ ಈ ಪುಣ್ಯಪುರುಷನಿಗೆ ಕೆ.ಸಿ.ಬಿ. ಎಂಬ ಬಿರುದನ್ನು ಕೊಟ್ಟರು. ೧೮೬೪ರಲ್ಲಿ ಅವನು ಪೋಸ್ಟ್ ಆಫೀಸ್ ಸೆಕ್ರೆಟರಿ ಕೆಲಸದಿಂದ ನಿವೃತ್ತನಾಗಿ ೧೮೭೯ರಲ್ಲಿ ಈ ಲೋಕವನ್ನು ತ್ಯಜಿಸಿದನು. ಟಪ್ಪಾಲ್ ಆಫೀಸಿನ ತಿದ್ದುಪಡಿಗಳಲ್ಲೆಲ್ಲಾ ಇವನಿಂದ ಆದುದು ಅತಿ ಮುಖ್ಯವಾದುದು. ಇವನ ಕ್ರಮವನ್ನೇ ಅನುಸರಿಸಿ ೧೯೩೮ರಲ್ಲಿ ವಿಮಾನಗಳಲ್ಲಿ ಸಾಗಿಸುವ ಟಪ್ಪಾಲಿನ ಹಾಸಲನ್ನು

ಚಕ್ರಾಧಿಪತ್ಯದ ದೇಶಗಳೊಳಗೆ ಒಂದೇ ಸಮನಾಗಿ ವಿಧಿಸಿದರು. ಆದರೆ ಯುದ್ಧದ ಕಾರಣ ಈ ಏರ್ಪಾಡನ್ನು ನಿಲ್ಲಿಸಿ ಕಾಲಾನುಗುಣವಾದ ಹಾಸಲನ್ನು ವಿಧಿಸಿದಾರೆ.

ಟಪ್ಪಾಲ್ ತಲೆಚೀಟಿಗಳು

೧೮೫೨ಕ್ಕೆ ಮುಂಚೆ ನಮ್ಮ ದೇಶದಲ್ಲಿ ಟಪ್ಪಾಲಿನ ಹಾಸಲನ್ನು ನಗದು ವಸೂಲ್ಮಾಡುತ್ತಿದ್ದರು. ಸಿಂಧು ಪ್ರಾಂತ್ಯದಲ್ಲಿ ಸರ್ ಬಾರ್ಟಲ್ ಫ್ರೇರ್ (Sir Bartle Frere) ಎಂಬವನು ಟಪ್ಪಾಲಿನ ತಲೆಚೀಟಿಗಳನ್ನು ಮೊದಲು ಉಪಯೋಗಕ್ಕೆ ತಂದನು. ಈ ತಲೆಚೀಟಿಗಳು ಆ ಒಂದು ಪ್ರಾಂತ್ಯದಲ್ಲಿ ಮಾತ್ರ ಆಚರಣೆಯಲ್ಲಿದ್ದುವು. ಎರಡು ವರ್ಷಗಳಾದ ಮೇಲೆ ೧೮೫೪ರಲ್ಲಿ ತಲೆಚೀಟಿಗಳನ್ನು ಕಲ್ಕತ್ತೆಯಲ್ಲಿ ಸರ್ವೇಯರ್ ಜನರಲ್ ಆಫೀಸಿನಿಂದ ಲಿತೋಗ್ರಾಫಿಕ್ ಪ್ರೋಸೆಸ್ (Lithographic Process) ಮೂಲಕ ಅಚ್ಚುಹಾಕಿಸಿ ದೇಶದಲ್ಲೆಲ್ಲಾ ಜಾರಿಗೆ ತಂದರು. ಆ ವರ್ಷ ನಾಲ್ಕು ವಿಧವಾದ ತಲೆಚೀಟಿಗಳನ್ನು ಮಾತ್ರ ಮಾರಿದರು: ಅವು ಯಾವುವೆಂದರೆ: ಅರ್ಧ ಆಣೆ, ಒಂದಾಣೆ, ಎರಡಾಣೆ ಮತ್ತು ನಾಲ್ಕಾಣೆಯ ಬೆಲೆಯುಳ್ಳವುಗಳು. ಅದರ ಮುಂದಿನ ವರ್ಷ ಈ ನಾಲ್ಕು ಬಗೆಯ ತಲೆಚೀಟಿಗಳ ಜೊತೆಗೆ ಎಂಟಾಣೆ ಬೆಲೆಯ ತಲೆಚೀಟಿಗಳನ್ನೂ, ಇಂಗ್ಲೆಂಡಿನಲ್ಲಿರುವ ಡಿ ಲಾ ರೂ ಅಂಡ್ ಕೊ. (De La Rue & Co.) ಇವರಿಂದ ಮಾಡಿಸಿ ತರಿಸಿಕೊಂಡರು. ಈ ತಲೆಚೀಟಿಗಳ ರಚನೆಯನ್ನು ಉಕ್ಕಿನಲ್ಲಿ ಕೆತ್ತಿ ಬಿಳಿಯ ಕಾಗದದ ಮೇಲೆ

ಮುದ್ರಿಸುತ್ತಿದ್ದರು. ೧೯೨೬ನೆಯ ಸಾಲಿನ ವರೆಗೂ ಇವುಗಳ ತಯಾರಿಕೆಯು ವಿದೇಶದಲ್ಲೇ ಇತ್ತು. ಅಂದಿನಿಂದೀಚೆಗೆ ನಮ್ಮ ದೇಶದಲ್ಲಿ ನಾಸಿಕ್ ರೋಡಿನಲ್ಲಿರುವ ಸೆಕ್ಯೂರಿಟಿ ಪ್ರಿಂಟಿಂಗ್ ಪ್ರೆಸ್‌ನಲ್ಲಿ ತಯಾರಿಸುತ್ತಾರೆ. ಈ ಮುದ್ರಣ ಕ್ರಮವನ್ನು ನೋಡಬೇಕೆಂದು ಇಚ್ಛೆಯುಳ್ಳವರು ಕ್ಲುಪ್ತ ದಿವಸಗಳಲ್ಲಿ ಆ ಮುದ್ರಣಾಲಯದ ಯಜಮಾನರ ಅಪ್ಪಣೆ ಪಡೆದು ನೋಡಬಹುದು.

ಮೊದಲು ನಾಲ್ಕು ತೆರನಾದ ತಲೆಚೀಟಿಗಳು ಆರಂಭ ವಾದರೂ ೧೯೦೪ರಲ್ಲಿ ಹದಿನಾಲ್ಕು ಬಗೆಯ ತಲೆಚೀಟಿಗಳು ಮಾರಾಟಕ್ಕೆ ಇದ್ದುವು. ಇವುಗಳ ಜೊತೆಗೆ ಮುದ್ರಾಧಾರಣೆ ಯಾದ ಕವರುಗಳು, ಕಾರ್ಡುಗಳು, ವರ್ತಮಾನ ಪತ್ರ ಗಳನ್ನು ಕಳುಹಿಸುವ ಸಲುವಾಗಿ ರ್‍ಯಾಪರ್ (Wrapper) ಗಳೂ ಮಾರಲ್ಪಡುತ್ತಿದ್ದುವು. ಇವುಗಳ ಮೇಲೆ "On H. M. S." ಎಂದು ಮುದ್ರಿಸಿದ ತಲೆಚೀಟಿಗಳನ್ನೂ ಕಾರ್ಡು ಮತ್ತು ಕವರುಗಳನ್ನೂ ಸರ್ಕಾರದ ಕಾರ್ಯಗಳಿಗೆ ಉಪಯೋಗಿಸುತ್ತಿದ್ದರು. ಈಗ ಸುಮಾರು ನಲವತ್ತಕ್ಕೆ ಮೀರಿದ ಬಗೆ ಬಗೆಯ ತಲೆಚೀಟಿಗಳು, ಕವರುಗಳು ಮತ್ತು ಕಾರ್ಡುಗಳು ಮಾರಾಟಕ್ಕೆ ಇರುತ್ತವೆ. ತಲೆಚೀಟಿಯ ರಚನೆಯಲ್ಲಿ ವಿಶೇಷವೇನಾದರೂ ಇದೆಯೆ ಎಂದು ಕೇಳ ಬಹುದು. ಅದರಲ್ಲಿ ಅಂದ ಮತ್ತು ಅರ್ಥ ಇವೆರಡೂ ಇವೆ. ಇಂಡಿಯಾ ದೇಶದ ತಲೆಚೀಟಿಗಳಲ್ಲಿ ಕಮಲವಿದೆ. ಬರ್ಮಾ ದೇಶದ ಒಂದು ರೂಪಾಯಿನ ತಲೆಚೀಟಿಗಳಲ್ಲಿ ಪೂಜ್ಯವಾದ ನವಿಲಿನ ಆಕಾರವಿದೆ. ಗ್ರೇಟ್ ಬ್ರಿಟನ್‌ನ

ತಲೆಚೀಟಿಗಳಲ್ಲಾದರೋ – ಇಂಗ್ಲೆಂಡಿನ, ಸ್ಕಾಟ್ಲೆಂಡಿನ, ಐರ್‌ಲೆಂಡಿನ ಮತ್ತು ವೇಲ್ಸಿನ ಕುರುಹುಗಳಾದ – ಲತೆ ಬಳ್ಳಿಗಳ ಆಕೃತಿಗಳು ನಾಲ್ಕು ಮತ್ತು ಆರು ಪೆನ್ನಿಗಳ ತಲೆಚೀಟಿಗಳಲ್ಲಿ ಕಂಡುಬರುತ್ತವೆ.

ವಿಮಾನದ ಟಪ್ಪಾಲಿಗೋಸ್ಕರ ಪ್ರತ್ಯೇಕವಾದ ತಲೆಚೀಟಿಗಳು ಅನೇಕ ಕಡೆಗಳಲ್ಲಿ ಆಚರಣೆಯಲ್ಲಿವೆ. ಆಫ್ರಿಕಾ ಖಂಡದಲ್ಲಿರುವ ಸೂಡಾನ್‌ನ ವಿಮಾನದ ತಲೆಚೀಟಿಗಳಲ್ಲಿ ಮರಳುಕಾಡನ್ನು ದಾಟುವ ಒಂಟೆಯ ಆಕೃತಿ ಮತ್ತು ಅದರ ಮೇಲೆ ವಿಮಾನದ ಚಿತ್ರವನ್ನು ಕಾಣಬಹುದು. ಜರ್ಮನಿಯ ತಲೆಚೀಟಿಗಳಲ್ಲಿ ಸ್ವಸ್ತಿಕವನ್ನೂ ಮತ್ತು ಹದ್ದನ್ನೂ ಕಾಣಬಹುದು.

ಇಷ್ಟೆ ಅಲ್ಲ; ವರ್ಣದಲ್ಲಿಯೂ ಅರ್ಥವಿದೆ. ನಾನಾ ದೇಶದ ಟಪ್ಪಾಲಿನವರೆಲ್ಲರೂ ಒಟ್ಟುಗೂಡಿ ಸಾಧ್ಯವಿರುವ ಸಂದರ್ಭಗಳಲ್ಲೆಲ್ಲಾ ಒಂದೇ ಜಾತಿಯ ಏರ್ಪಾಡುಗಳನ್ನು ಆಚರಣೆಗೆ ತರುವುದಕ್ಕೆ ಒಂದು ಸಮಿತಿಯನ್ನು ಸ್ಥಾಪಿಸಿರುವರು. ಆ ಸಮಿತಿಗೆ Universal Postal Union ಎಂದು ಹೆಸರು. ಬೆಲೆಗೆ ಅನುಗುಣವಾಗಿ ಬಣ್ಣವನ್ನು ವಿಧಾಯಕ ಮಾಡುವುದೂ ಉಂಟು. ಒಂದು ಸಮಯದಲ್ಲಿ ಇಲ್ಲಿನ ಒಂದಾಣೆಯ ತಲೆಚೀಟಿ, ಇಂಗ್ಲೆಂಡಿನ ಒಂದು ಪೆನ್ನಿಯ ತಲೆಚೀಟಿ ಒಂದೇ ಬಣ್ಣ (ಕೆಂಪು) ವಾಗಿದ್ದುವು. ಹಾಗೆಯೆ ಅರ್ಧಾಣೆಯದು ಮತ್ತು ಅರ್ಧ ಪೆನ್ನಿಯದು ಹಸರು ಬಣ್ಣವನ್ನು ಹೊಂದಿದ್ದುವು. ಈ ಬಣ್ಣಗಳು

ಕಾಲಾನುಗುಣವಾಗಿ ಸಮಿತಿಯವರು ಅನುಮೋದಿಸಿದ ಪ್ರಕಾರ ಬದಲಾವಣೆಗಳನ್ನು ಹೊಂದುವುವು.

ಈ ತಲೆಚೀಟಿಗಳನ್ನು ಸಂಗ್ರಹಮಾಡುವುದೇ ಒಂದು ದೊಡ್ಡ ಹವ್ಯಾಸವಾಗಿರುತ್ತದೆ. ಉಪಯೋಗಿಸಿದ ತಲೆಚೀಟಿಗಳಾದರೂ ಅಪೂರ್ವವಾದ ಕಾರಣದಿಂದ ಅಪಾರವಾದ ಬೆಲೆಯನ್ನು ಹೊಂದುವುವು.

ನಮ್ಮ ದೇಶದಲ್ಲಿನ ತಲೆಚೀಟಿಗಳನ್ನೆಲ್ಲಾ ಸಂಗ್ರಹಿಸಿ ಡೆಹಲಿಯಲ್ಲಿರುವ ಮುಖ್ಯ ಅಧಿಪತಿಗಳ ಕಛೇರಿಗೆ ಸೇರಿದ ಮ್ಯೂಸಿಯಂನಲ್ಲಿ ಇಟ್ಟಿರುತ್ತಾರೆ.

ಚಕ್ರವರ್ತಿಗಳ ಅಥವಾ ಚಕ್ರವರ್ತಿನಿಯರ ತಲೆಯೊಂದೆ ತಲೆಚೀಟಿಗಳಲ್ಲಿರುವುದು ವಾಡಿಕೆಯಾಗಿದ್ದಿತು. ಈಚೆಗೆ ಎರಡು ಮೂರು ವರ್ಷಗಳಿಂದ ಮುದ್ರಿಸುತ್ತಿರುವ ಕೆಲವು ತಲೆಚೀಟಿಗಳಲ್ಲಿ, ನಮ್ಮ ದೇಶದಲ್ಲಿ ಟಪ್ಪಾಲನ್ನು ಸಾಗಿಸುವ ವಾಹನಗಳ ಮತ್ತು ಸಾಧನಗಳ ಚಿತ್ರಗಳನ್ನು ನೋಡುತ್ತೇವೆ.

ಮೊದಲು ಟಪ್ಪಾಲು ಹಾಸಲನ್ನು ನಗದು ಕೊಡಬೇಕಾಗಿದ್ದಿತು. ತಲೆಚೀಟಿಗಳನ್ನು ಹಚ್ಚುವುದರಿಂದ ಬಹು ಅನುಕೂಲವಾಗಿ ಕಾಲವು ಉಳಿಯುವುದೆಂದು ಹೇಳಿದೆ. ಆದರೆ ಕೆಲವು ಸಂದರ್ಭಗಳಲ್ಲಿ ನಗದು ಕೊಡುವುದರಲ್ಲಿ ಅನುಕೂಲವುಂಟು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವ್ಯಾಪಾರಸ್ಥರು ತಮ್ಮ ಗಿರಾಕಿಗಳಿಗೆ ಒಂದೇ ಬಗೆಯ ಸಾವಿರಾರು ಪುಸ್ತಕಗಳನ್ನೊ, ಪ್ರಕಟನೆಗಳನ್ನೊ ಕಳುಹಿಸುವ ಸಮಯದಲ್ಲಿ ತಲೆಚೀಟಿಗಳನ್ನು ಹಚ್ಚುವುದು ಕಷ್ಟತರವಾಗಿದ್ದು,

ತಲೆಚೀಟಿಗಳನ್ನು ದುರುಪಯೋಗಪಡಿಸಲು ಅವಕಾಶ ವಿದ್ದಿತು. ಅಂತಹ ಅನಾನುಕೂಲಗಳ ನಿವಾರಣಾರ್ಥ ವಾಗಿ ನಗದು ಹಣವನ್ನು ತಲೆಚೀಟಿಗಳ ಬದಲಾಗಿ ತೆಗೆದುಕೊಳ್ಳುವ ಪದ್ಧತಿಯು ದೊಡ್ಡ ಊರುಗಳಲ್ಲಿ ಈಗಲೂ ವಾಡಿಕೆಯಲ್ಲಿರುತ್ತದೆ. ಟಪ್ಪಾಲಿನಲ್ಲಿ ಕಳುಹಿ ಸುವ ಪದಾರ್ಥವು ಒಂದೇ ರೀತಿಯದದ್ದಾಗಿರಬೇಕು. ಅವುಗಳ ಸಂಖ್ಯೆಯು ೫೦೦ಕ್ಕೆ ಕಡಮೆ ಇಲ್ಲದೆ ೩,೦೦೦ಕ್ಕೆ ಮೀರದಿದ್ದರೆ ಆ ರೀತಿ ನಗದು ಕೊಡಬಹುದು. ಅಂತಹ ಪದಾರ್ಥಗಳ ಮೇಲೆ 'ಟಪ್ಪಾಲು ಹಾಸಲು ನಗದು ಕೊಟ್ಟಿದೆ' ಎಂಬ ಮುದ್ರೆ ಒತ್ತಿ ಕಳುಹಿಸುತ್ತಾರೆ.

ತಲೆಚೀಟಿಗಳ ಲೆಕ್ಕಾಚಾರವನ್ನು ಸರಿಯಾಗಿ ಇಡು ವುದಕ್ಕೂ, ಅವುಗಳ ದುರುಪಯೋಗಕ್ಕೆ ಅವಕಾಶವಿಲ್ಲದಂತೆ ಮಾಡುವುದಕ್ಕೂ ನಿಯೊ ಪೋಸ್ಟ್ ಫ್ರಾಂಕಿಂಗ್ ಮೆಷಿನ್ (Neo Post Franking Machine) ಎಂಬ ಯಂತ್ರದ ಉಪಯೋಗವು ಆಚರಣೆಗೆ ಬಂದಿದೆ. ಟಪ್ಪಾಲಾಫೀಸಿನವ ರಿಗೆ ನಂಬಿಕೆಯುಳ್ಳ ನಿಯಮಿತವಾದ ಕಂಪೆನಿಯವರಿಂದ ಈ ಯಂತ್ರವನ್ನು ಕೊಂಡು ಪೋಸ್ಟ್ ಮಾಸ್ಟರ್ ಜನರಲ್‌ರ ಅನುಮತಿ ಪಡೆದು ಈ ಯಂತ್ರವನ್ನು ಉಪಯೋಗಿಸ ಬಹುದು. ತಮ್ಮ ವ್ಯಾಪಾರಕ್ಕೆ ಸಂಬಂಧಪಟ್ಟ ಪ್ರಕಟನೆ ಗಳನ್ನು ಹಾಸಲಿನ ಮುದ್ರೆಯ ಜೊತೆಯಲ್ಲಿ ಯಂತ್ರದಿಂದ ಸೂಕ್ಷ್ಮವಾಗಿ ಅಚ್ಚು ಹಾಕಬಹುದು. ಹಾಸಲನ್ನು ಮುಂಗಡ ವಾಗಿ ಅಂಚೆಯ ಆಫೀಸಿಗೆ ಕೊಟ್ಟರೆ ಆ ಮೊಬಲಗನ್ನು ಸೂಚಿಸುವ ಮುದ್ರೆಗಳು ಬರುವಂತೆ ಯಂತ್ರವನ್ನು

ಟಪ್ಪಾಲಿನ ಅಧಿಕಾರಿಯೊಬ್ಬನು ಬದಲಾಯಿಸುವನು. ಕಾಲಾಣೆ ಲೆಕ್ಕದ ಮೇರೆ ಎಷ್ಟು ಮುದ್ರೆ ಒತ್ತಬಹುದೊ ಅದನ್ನು ಲೆಕ್ಕಿಸಿ ಆ ಸಂಖ್ಯೆಯನ್ನು ತೋರಿಸುವಂತೆ ಅಳತೆ ಯಂತ್ರವನ್ನು ಬದಲಾಯಿಸುವುದೇ ಈ ಯಂತ್ರದ ರಚನೆ. ಇಂತಹ ಯಂತ್ರಗಳು ಬೆಂಗಳೂರಿನಲ್ಲಿರುವ "Amco" ಕಾರ್ಖಾನೆಯಲ್ಲಿಯೂ ಮತ್ತು "ಪ್ರಜಾಮತ"ದ ಆಫೀಸಿನಲ್ಲಿಯೂ ಉಪಯೋಗದಲ್ಲಿರುತ್ತವೆ.

ಟಪ್ಪಾಲಿನ ಮುದ್ರೆಗಳು (Post Marking)

ಮೊದಲು ಚಿಕ್ಕ ಚಿಕ್ಕ ಆಫೀಸುಗಳಲ್ಲಿರುವಂತಹ ಕೈಯಿಂದ ಒತ್ತುವ ಮುದ್ರೆಯ ಉಪಯೋಗವೇ ವಾಡಿಕೆಯಲ್ಲಿದ್ದಿತು. ಇದು ಎರಡು ಕೆಲಸಗಳನ್ನು ಒಳಗೊಂಡಿರುವುದು ; ಮುದ್ರೆಗೆ ಶಾಯಿ ಹತ್ತಿಸುವಂತೆ ಮಾಡುವುದು ಮತ್ತು ಆ ಮುದ್ರೆಯನ್ನು ಕಾಗದಗಳ ಮೇಲೆ ಒತ್ತುವುದು. ಈ ಕಾರ್ಯದಲ್ಲಿ ಒಂದು ನಿಮಿಷಕ್ಕೆ ೮೦ ರಿಂದ ೯೦ ಕಾಗದಗಳ ಮೇಲೆ ಮುದ್ರೆ ಒತ್ತುವುದಕ್ಕಾಗುತ್ತದೆ. ತನ್ನಷ್ಟಕ್ಕೆ ತಾನೆ ಶಾಯಿ ಇಳಿಯುವ ಉಪಾಯಾಂತರದಿಂದ ನಿಮಿಷಕ್ಕೆ ೧೦೦ ಕಾಗದಗಳ ಮೇಲೆ ಮುದ್ರೆಯನ್ನು ಒತ್ತಬಹುದು. ಈಚೆಗೆ ವಿದ್ಯುತ್‌ಶಕ್ತಿಯ ಸಹಾಯದಿಂದ ನಡೆಸಲ್ಪಡುವ ಯಂತ್ರಗಳು ಅಮೆರಿಕಾ ಖಂಡದಿಂದ ಬಂದು ಉಪಯೋಗದಲ್ಲಿವೆ. ಈ ಸಲಕರಣದಿಂದ ಒಂದು ನಿಮಿಷಕ್ಕೆ ೫೦೦ ರಿಂದ ೧,೦೦೦ ಕಾಗದಗಳ ಮೇಲೆ ಮುದ್ರೆಯನ್ನು ಒತ್ತಬಹುದು. ನಮ್ಮ ದೇಶದಲ್ಲಿ ಇಂತಹ ಯಂತ್ರಗಳು ಬೊಂಬಾಯಿ,

ಕಲ್ಕತ್ತಾ ಮತ್ತು ಮದ್ರಾಸ್ ಪಟ್ಟಣಗಳಲ್ಲಿ ಮಾತ್ರ ಉಪಯೋಗದಲ್ಲಿವೆ. ಈ ಯಂತ್ರದಿಂದ ಹೆಚ್ಚು ಅನುಕೂಲವೂ ಉಪಯೋಗವೂ ಆಗಬೇಕಾದರೆ ಕಾಗದಗಳು ಸಾಧ್ಯವಾದಮಟ್ಟಿಗೂ ಒಂದೇ ಅಳತೆ ಮತ್ತು ಆಕಾರ ಉಳ್ಳವುಗಳಾಗಿದ್ದು, ತಲೆಚೀಟಿಗಳನ್ನು ವಿಳಾಸದ ಕಡೆ ಬಲ ಮೇಲ್ಭಾಗದಲ್ಲಿ ಅಂಟಿಸಿರಬೇಕು. ಕಾಗದಗಳನ್ನು ಸರಿಯಾಗಿ ಜೋಡಿಸುವುದಕ್ಕೂ ಮತ್ತು ಮುದ್ರೆಯಾದನಂತರ ಆಕಸ್ಮಿಕವಾಗಿ ಯಾವುದಾದರೂ ಕಾಗದದ ಮೇಲೆ ಮುದ್ರೆ ಬಿಟ್ಟುಹೋಗಿದೆಯೆ ಎಂಬುದನ್ನು ನೋಡುವುದಕ್ಕೂ ಜನ ಸಹಾಯವು ಎಲ್ಲ ಕಡೆಯಂತೆಯೆ ಬೇಕು. ಮುದ್ರೆಯನ್ನು ಒತ್ತುವ ಉದ್ದೇಶಗಳೆರಡು; ಹಾಸಲಿನ ಸಲುವಾಗಿ ಅಂಟಿಸಿದ ತಲೆಚೀಟಿಗಳನ್ನು ಮತ್ತೆ ಉಪಯೋಗಿಸದಂತೆ ರದ್ದು ಮಾಡುವುದು ಮೊದಲನೆಯದು, ಎಲ್ಲಿಂದ ಎಲ್ಲಿಗೆ ಯಾವಾಗ ಕಾಗದವು ರವಾನೆಯಾಯಿತು ಅಥವಾ ತಲಪಿತು ಎನ್ನುವುದನ್ನು ತಿಳಿಸುವುದು ಎರಡನೆಯದು. ತಲೆಚೀಟಿಗಳ ಮೇಲೆ ಮುದ್ರಿಸುವುದರಲ್ಲಿ ಮೊದಲನೆಯ ಉದ್ದೇಶವು ಜರುಗಿದರೂ, ಎಲ್ಲಿಂದ ಎಲ್ಲಿಗೆ ಯಾವಾಗ ಕಾಗದ ಬಂತು ಎಂಬುದನ್ನು ಗೊತ್ತುಮಾಡುವುದು ಕಷ್ಟತರವಾಗಿದ್ದಿತು. ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಈ ವರ್ಷ ಬೇರೆ ಮಾದರಿಯ ಮುದ್ರೆಗಳನ್ನು ಉಪಯೋಗಕ್ಕೆ ತಂದಿರುತ್ತಾರೆ. ತಲೆಚೀಟಿಗಳ ಮೇಲೆ ಬರಿಯ ಸೊಟ್ಟನಾದ ಗೆರೆಗಳು ಬಿದ್ದು ಟಪ್ಪಾಲಾಫೀಸಿನ ಹೆಸರು ಮತ್ತು ಕಾಲ ಬೇರೆ ಕಡೆ ಗೋಚರವಾಗುವುವು.

ತಲೆಚೀಟಿಗಳ ಮೇಲಿನ ಮುದ್ರೆಯ ಚಿಹ್ನೆಗಳನ್ನು ಅಳಿಸಲು ಯತ್ನಿಸಿ ಅಂತಹ ತಲೆಚೀಟಿಗಳನ್ನು ಮತ್ತೆ ಉಪಯೋಗಿಸುವುದು ಒಂದು ಅಪರಾಧ. ಈ ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸಲ್ಪಡುತ್ತದೆ. ಕೆಲವು ವೇಳೆ ಬಾಲಕರು ವಿನೋದಕ್ಕೋಸ್ಕರವಾಗಿ ಈ ರೀತಿ ಮಾಡುವುದುಂಟು. ಅವರಿಗೆ ಈ ವಿಚಾರವಾಗಿ ಶಾಲೆಗಳಲ್ಲಿ ಸೂಚನೆ ಕೊಡುವುದು ಮೇಲು.

೫. ಟಪ್ಪಾಲಿನ ವಾಹನಗಳು

ತ್ರಿಲೋಕ ಸಂಚಾರಿಯಾದ ನಾರದ ಮಹರ್ಷಿಗಳು ಲೋಕದಿಂದ ಲೋಕಕ್ಕೆ ಸಮಾಚಾರವನ್ನು ತಲಪಿಸುತ್ತಿದ್ದರೆಂದು ನಾವು ಪುರಾಣಗಳಲ್ಲಿ ಓದಿ ಅಥವಾ ಕೇಳಿ ಇರುತ್ತೇವೆ. ಒಬ್ಬ ಯಕ್ಷನು ಸಮಾಚಾರವನ್ನು ಕಳುಹಿಸಲು ಮೇಘವನ್ನು ಉಪಯೋಗಿಸಿದಂತೆ ಕವಿ ಕಾಳಿದಾಸನು ವಿಖ್ಯಾತವಾದ 'ಮೇಘ ಸಂದೇಶ'ದಲ್ಲಿ ವಿವರಿಸುತ್ತಾನೆ. ದಮಯಂತಿಯು ನಳನಿಗೂ, ಸೀತೆಯು ರಾಮನಿಗೂ ಸಂದೇಶವನ್ನು ಕಳುಹಿಸಲು ಹಂಸವನ್ನು ಉಪಯೋಗಿಸಿದಂತೆ ವರ್ಣನೆಯಿದೆ. ಈಜಿಪ್ಟ್ ದೇಶದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಪಾರಿವಾಳ ಪಕ್ಷಿಗಳ ಮೂಲಕ ಟಪ್ಪಾಲನ್ನು ಕಳುಹಿಸುವ ಏರ್ಪಾಡನ್ನು ಸುಲ್ತಾನ್ ನೂರುದ್ದೀನನು ಮಾಡಿದ್ದನಂತೆ. ೧೮೭೦–೭೧ರಲ್ಲಿ ನಡೆದ ಫ್ರಾಂಕೋ ಜರ್ಮನಿ (Franco-German) ಯುದ್ಧದಲ್ಲಿಯೂ ಕೂಡ ಟಪ್ಪಾಲನ್ನು ಸಾಗಿಸಲು ಪಾರಿವಾಳಗಳನ್ನು ಉಪಯೋಗಿಸಿದರಂತೆ.

ನಮ್ಮ ದೇಶದಲ್ಲಿ ಟಪ್ಪಾಲನ್ನು ಸಾಗಿಸಲು ಒಂದೇ ತರಹದ ವಾಹನವನ್ನು ಉಪಯೋಗಿಸಲು ಸ್ಥಳ ವಿದ್ಯಮಾನ ಗಳು ಅವಕಾಶ ಕೊಡುವುದಿಲ್ಲ. ಕೆಲವು ಕಡೆ ಬೆಟ್ಟಗುಡ್ಡ ಗಳು, ಬೇರೆ ಎಡೆಯಲ್ಲಿ ಮರಳುಕಾಡು ಅಥವಾ ನೀರಿನ ಪ್ರಸಾರ, ಈ ರೀತಿಯಾದ ಬಗೆಬಗೆಯ ಅಡಚಣೆ ಗಳಿರುವುವು. ಆದುದರಿಂದ ನಮ್ಮ ದೇಶದಲ್ಲಿ ವಿವಿಧ ವಾಹನಗಳು ಉಪಯೋಗಕ್ಕೆ ಬಂದಿರುವುವು. ಮೈಸೂರಿ ನಿಂದ ಮನ್ನಾರಿಗೆ ಟಪ್ಪಾಲನ್ನು ಸಾಗಿಸಲು ಬಸ್, ರೈಲು, ಎತ್ತಿನ ಗಾಡಿ, ನೂಲಿನ ಮಾರ್ಗ ಮತ್ತು ಪಾದಚಾರಿ, ಈ ಎಲ್ಲ ವಿಧಗಳೂ ಉಪಯೋಗಿಸಲ್ಪಡುತ್ತವೆ. ಇದರ ಮಾದರಿ ಯನ್ನು ೧೯೩೫ನೆಯ ಸಾಲಿನ ಮೈಸೂರು ದಸರಾ ಪ್ರದರ್ಶನ ಶಾಲೆಯಲ್ಲಿ ಅನೇಕರು ನೋಡಿರಬಹುದು. ಪಾದಚಾರಿ ಯಾದ ಹರಿಕಾರನು ಈ ಎಲ್ಲ ವಾಹನಗಳಲ್ಲಿಯೂ ಅಗ್ರ ಗಣ್ಯನು. ಟಪ್ಪಾಲಿನ ಸಂಸ್ಥೆಯಲ್ಲಿ ಇವನನ್ನು ಆದಿಪುರುಷ ನೆಂದು ಕರೆಯಬಹುದು. ಇವನು ತಲೆಯಮೇಲೋ ಬೆನ್ನಿನ ಮೇಲೋ ಟಪ್ಪಾಲು ಚೀಲಗಳನ್ನು ಬಿಗಿದು ಕಟ್ಟಿಕೊಂಡು ಓಡುವುದು ಈಗಲೂ ರೂಢಿಯಲ್ಲಿದೆ. ಇವನ ಕೈಯಲ್ಲಿ ಒಂದು ದಂಡ, ದಂಡದ ಕೊನೆಗೆ ಈಟಿ. ಗೆಜ್ಜೆಗಳಂತೆ ಶಬ್ದಮಾಡುವ ಏಳೆಂಟು ಹಿತ್ತಾಳೆ ಗುಂಡುಗಳು ಆ ದಂಡದ ಕೊನೆಯಲ್ಲಿರುತ್ತವೆ. ಅವನ ಬರುವಿಕೆ ಗೆಜ್ಜೆಗಳ ಶಬ್ದದಿಂದ ತಿಳಿಯುವುದು. ದೇಹರಕ್ಷಣೆಗೋಸ್ಕರ ಈಟಿ ಇರುತ್ತದೆ.

ನಮ್ಮ ದೇಶದಲ್ಲಿ ಒಟ್ಟು ೧,೬೦,೫೪೦ ಮೈಲಿ ಟಪ್ಪಾಲು ಮಾರ್ಗಗಳಿವೆ ಎಂದು, ಈ ಇಲಾಖೆಯ ಕಳೆದ ವಾರ್ಷಿಕ

ವರದಿಯಿಂದ ತಿಳಿಯಬರುತ್ತದೆ. ಅರ್ಧಕ್ಕಿಂತ ಹೆಚ್ಚು ದೂರ ಎಂದರೆ ೮೧,೪೭೪ ಮೈಲಿ ದೂರ ಪಾದಚಾರಿಗಳ ಮೂಲಕ ಈಗಲೂ ಟಪ್ಪಾಲು ರವಾನೆಯಾಗುತ್ತದೆ. ಈ ಹರಿಕಾರರು ಕಡಮೆ ನಾಗರಿಕತೆಯ ಜಾತಿಗಳಿಂದ ಚುನಾಯಿಸಲ್ಪಟ್ಟವರು. ಇವರಲ್ಲಿ ಅನೇಕರು ಸಮಸ್ತ ಪದಾರ್ಥಗಳಲ್ಲಿಯೂ ಜೀವ ವಿದೆ ಎಂಬ ನಂಬಿಕೆಯುಳ್ಳವರು. ಕಾಡು ಮೃಗಗಳನ್ನಾಗಲಿ, ಖೂನಿ, ದರೋಡೆಕಾರರನ್ನಾಗಲಿ ಎದುರಿಸಬಲ್ಲರು. ಆದರೆ ಯಾವುದಾದರೊಂದು ಮರದಲ್ಲಿ ಭೂತವಿದೆ ಎಂದು ಕೇಳಿ ದರೆ, ಲೆಕ್ಕಿಸದೆ ಹಲವು ಮೈಲಿ ಸುತ್ತಿಕೊಂಡು ಹೋಗುವ ರಲ್ಲದೆ ಆ ಮರದ ಹತ್ತಿರ ಸುಳಿಯುವುದು ಕೂಡ ಇಲ್ಲ. ಟಪ್ಪಾಲ್ ಚೀಲವು ಒಂದು ಪೂಜ್ಯ ವಸ್ತು ಎಂಬುದು ಇವರ ಭಾವನೆ. ಪ್ರಾಣವನ್ನೂ ಲೆಕ್ಕಿಸದೆ ಈ ಚೀಲವನ್ನು ನೆಲೆಗೆ ಒಯ್ಯುವರು. ಅಪ್ರಾಮಾಣಿಕತೆ ಇವರಲ್ಲಿ ಅಪರೂಪ.

ಒಂದು ಸಲ, ಹುಲಿಯ ಬಾಯಿಗೆ ತುತ್ತಾದ ಒಬ್ಬ ಹರಿಕಾರನ ಹೆಂಡತಿ ಮಕ್ಕಳಿಗೆ ಪರಿಹಾರ ದ್ರವ್ಯವನ್ನು (Gratuity) ಕೊಡಬೇಕೆಂದು ಟಪ್ಪಾಲ್ ಇಲಾಖೆಯ ಮುಖ್ಯಾಧಿಪತಿಗಳು ಸೂಚಿಸಿದಾಗ ನಿಗದೀ ಆಫೀಸಿನವರು (Audit Office) ಇದು ನಿಯಮವಿರುದ್ಧವೆಂದು ಹೇಳಿದರಂತೆ. ಮೃತಪಟ್ಟ ಹರಿಕಾರನು ತನ್ನ ನಿಯಮಿತ ಕೆಲಸವನ್ನು ಮಾಡುವಾಗ ಪ್ರಾಣವನ್ನು ಕಳೆದುಕೊಂಡುದರಿಂದ ಅದರಲ್ಲಿ ಮಹತ್ವವೇನೂ ಕಾಣ ಬರಲಿಲ್ಲವೆಂಬುದೇ ಅದಕ್ಕೆ ಕಾರಣ. ಅವನು ಮೃತಪಟ್ಟ ತಪಶೀಲನ್ನು ಈ ರೀತಿ ವರ್ಣಿಸಲಾಗಿದೆ:

"ಈ ಹರಿಕಾರನ ದಾರಿಯಲ್ಲಿ ಕೆಲವು ದಿನಗಳಿಂದೀಚೆಗೆ ಒಂದು ನರಭಕ್ಷಕ ಹುಲಿಯು ಸುಳಿದಾಡುತ್ತಿದ್ದು ಹಳ್ಳಿಯವರಲ್ಲಿ ಹಲವರನ್ನು ಹೊತ್ತುಕೊಂಡು ಹೋಗಿದ್ದಿತು. ಆ ದಿನ ಮಧ್ಯಾಹ್ನ ಸಮೀಪದಲ್ಲಿಯೇ ಆ ಹುಲಿಯು ಇರುವುದೆಂದು ತಿಳಿದಿದ್ದಿತು. ಹರಿಕಾರನು ಬರುತ್ತಲೇ ಮಾರ್ಗದಲ್ಲಿರುವ ಅಪಾಯವನ್ನು ತಿಳಿಸಿದುದಲ್ಲದೆ ಆ ದಿನ ಅಲ್ಲಿಯೇ ತಂಗಿದ್ದು ಮಾರನೆಯ ಬೆಳಗ್ಗೆ ಮುಂದೆ ಪ್ರಯಾಣ ಬೆಳಸಬಹುದೆಂದು ಹೇಳಿದರು. ಮನುಷ್ಯಮಾಂಸದ ರುಚಿಯನ್ನು ತಿಳಿದ ಆ ಹುಲಿಯು ಸಾಮಾನ್ಯವಾಗಿ ಮಧ್ಯಾಹ್ನಕ್ಕೆ ಮುಂಚೆಯೇ ತನ್ನ ಆಹಾರವನ್ನು ದಕ್ಕಿಸಿಕೊಳ್ಳುತ್ತಿದ್ದುದರಿಂದ ಹರಿಕಾರನು ಸಾಯಂಕಾಲ ಐದು ಘಂಟೆಯವರೆಗೆ ಆ ಹಳ್ಳಿಯಲ್ಲಿದ್ದು ಅಲ್ಲಿನ ಪಟೇಲನನ್ನು ಜೊತೆಮಾಡಿಕೊಂಡು ಮುಂದೆ ಸಾಗಿದನು. ಎರಡು ಮೈಲಿ ಹಾದಿ ಕಳೆಯುವುದರೊಳಗಾಗಿ ಆ ಹುಲಿಯು ಅವನ ಮೇಲೆ ಹಾರಿ ಅವನನ್ನು ಕೊಂದಿತು. ಜೊತೆಯಲ್ಲಿದ್ದ ಪಟೇಲನು ಹೇಗೋ ತಪ್ಪಿಸಿಕೊಂಡು ಟಪ್ಪಾಲನ್ನು ಮುಂದಿನ ಗಡಿಗೆ ತಲಪಿಸಿದನು."

ಕರ್ತವ್ಯಜ್ಞಾನದಿಂದ ಮೃತ್ಯುವನ್ನು ಎದುರಿಸಿ ಹುಲಿಯ ಬಾಯಿಗೆ ತುತ್ತಾದ ಹರಿಕಾರನ ಸಂಸಾರಕ್ಕೆ ಪಾಲಕರಿಲ್ಲದಂತಾಯಿತು. ಹರಿಕಾರನ ಧೈರ್ಯಕ್ಕೆ ಮೆಚ್ಚಿ ಅವನ ಸಂಸಾರಕ್ಕೆ ಕೊಡಬಹುದಾದ ಪರಿಹಾರ ದ್ರವ್ಯವನ್ನು ಸಲ್ಲಿಸುವುದಕ್ಕೆ ಅಡ್ಡಿ ತಂದುದು ಅಸಾಧುವೆಂದು ಆಗಿನ ಅಕೌಂಟೆಂಟ್ ಜನರಲ್‌ರು ತೀರ್ಮಾನಿಸಿ ಅಡ್ಡಿ ತಂದ ಅಧಿಕಾರಿಗಳ ವರ್ತನೆಯನ್ನು ಖಂಡಿಸಿದರು.

ಈ ರೀತಿ ಪ್ರಾಣವನ್ನು ಎರವಾಗಿ ಕೊಡಲಿದ್ದು ತನ್ನ ಕಾರ್ಯದಲ್ಲಿ ಯಾವಾಗಲೂ ಹಿಂಜರಿಯದ ಹರಿಕಾರನನ್ನು ಕಿಪ್ಲಿಂಗ್ (Kipling) ಎಂಬ ಆಂಗ್ಲೇಯ ಕವಿಯು ಈ ಕೆಳಗೆ ಕಂಡಂತೆ ವರ್ಣಿಸಿರುವುದರಲ್ಲಿ ಆಶ್ಚರ್ಯವೇನು ?

"ಹೊಳೆಯು ಬಂದಿದೆಯೆ? ದೋಣಿಯುಲ್ಲೋ,
ಈಜೋ ತಟಹಾಯುಲೇಬೇಕು
ಮಳೆಯು ಮಾರ್ಗವನ್ನು ತೊಡೆದಿದೆಯೆ?
ಕೋಡುಗಲ್ಲೇರಿ ದಾಟಲೇಬೇಕು
ಸಬೂಬಿಲ್ಲದ ಸೇವೆ ಇದು—
ಉಸಿರಾಡುವ ವರೆಗೆ ದುಡಿಯುಲೇಬೇಕು."

ಹರಿಕಾರನನ್ನು ಬಿಟ್ಟರೆ ರೈಲು ಅತಿ ಮುಖ್ಯವಾದುದು. ಸುಮಾರು ೨೫,೦೦೦ ಮೈಲಿಗಳ ದೂರ ಟಪ್ಪಾಲನ್ನು ರೈಲಿನಲ್ಲಿ ಸಾಗಿಸುತ್ತಾರೆ. ಇದರಲ್ಲಿ ಎರಡು ಪ್ರಭೇದಗಳಿರುತ್ತವೆ. ಟಪ್ಪಾಲಿನವರು ತಮ್ಮ ಗಾಡಿಗಳನ್ನೇ ರೈಲಿನವರ ಮುಖಾಂತರ ತಯಾರಿಸಿ ಅವುಗಳಲ್ಲಿ ಕಾಗದಗಳನ್ನು ಹಂಚುವ (Sorting) ನೌಕರರನ್ನು ಕಳುಹಿಸುವ ಏರ್ಪಾಡು ಒಂದು. ಇಂತಹ ಗಾಡಿಗಳ ಮೇಲೆ "ರೈಲ್ವೆ ಮೆಯಿಲ್ ಸರ್ವಿಸ್" (Railway Mail Service) ಎಂದು ಬರೆದಿರುತ್ತದೆ. ಇಂತಹ ಗಾಡಿಗಳನ್ನು ತೆಗೆದುಕೊಂಡು ಹೋಗಲು, ರೈಲ್ವೆ ಇಲಾಖೆಯವರಿಗೆ ಟಪ್ಪಾಲ್ ಇಲಾಖೆಯವರು ನಿಷ್ಕರ್ಷೆಯಾದ ಪ್ರಕಾರ ಹಣವನ್ನು ಕೊಡುತ್ತಾರೆ. ಇದನ್ನು ಚಲನೆಯಲ್ಲಿರುವ ಟಪ್ಪಾಲಾಫೀಸು ಎಂದು ಕರೆಯಬಹುದು. ಮನುಷ್ಯನ ದೇಹದಲ್ಲಿನ ರಕ್ತನಾಳಗಳೋಪಾದಿಯಲ್ಲಿ ಈ ಏರ್ಪಾಡು

ಟಪ್ಪಾಲು ಇಲಾಖೆಯ ರಕ್ತನಾಳಗಳೆಂದು ಭಾವಿಸಲೂ ಬಹುದು. ಟಪ್ಪಾಲು ಇಲಾಖೆಯ ಗಾಡಿಗಳನ್ನು ಕಳುಹಿಸುವುದಕ್ಕೆ ಅಥವಾ ಅವರ ಸಿಬ್ಬಂದಿಯನ್ನು ಕಳುಹಿಸುವುದಕ್ಕೆ ಸಾಕಾದಷ್ಟು ಕಾಗದಗಳಿಲ್ಲದಿದ್ದರೆ ರೈಲ್ವೆ ರಕ್ಷಕನ(Guard) ಸ್ವಾಧೀನದಲ್ಲಿ ಕಳುಹಿಸುವುದೂ ಉಂಟು. ಹೀಗೆ ಕಳುಹಿಸುವಾಗ ತೂಕ ಮತ್ತು ದೂರ– ಇವುಗಳನ್ನು ಲೆಕ್ಕಿಸಿ ಕೊಡಬೇಕಾದ ಹಣವನ್ನು ಕೊಡುತ್ತಾರೆ. ಈ ರೈಲ್ವೆ ಮೆಯಿಲ್ ಸರ್ವಿಸ್ ಏರ್ಪಾಡು ೧೮೭೦ರಲ್ಲಿ ನಮ್ಮ ದೇಶದಲ್ಲಿ ಆರಂಭವಾಯಿತು. ೧೯೦೬ರ ಹೊತ್ತಿಗೆ ಇದರ ಕಲಾಪಗಳು ಹೆಚ್ಚಿದ ಕಾರಣ ಇದನ್ನು ಟಪ್ಪಾಲಿನ ಉಪಸಂಸ್ಥೆಯಾಗಿ ಏರ್ಪಡಿಸಿದರು. ಟಪ್ಪಾಲಿನ ಅಧಿಕಾರಿಗಳಿಗೂ ರೈಲ್ವೆ ಮೆಯಿಲ್ ಸರ್ವಿಸಿನ ಅಧಿಕಾರಿಗಳಿಗೂ ಒಂದು ವಿಧವಾದ ಭೇದಭಾವವು ಹುಟ್ಟಿದ ಕಾರಣದಿಂದ ಕೆಲಸವು ಸುಲಲಿತವಾಗಿ ನಡೆಯಲು ಪ್ರತಿಬಂಧಕಗಳನೇಕ ಒದಗಿದುವು. ಇವುಗಳ ನಿವಾರಣೆಗೋಸ್ಕರ ಸುಮಾರು ೧೯೨೬ರಲ್ಲಿ ಈ ರೈಲ್ವೆ ಮೆಯಿಲ್ ಸರ್ವಿಸನ್ನು ಆಯಾ ಪ್ರಾಂತಿಕ ಪೋಸ್ಟ್ ಮಾಸ್ಟರ್ ಜನರಲ್‌ರ (Postmaster General) ಆಡಳಿತಕ್ಕೆ ಸೇರಿಸಿದರು. ಈ ವ್ಯವಸ್ಥೆಯೇ ಈಗಲೂ ಆಚರಣೆಯಲ್ಲಿದೆ.

ಮೋಟಾರ್ ಗಾಡಿಗಳಲ್ಲಿ ಟಪ್ಪಾಲನ್ನು ಸುಮಾರು ೨೫,೦೦೦ ಮೈಲಿಗಳ ದೂರ ಸಾಗಿಸುತ್ತಾರೆ. ಮೊದಮೊದಲು ಸರ್ಕಾರದವರು ತಮ್ಮ ಸ್ವಂತ ಗಾಡಿಗಳನ್ನು ದೊಡ್ಡ ಸ್ಥಳಗಳಲ್ಲಿಟ್ಟುಕೊಂಡಿದ್ದರು. ಈಚೆಗೆ ಸಾಮಾನ್ಯವಾಗಿ ಎಲ್ಲಾ

ಕಡೆಗಳಲ್ಲೂ ಪ್ರಕಟನೆ ಮಾಡಿದನಂತರ ಬಂದ ಅರ್ಜಿದಾರರಿಂದ ಆರಿಸಿ ಕಂಟ್ರಾಕ್ಟ್ ಕೊಡುವುದು ರೂಢಿ. ಇದರಲ್ಲಿರುವ ಪೋಟಾಪೋಟಿಯಿಂದ ಸರ್ಕಾರದವರಿಗೆ ಉತ್ತಮ ರಿಯಾಯಿತಿ ಸಿಗುತ್ತದೆ. ಕೆಲವು ಕಡೆಗಳಲ್ಲಿ ಮೋಟಾರ್ ಗಾಡಿಗಳು ಪ್ರಯಾಣಿಕರನ್ನು ಕೂರಿಸಿಕೊಂಡು ಟಪ್ಪಾಲನ್ನು ಒಯ್ಯುತ್ತವೆ. ಅಂತಹ ಸಂದರ್ಭಗಳಲ್ಲಿ ಮೋಟಾರಿನವರೇ ಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ದುಡ್ಡು ಕೊಟ್ಟು ಟಪ್ಪಾಲನ್ನು ಸಾಗಿಸುವುದೂ ಉಂಟು. ಇದಕ್ಕೆ ಕಾರಣವೇನೆಂದರೆ, ಟಪ್ಪಾಲನ್ನು ತೆಗೆದುಕೊಂಡು ಹೋಗುವ ಮೋಟಾರಿನ (Mail Motor) ವಿಚಾರದಲ್ಲಿ ಜನಗಳಿಗೆ ಹೆಚ್ಚು ನಂಬಿಕೆಯೂ ಭರವಸೆಯೂ ಇರುತ್ತವೆ.

ನೀರಿನ ಮೇಲೆ ದೋಣಿಯಲ್ಲೋ, ಹಡಗಿನಲ್ಲೋ ಸುಮಾರು ೯,೦೦೦ ಮೈಲಿ ಟಪ್ಪಾಲು ರವಾನಿಸಲ್ಪಡುತ್ತದೆ. ಈ ಹಡಗುಗಳಿಗೂ ಮೋಟಾರಿನ ರೀತಿ ಹಣವನ್ನು ಪಾವತಿ ಮಾಡುತ್ತಾರೆ. ಎತ್ತಿನ ಗಾಡಿ, ಟಾಂಗ, ಒಂಟೆ ಮುಂತಾದ ವಾಹನಗಳನ್ನುಪಯೋಗಿಸಿ ಸುಮಾರು ೪,೦೦೦ ಮೈಲಿಗಳ ದೂರ ಟಪ್ಪಾಲು ಸಾಗಿಸಲ್ಪಡುತ್ತದೆ. ಮನ್ನಾರ್ (Munnar) ನಲ್ಲಿ ಎರಡು ಗುಡ್ಡಗಳ ನಡುವೆ ಟಪ್ಪಾಲನ್ನು ಸಾಗಿಸಲು ವಿಚಿತ್ರವಾದ ನೂಲು ಹಗ್ಗದ ಮಾರ್ಗವನ್ನು ಉಪಯೋಗಿಸುವರು. ಈ ರೀತಿ ಬಹು ಪುರಾತನವಾದ ಮತ್ತು ನವನಾಗರಿಕವಾದ ಪದ್ಧತಿಗಳು ಆಚರಣೆಯಲ್ಲಿರುತ್ತವೆ. ಈ ಮೇಲೆ ಹೇಳಿರುವುದರಲ್ಲಿ ವಿಮಾನ ಮಾರ್ಗವು ಸೇರಿರುವುದಿಲ್ಲ. ಅದರ ವಿಮರ್ಶೆಯು ಬೇರೆ ಮಾಡಲ್ಪಡುತ್ತದೆ.

ಮೊದಮೊದಲು ಯೂರೋಪಿಗೂ ನಮ್ಮ ದೇಶಕ್ಕೂ ಮಧ್ಯೆ ಏಷ್ಯದ ಮಾರ್ಗವಾಗಿ ಭೂಮಿಯ ಮೇಲೆ ಟಪ್ಪಾಲು ಸಾಗಿಸಲ್ಪಡುತ್ತಿದ್ದಿತು. ಕೇಪ್ ಆಫ್ ಗುಡ್ ಹೋಪ್‌ನ (Cape of Good Hope) ಮುಖಾಂತರ ಸಮುದ್ರ ಮಾರ್ಗವು ಅನಂತರ ತಿಳಿದುಬಂದಿತು. ಈ ಮಾರ್ಗವಾಗಿ ಸುಮಾರು ಎರಡು ಶತಮಾನಗಳು ಈಸ್ಟ್ ಇಂಡಿಯಾ ಕಂಪೆನಿಯ ಹಡಗುಗಳಲ್ಲಿ ಟಪ್ಪಾಲು ಇತರ ಸಾಮಾನುಗಳೊಡನೆ ಬರುತ್ತಿದ್ದಿತು. ೧೮೩೦ರಲ್ಲಿ ಥಾಮಸ್ ವಾಗ್‌ಹಾರ್‍ನ್ (Thomas Waghorn) ಎಂಬಾತನಿಗೆ ಸೂಯೆಜ್ (Suez) ಭೂಕಂಠದ ಮಾರ್ಗವಾಗಿ ಟಪ್ಪಾಲು ಸಾಗಿಸಲ್ಪಡಬಹುದೆಂಬ ಯೋಚನೆ ತಟ್ಟಿತು. ಈ ಮಾರ್ಗವಾಗಿ ೧೮೪೫ನೆಯ ಸಾಲಿನ ಅಕ್ಟೋಬರ್ ೩೧ನೆಯ ತಾರೀಖಿನ ದಿನ ಬೊಂಬಾಯಿಯ ಟಪ್ಪಾಲನ್ನು ೩೦ ದಿನಗಳಾದ ಕೂಡಲೆ ಲಂಡನ್‌ಗೆ ತಲಪಿಸಿದನು.

ಪಿ. ಅಂಡ್ ಒ. ಕಂಪೆನಿಯ (Peninsular and Oriental Steam Navigation Company) ಮುಖಾಂತರ ೧೮೪೪ರಿಂದ ಟಪ್ಪಾಲು ಸಾಗಿಸಲ್ಪಡುತ್ತಲಿದೆ. ಮೊದಲು ಸೂಯೆಜ್ ವರೆಗೆ ಪಿ. ಅಂಡ್ ಒ. ಕಂಪೆನಿಯ ಹಡಗುಗಳೂ ಅಲ್ಲಿಂದ ಈಸ್ಟ್ ಇಂಡಿಯಾ ಕಂಪೆನಿಯ ಹಡಗುಗಳೂ ಟಪ್ಪಾಲನ್ನು ಸಾಗಿಸುತ್ತಿದ್ದುವು. ಕೆಲವು ಕಾಲದ ತರುವಾಯ ಈ ಕೆಲಸವೆಲ್ಲವನ್ನೂ ಪಿ. ಅಂಡ್ ಒ. ಕಂಪೆನಿಯವರೆ ವಹಿಸಿಕೊಂಡರು. ಸೂಯೆಜ್ ಕಾಲುವೆಯು ೧೮೬೯ರಲ್ಲಿ ತೆರೆಯಲ್ಪಟ್ಟರೂ ೧೮೮೮ರಲ್ಲಿ ಟಪ್ಪಾಲು

ಆ ಮಾರ್ಗವಾಗಿ ಬ್ರಿಂಡಿಸಿಯಿಂದ ಬೊಂಬಾಯಿಗೆ ಬಂದಿತು. ಕಳೆದ ದೊಡ್ಡ ಯುದ್ಧದ ಸಮಯದಲ್ಲಿ ಬ್ರಿಂಡಿಸಿ ಮಾರ್ಗವು ನಿಂತುಹೋಯಿತು. ಈಗ ಪ್ರತಿ ವಾರವೂ ಪಿ. ಅಂಡ್ ಒ. ಕಂಪೆನಿಯವರು ಟಪ್ಪಾಲನ್ನು ಸಾಗಿಸುವ ಕಾರ್ಯವನ್ನು ಕ್ರಮ ವಾಗಿ ಜರುಗಿಸುತ್ತಿದಾರೆ. ವಿಮಾನಗಳ ಮುಖಾಂತರ ಚಕ್ರಾಧಿಪತ್ಯದ ದೇಶಗಳಿಗೆ ಎಲ್ಲಾ ಕಾಗದಗಳನ್ನೂ ಕಳು ಹಿಸುವುದು ಆಚರಣೆಗೆ ಬಂದಾಗ ಬರಿಯ ಬುಕ್ ಪೋಸ್ಟ್, ಭಾಂಗಿಗಳೇ ಮುಂತಾದ ಎರಡನೆಯ ತರಗತಿಯ ಟಪ್ಪಾಲು ಮಾತ್ರ (II Class Mail Matter) ಜಹಜುಗಳ ಮುಖಾಂತರ ಹೋಗಿಬರುತ್ತಿದ್ದುವು. ಯುದ್ಧದ ದೆಸೆಯಿಂದ ಕಾಗದ ಪತ್ರಗಳೂ ಈ ಮಾರ್ಗವಾಗಿ ಈಗ ಬರುತ್ತವೆ.

೧೯೧೧ರಲ್ಲಿ ಒಂದು ವಿಮಾನವು ೨೩ ಪೌಂಡುಗಳಷ್ಟು ಭಾರವಾದ ಟಪ್ಪಾಲಿನ ಚೀಲವನ್ನು ಘಂಟೆಗೆ ೫೦ ಮೈಲಿಗಳ ವೇಗದಲ್ಲಿ ಹಾರಿ ನೈನಿಯಿಂದ ಅಲಹಾ ಬಾದಿಗೆ ಯಮುನಾನದಿಯ ಮೇಲೆ ಸುಮಾರು ೨೦ ಮೈಲಿ ದೂರ ಸಾಗಿಸಿತು. ಇದೇ ಮೊದಲು, ಪ್ರಾಯಶಃ ಪ್ರಪಂಚ ದಲ್ಲಿ ವಿಮಾನದ ಮೂಲಕ ಟಪ್ಪಾಲು ಸಾಗಿದುದು. ಇಂಗ್ಲೆಂಡಿ ನಿಂದ ಇಂಡಿಯಕ್ಕೆ (ಕರಾಚಿ ವರೆಗೆ) ವಾರಕ್ಕೊಂದಾವರ್ತಿ ಟಪ್ಪಾಲನ್ನು ಸಾಗಿಸುವ ಏರ್ಪಾಡು ೧೯೨೯ರಲ್ಲಿ ಆಯಿತು. ವಿಮಾನಗಳ ಮೂಲಕ ಟಪ್ಪಾಲನ್ನು ಸಾಗಿಸಲು ಹೆಚ್ಚು ಹಾಸಲು ಕೊಡಬೇಕಾಗಿದ್ದಿತು. ಕರಾಚಿಯಿಂದ ಮದ್ರಾಸಿಗೆ ೧೯೩೨ನೆಯ ಅಕ್ಟೋಬರ್ ೧೫ ರಿಂದ ವಿಮಾನಗಳ ಮೂಲಕ ಟಪ್ಪಾಲನ್ನು ಸಾಗಿಸಲಾರಂಭಿಸಿದರು. ಮೊದಲು ವಾರಕ್ಕೆ

ಒಂದಾವರ್ತಿ ಇದ್ದದ್ದು ಕ್ರಮೇಣ ೧೯೩೪ರಲ್ಲಿ ೫ ಸಲಕ್ಕೆ ಹೆಚ್ಚಿತು. ಈ ಕಾಲದಲ್ಲಿಯೇ ಬೊಂಬಾಯಿನಿಂದ ದೆಹಲಿ, ತಿರುವನಂತಪುರ, ಕಾಥೇವಾಡಗಳಿಗೂ ಕರಾಚಿಯಿಂದ ಲಾಹೋರಿಗೂ ವಿಮಾನಗಳಲ್ಲಿ ಟಪ್ಪಾಲನ್ನು ಸಾಗಿಸುವುದು ರೂಢಿಗೆ ಬಂದಿತು. ವಿಮಾನಗಳು ಎರಡು ವಿಧವಾಗಿವೆ. ನೆಲದ ಮೇಲೆ ತಂಗುವುದು (Land Planes) ಮತ್ತು ನೀರಿನ ಮೇಲೆ ತಂಗುವುದು (Sea Planes). ಈ ಎರಡು ರೀತಿಯ ವಿಮಾನಗಳೂ ಕರಾಚಿಯಿಂದ ಕಲ್ಕತ್ತೆಗೆ ಹೋಗುವ ಮಾರ್ಗದಲ್ಲಿ ಹಾರುತ್ತವೆ. ನೀರಿನ ಮೇಲೆ ತಂಗುವ ವಿಮಾನಗಳ ಮಾರ್ಗವೇ ಬೇರೆ. ಉದಯಪುರ ಸಂಸ್ಥಾನಕ್ಕೆ ಸೇರಿದ ನಾಥದ್ವಾರ (ಕಂಕ್ರೋಲಿ) ಎಂಬ ಯಾತ್ರಾಸ್ಥಳದ ಸಮೀಪದಲ್ಲಿರುವ ರಾಜ್ ಸಮುಂದ್ ಎಂಬ ತಟಾಕದಲ್ಲಿ ನೀರಿನ ಮೇಲೆ ವಿಮಾನವು ತಂಗುವುದನ್ನು ನೋಡಬಹುದು. ೧೯೩೪ರಲ್ಲಿ ವಿಮಾನಗಳ ಮೂಲಕ ಎಲ್ಲಾ ಕಾಗದಗಳನ್ನೂ ಕಳುಹಿಸುವಂತೆ ಏರ್ಪಾಡಾಗಿ, ಚಕ್ರಾಧಿಪತ್ಯಕ್ಕೆಲ್ಲಾ ಒಂದೇ ಹಾಸಲು ನಿಯಾಮಕವಾಯಿತು. ಆದರೆ ಈಗ ನಡೆಯುತ್ತಿರುವ ಮಹಾಯುದ್ಧದ ಕಾರಣದಿಂದ ವಿಮಾನಗಳ ಚಲನೆಯು ವ್ಯತ್ಯಾಸ ಹೊಂದಿದೆ. ಟಪ್ಪಾಲು ಹಾಸಲೂ ಕೂಡ ಕಾಲಾನುಗುಣವಾಗಿ ಹೆಚ್ಚಿಸಲ್ಪಟ್ಟಿದೆ. ಈ ಕೆಳಗೆ ಕೊಟ್ಟಿರುವ ತಃಖ್ತೆಯಿಂದ ನಮ್ಮ ದೇಶದಲ್ಲಿ ಕಳೆದ ವರ್ಷ ಎಷ್ಟರಮಟ್ಟಿಗೆ ಟಪ್ಪಾಲನ್ನು ಯಾವ ಯಾವ ವಿಮಾನಗಳಲ್ಲಿ ರವಾನಿಸಿದರೆಂಬುದು ವ್ಯಕ್ತವಾಗುತ್ತದೆ.

ನಂ	ಕಂಪೆನಿಯು ಹೆಸರು	ಎಲ್ಲಿಂದ ಎಲ್ಲಿಗೆ ಹೋಗುವುದು	ದಿಕ್ಕು	ಪ್ರಯಾಣದ ಸಂಖ್ಯೆ ೧೯೩೭–೩೮	ಪ್ರಯಾಣದ ಸಂಖ್ಯೆ ೧೯೩೮–೩೯	ಟಪ್ಪಾಲಿನ ತೂಕ (ಪೌಂಡುಗಳು) ೧೯೩೭–೩೮	ಟಪ್ಪಾಲಿನ ತೂಕ (ಪೌಂಡುಗಳು) ೧೯೩೮–೩೯
೧	ಇಂಪೀರಿಯಲ್ ಏರ್‌ವೇಸ್ ಮತ್ತು ಇಂಡಿಯನ್ ಟ್ರಾನ್ಸ್ ಕಾಂಟಿನೆಂಟಲ್ ಏರ್‌ವೇಸ್	ಇಂಗ್ಲೆಂಡ್ – ಇಂಡಿಯಾ	ಪೂರ್ವ	೧೧೭	೨೬೪	೧,೫೫,೧೭೯	೫,೦೭,೬೯೭
			ಪಶ್ಚಿಮ	೧೧೫	೨೪೧	೧,೪೨,೦೪೧	೩,೭೧,೮೨೫
		ಇಂಡಿಯಾ – ಸಿಂಗಪೂರ್ – ಆಸ್ಟ್ರೇಲಿಯ	ಪೂರ್ವ	೧೧೫	೨೫೬	೮೪,೬೯೫	೨,೬೨,೪೧೨
			ಪಶ್ಚಿಮ	೧೧೪	೨೪೩	೮೮,೪೭೫	೨,೧೯,೫೮೮
೨	ಮೆಸರ್ಸ್ ತಾತಾ ಅಂಡ್ ಸನ್ಸ್, ಲಿಮಿಟೆಡ್	ಕರಾಚಿ – ಮದ್ರಾಸ್ – ಕೊಲಂಬೊ	ದಕ್ಷಿಣ	೧೧೫	೨೫೧	೫೯,೬೩೮	೨,೨೨,೩೬೫
			ಉತ್ತರ	೧೧೩	೨೪೪	೫೫,೨೩೬	೧,೬೦,೭೭೮
		ಬೊಂಬಾಯಿ – ತಿರುವನಂತಪುರ – ತಿರುಚನಾಪಳ್ಳಿ	ದಕ್ಷಿಣ	೨೫	೨೪	೨೭೬	೨೭
			ಉತ್ತರ	೨೫	೨೪	೧೧೩	೩೧
		ಬೊಂಬಾಯಿ – ದೆಹಲಿ	ದಕ್ಷಿಣ	೪೦	೫೨	೬೪	೨೨
			ಉತ್ತರ	೪೧	೫೩	೮೧	೩೨

ನಂ	ಕಂಪೆನಿಯ ಹೆಸರು	ಎಲ್ಲಿಂದ ಎಲ್ಲಿಗೆ ಹೋಗುವುದು	ದಿಕ್ಕು	ಪ್ರಯಾಣದ ಸಂಖ್ಯೆ ೧೯೩೭–೩೮	ಪ್ರಯಾಣದ ಸಂಖ್ಯೆ ೧೯೩೮–೩೯	ಟಪ್ಪಾಲಿನ ತೂಕ (ಪೌಂಡುಗಳು) ೧೯೩೭–೩೮	ಟಪ್ಪಾಲಿನ ತೂಕ (ಪೌಂಡುಗಳು) ೧೯೩೮–೩೯
೩	ದಿ ಇಂಡಿಯನ್ ನ್ಯಾಷನಲ್ ಏರ್‌ವೇಸ್	ಕರಾಚಿ– ಲಾಹೋರ್	ಉತ್ತರ	೧೧೪	೨೩೧	೨೨,೭೮೦	೭೫,೯೨೮
			ದಕ್ಷಿಣ	೧೧೩	೨೪೦	೨೦,೭೩೬	೫೪,೫೫೭
೪	ದಿ ರಾಯಲ್ ಡಚ್ ಏರ್ ಕಂಪೆನಿ (ಕೆ. ಎಲ್. ಎಂ.)	ಜಾಸ್ಕ್ – ಕರಾಚಿ – ಕಲ್ಕತ್ತಾ – ಮೇಡನ್	ಪೂರ್ವ	೧೩೦	೧೫೬	೧೪,೫೭೬	೧೩,೧೭೯
			ಪಶ್ಚಿಮ	೧೨೬	೧೫೭	೨,೧೪೪	೨,೦೬೪
೫	ಏರ್ ಫ್ರಾನ್ಸ್	ಬುಷೈರ್ – ಕರಾಚಿ – ಕಲ್ಕತ್ತಾ – ಹಾನಾಯ್	ಪೂರ್ವ	೫೨	೫೨	೩,೯೪೪	೩,೯೪೯
			ಪಶ್ಚಿಮ	೫೨	೫೨	೧,೦೪೨	೯೬೩
೬	ಮೆಸರ್ಸ್ ಏರ್ ಸರ್ವಿಸಸ್ ಆಫ್ ಇಂಡಿಯಾ, ಲಿಮಿಟೆಡ್	ಬೊಂಬಾಯಿ – ಕಾಥೇವಾಡ	ದಕ್ಷಿಣ	....	೧೧೩	....	೪೬೮
			ಉತ್ತರ	....	೧೧೩	....	೪೧೭

೬. ಜನಸೌಕರ್ಯ ಮತ್ತು ಸಹಕಾರ

ಸಾರ್ವಜನಿಕ ಸೇವೆಗಳಲ್ಲೆಲ್ಲಾ ಟಪ್ಪಾಲಾಫೀಸಿನಷ್ಟು ಪ್ರಜೆಗಳ ಸಮೀಪವರ್ತಿಯಾಗಿರುವುದು ಬೇರೊಂದಿಲ್ಲ. ಸಂಸಾರದ ಬಗೆಬಗೆಯ ಕಷ್ಟಗಳಲ್ಲಿಯೂ, ಗಳಿಸಿದ ಹಣವನ್ನು ಸೌಖ್ಯವಾಗಿಡುವ ವಿಚಾರದಲ್ಲಿಯೂ ಟಪ್ಪಾಲಾಫೀಸಿನವರ ಸಲಹೆಯನ್ನು ಅಪೇಕ್ಷಿಸುವ ವಾಡಿಕೆಯಿದೆ. ಹಿಂದೂ ದೇಶದ ಹಳ್ಳಿ ಹೋಬಳಿಗಳಲ್ಲಿ ಸರ್ಕಾರಿ ನೌಕರರನ್ನು ಕಂಡರೆ ಅನೇಕರು ಬೆದರುವರು. ಆದರೆ ಟಪ್ಪಾಲಿನವನು ಎಲ್ಲರ ಆದರಣೆಗೂ ಪಾತ್ರನು. ಅವನನ್ನು ಎಲ್ಲರೂ ನಿರೀಕ್ಷಿಸುವರು. ಏನೋ ಅಸಂದರ್ಭದಿಂದ ವೇಳೆ ತಪ್ಪಿದರೆ ಆ ವಿಷಯದಲ್ಲಿ ದೂರು ಹೇಳುವುದು ತಪ್ಪದು.

ಹಿಂದೂಸ್ಥಾನದಲ್ಲಿ ಕಾಗದಗಳನ್ನು ಒಟ್ಟುಗೂಡಿಸುವುದು, ಅವುಗಳ ರವಾನೆ ಮತ್ತು ಹಂಚಿಕೆ– ಇವುಗಳಲ್ಲಿ ನಾನಾ ತೆರದ ಕಷ್ಟಗಳಿವೆ. ಅಂತಹ ಕಷ್ಟ ನಿವಾರಣೆಯಾಗಬೇಕಾದರೆ ಜನಗಳ ಸಹಾಯವು ಆವಶ್ಯಕ. ಅವರ ಅವಗಾಹನೆಗಾಗಿ ಆ ವಿಚಾರವನ್ನು ವಿಮರ್ಶೆ ಮಾಡಬೇಕಾಗಿದೆ.

ನಾವು ಜ್ಞಾಪಕದಲ್ಲಿಡಬೇಕಾದ ಅಂಶಗಳಲ್ಲಿ ಮೊದಲನೆಯದು, ಕಾಗದದ ಮೇಲೆ ವಿಳಾಸವನ್ನು ಬರೆಯುವ ವಿಧಾನ. ಯಾವ ಟಪ್ಪಾಲಾಫೀಸಿಗೆ ಕಳುಹಿಸಬೇಕೋ ಅದರ ಹೆಸರು ಪ್ರಾಮುಖ್ಯವಾಗಿ ಕಾಣಬರುವಂತೆ ಇರಬೇಕು. ಬರವಣಿಗೆಯು ಸುಲಭವಾಗಿ ಓದಲು ಸ್ಪಷ್ಟವಾಗಿರಬೇಕಾದದ್ದರ ಆವಶ್ಯಕತೆ ಹೇಳಬೇಕಾಗಿಲ್ಲ. ವಿಳಾಸದಾರರನ್ನು ಸುಲಭ

ವಾಗಿ ಕಂಡುಹಿಡಿಯಲು ಅನುಕೂಲವಾಗುವಂತೆ ಮೊಹಲ್ಲಾ, ರಸ್ತೆ, ಮನೆಯ ಹೆಸರು ಅಥವಾ ಸಂಖ್ಯೆ ಇವುಗಳನ್ನೆಲ್ಲಾ ಕಾಗದದ ಮೇಲೆ ಬರೆದಿದ್ದರೆ ಹಂಚುವಿಕೆಯು ಸುಲಭವಾಗುವುದು. ವಿಳಾಸವಿಲ್ಲದೆ ಕಾಗದಗಳು ತಲಪಿದರೆ ಒಂದು ಮಹತ್ವ ಉಂಟೆಂಬ ತಪ್ಪು ತಿಳುವಳಿಕೆಯು ಕೆಲವರಲ್ಲಿರುವುದರಿಂದ, ಅವರ ಕಾಗದದ ಮೇಲೆ ವಿಳಾಸವನ್ನು ಬರೆಯುವುದೇ ಇಲ್ಲ. ಬರೆದರೂ ಸಾಕಾಗುವಷ್ಟು ಬರೆಯುವುದಿಲ್ಲ. ಮತ್ತೆ ಕೆಲವರು ಅಸಂಬದ್ಧವಾದ ಒಕ್ಕಣೆಗಳನ್ನು ಬರೆಯುವುದುಂಟು. ಅದೂ ಒಂದು ಬಾಧಕವೇ ಆಗಿ ಪರಿಣಮಿಸುತ್ತದೆ.

ಪ್ರತಿ ವರ್ಷವೂ ಸುಮಾರು ಅರ್ಧ ಕೋಟಿಗಿಂತ ಹೆಚ್ಚಾದ ಕಾಗದಗಳು ನಮ್ಮ ದೇಶದಲ್ಲಿ "ಡೆಡ್ ಲೆಟರ್ ಆಫೀಸು"ಗಳನ್ನು ಸೇರುತ್ತವೆ. ಅವುಗಳ ಪೈಕಿ ಶೇಕಡಾ ೪೪ ಬರೆದವರಿಗೆ ವಾಪಸು ಕಳುಹಿಸಲ್ಪಡುತ್ತವೆ. ಸುಮಾರು ಅಷ್ಟೇ ಪ್ರಮಾಣದ ಕಾಗದಗಳನ್ನು ವಿಳಾಸದಾರರಿಗೆ ತಲಪಿಸಲು ಕಳುಹಿಸುವ ಪ್ರಯತ್ನವು ನಡೆಯುತ್ತದೆ. ಕಳೆದ ವರ್ಷ ಸುಮಾರು ೮ ಲಕ್ಷ ಕಾಗದಗಳು ವಿಲೇ ಆಗದೆ "ಡೆಡ್ ಲೆಟರ್ ಆಫೀಸಿ"ನಲ್ಲಿ ನಾಶಮಾಡಲ್ಪಟ್ಟುವು. ಈ ಮೇಲಿನ ಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ದೊಡ್ಡ ದೊಡ್ಡ ಊರುಗಳಲ್ಲಿ ಮುನಿಸಿಪಾಲಿಟಿಗಳ ಸಹಾಯವು ಆವಶ್ಯಕ. ಪಟ್ಟಣಗಳ ರಚನಾಕ್ರಮ, ಬೀದಿಗಳಿಗೆ ಹೆಸರನ್ನು ಕೊಡುವುದು, ಮನೆಗಳಿಗೆ ಕ್ರಮವಾದ ಸಂಖ್ಯೆಯನ್ನು ಕೊಡುವುದು – ಇವು ಕಾಗದಗಳನ್ನು ಹಂಚುವ ಟಪ್ಪಾಲಿನವನಿಗೆ ಅನುಕೂಲವನ್ನು

ಕಲ್ಪಿಸಿಕೊಡುವ ಮಾರ್ಗಗಳು. ಕೆಲವು ಊರುಗಳಲ್ಲಿ ಒಂದು ಪಾರ್ಶ್ವದ ಮನೆಗಳಿಗೆಲ್ಲಾ ಸಮಸಂಖ್ಯೆಯನ್ನೂ ಮತ್ತೊಂದು ಪಾರ್ಶ್ವದ ಮನೆಗಳಿಗೆ ವಿಷಮಸಂಖ್ಯೆಯನ್ನೂ ಕೊಡುವ ರೂಢಿ ಇರುತ್ತದೆ. ಇನ್ನು ಕೆಲವು ಕಡೆ ಮನೆಗಳ ಸಂಖ್ಯೆಯನ್ನು ಬದಲಾಯಿಸುವ ಉದ್ದೇಶದಿಂದ ಹಳೆಯ ಸಂಖ್ಯೆಗಳನ್ನು ಅಳಿಸಿ ಹೊಸ ಸಂಖ್ಯೆಗಳನ್ನು ಬರೆಯುವುದೂ ಉಂಟು. ಅಂತಹ ಸಂದರ್ಭಗಳಲ್ಲಿ ಹಳೆಯ ನಂಬರುಳ್ಳ ಕಾಗದಗಳು ವಿಳಾಸದಾರರಿಗೆ ಸೇರದೆ ಹೋಗಬಹುದು.

ಕಾಗದಗಳ ಮೇಲೆ ತಲೆಚೀಟಿ (Stamps) ಗಳನ್ನು ಅಂಟಿಸಬಹುದಾದ ಸ್ಥಳದ ವಿಚಾರದಲ್ಲಿ ಸ್ವಲ್ಪ ತಿಳಿವಳಿಕೆ ಇರಬೇಕು. ತಲೆಚೀಟಿಗಳನ್ನು ಏತಕ್ಕೋಸ್ಕರ ಅಂಟಿಸಬೇಕೆಂಬುದನ್ನು ಗಮನಿಸಿದರೆ ನಾವು ಟಪ್ಪಾಲಾಫೀಸಿನಿಂದ ಪಡೆಯುವ ಸೌಕರ್ಯದ ಸಲುವಾಗಿ ಕೊಡುವ ರುಸುಂ ಎಂದು ವ್ಯಕ್ತವಾಗುತ್ತದೆ. ರುಸುಂ ಪೂರ್ತಿಯಾಗಿ ಪಾವತಿಯಾಗಿದೆಯೆಂದು ಸುಲಭವಾಗಿ ತಿಳಿಸಬೇಕಾದರೆ ನಿಯಮಿತವಾದ ಎಡೆಯಲ್ಲಿಯೇ ಕೇವಲ ಅಲ್ಪ ಸಂಖ್ಯೆಗಳ ತಲೆಚೀಟಿಗಳನ್ನು ಅಂಟಿಸುವುದು ಸಾಧು. ಇದರಿಂದ ಮುಖ್ಯ ಪ್ರಯೋಜನಗಳೇನೆಂದರೆ: (೧) ರುಸುಂ ಪೂರ್ತಿಯಾಗಿ ಕೊಟ್ಟಿದೆ ಎಂದು ಸುಲಭವಾಗಿ ತಿಳಿದರೆ ಕಾಲಹರಣವು ಕಮ್ಮಿಯಾಗುವುದು. (೨) ವ್ಯರ್ಥವಾದ ಹೆಚ್ಚು ತಲೆಚೀಟಿಗಳನ್ನು ತಯಾರಿಸುವುದಕ್ಕೆ ಹೆಚ್ಚು ಖರ್ಚು ಆಗುವುದು. (೩) ನಿಯಮಿತ ಎಡೆಯಲ್ಲಿಯೇ ತಲೆಚೀಟಿಗಳಿದ್ದರೆ ಅವುಗಳನ್ನು ರದ್ದು ಮಾಡಲು ಹೆಚ್ಚು ಕಾಲ ಹಿಡಿಯುವುದಿಲ್ಲ.

ನಾವು ನೆನಪಿನಲ್ಲಿಡಬೇಕಾದ ಎರಡನೆಯ ವಿಚಾರ ವೇನೆಂದರೆ ಟಪ್ಪಾಲು ಪೆಟ್ಟಿಗೆಗಳಲ್ಲಿ ಕಾಗದಗಳನ್ನು ಹಾಕುವುದು. ಟಪ್ಪಾಲು ಪೆಟ್ಟಿಗೆಯನ್ನು ಕೊನೆಯ ಸಲ ತೆರೆಯುವ ಹೊತ್ತಿಗೆ ಕಾಗದಗಳನ್ನು ಹಾಕುವ ರೂಢಿಯು ಸಾಮಾನ್ಯವಾಗಿರುತ್ತದೆ. ಕಾಗದಗಳನ್ನು ಯಾವಾಗ ಬರೆದರೂ ಟಪ್ಪಾಲಾಫೀಸಿಗೆ ಕಳುಹಿಸುವುದಕ್ಕೆ ಅನೇಕರು ಸಾವಕಾಶ ಮಾಡುವರು. ಟಪ್ಪಾಲಾಫೀಸಿನಲ್ಲಿ ನಡೆಯುವ ಕಾರ್ಯಕಲಾಪಗಳನ್ನು ಅಳೆದು ಪ್ರತಿ ನೌಕರನೂ ಎಂಟು ಘಂಟೆಗಳ ಕಾಲ ಹಾಜರಿದ್ದು ಕೆಲಸಮಾಡುವಂತೆ ಲೆಕ್ಕಿಸಿ ಸಿಬ್ಬಂದಿ ಕೊಡುವ ವಾಡಿಕೆ ಬಂದಿರುತ್ತದೆ. ಕಾರ್ಯತಃ ಕೆಲಸವೆಲ್ಲವೂ ಮೂರು ನಾಲ್ಕು ಘಂಟೆಗಳಲ್ಲಿ ಜರುಗಬೇಕಾಗುತ್ತದೆ. ಇದರ ಪರಿಣಾಮವೇನಾಗುವುದು ಎಂಬುದನ್ನು ಎಲ್ಲರೂ ಗಮನಕ್ಕೆ ತಂದುಕೊಂಡರೆ ಟಪ್ಪಾಲು ಇಲಾಖೆಗೆ ಬಹಳ ಉಪಕಾರ ಮಾಡಿದಂತಾಗುತ್ತದೆ.

"ಆತುರಗಾರನಿಗೆ ಬುದ್ಧಿ ಮಟ್ಟು" ಎಂಬ ಸಾಮತಿಯಂತೆ ಅವಸರದಲ್ಲಿ ಮಾಡುವ ಕೆಲಸವು ಚೆನ್ನಾಗಿ ಆಗುವುದಿಲ್ಲ. ಅದರಿಂದ ಅನೇಕ ಅನಾನುಕೂಲಗಳೂ ಅನರ್ಥಗಳೂ ಉಂಟಾಗಲು ಅವಕಾಶವಾಗುತ್ತದೆ. ಕಾಗದಗಳನ್ನು ರಿಜಿಸ್ಟರ್ ಮಾಡುವುದೇ ಆಗಲಿ, ಮನಿ ಆರ್ಡರನ್ನು ರವಾನಿಸುವುದೇ ಆಗಲಿ, ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣವನ್ನಿಡುವುದೋ, ತೆಗೆದುಕೊಳ್ಳುವುದೋ ಯಾವುದೇ ಆಗಲಿ– ಈ ಎಲ್ಲಾ ಕೆಲಸಗಳ ಕೊನೆಯ ಒಂದೆರಡು ಘಂಟೆಗಳ ಅವಾಂತರವು ಬಹಳ ತಾಪತ್ರಯನ್ನುಂಟುಮಾಡುವುದು.

ಊರು ದೊಡ್ಡದಾದ ಹಾಗೆಲ್ಲಾ ಈ ಬಗೆಯ ಕಷ್ಟಗಳೂ ಹೆಚ್ಚುತ್ತವೆ. ಕಾರ್ಯವು ನೆರವೇರದಿದ್ದಾಗ ಟಪ್ಪಾಲ್ ಆಫೀಸಿನವರನ್ನು ದೂರುವುದರಲ್ಲಿ ವಿಶೇಷವೇನೂ ಇಲ್ಲ. ಅಲ್ಪ ಕಾಲದಲ್ಲಿ ಹೆಚ್ಚು ಕೆಲಸವು ಸಮರ್ಪಕವಾಗಿ ಜರುಗು ವಂತೆ ನೌಕರರನ್ನು ಇಡಬೇಕಾದರೆ, ಖರ್ಚು ದ್ವಿಗುಣ ವಾಗುವುದು. ಈ ಇಲಾಖೆಯ ಧ್ಯೇಯವು ಖರ್ಚೆಲ್ಲವೂ ವರಮಾನದಿಂದ ನಡೆಯತಕ್ಕದ್ದೆಂದಿರುವುದರಿಂದ ಖರ್ಚು ಬೆಳೆಯುತ್ತ ಹೋದರೆ ಹೆಚ್ಚು ಹಾಸಲನ್ನು ಜನಗಳಿಂದ ವಸೂಲು ಮಾಡಬೇಕಾದೀತು.

ಮೂರನೆಯ ವಿಚಾರ: ಕಾಗದಗಳನ್ನು ನಿರೀಕ್ಷಿಸುತ್ತ ಅನೇಕ ಮಂದಿ ದಿನವಹಿ ಟಪ್ಪಾಲಾಫೀಸಿನ ಹತ್ತಿರ ಕಾದಿದ್ದು ಟಪ್ಪಾಲಿನವನು ಹೊರಗೆ ಬಂದ ಕೂಡಲೆ ತಮ್ಮ ಕಾಗದಗಳನ್ನು ಕೇಳುವುದನ್ನು ನಾವೆಲ್ಲರೂ ನೋಡುತ್ತೇವೆ. ಇದರಿಂದ ಕಾಗದಗಳನ್ನು ಕೇಳುವವರಿಗೆ ಅಷ್ಟೇನೂ ಅನುಕೂಲವಾಗದಿದ್ದರೂ ಇತರರಿಗೆ ಅನಾನುಕೂಲವಾಗು ವುದು ಖಂಡಿತ. ಏಕೆಂದರೆ ಪ್ರತಿಯೊಬ್ಬನೂ ಕೇಳಿದ ಹಾಗೆಲ್ಲಾ ಟಪ್ಪಾಲಿನವನು ಹುಡುಕಲು ಯತ್ನಿಸಿದರೆ ಅವನಿಗೆ ಬಹಳ ಕಾಲಹರಣವಾಗುವುದು. ವಿಳಾಸದಾರರಿಗೆ ಕಾಗದಗಳು ಸೇರಲು ಅಷ್ಟು ಕಾಲ ಸಾವಕಾಶವಾಗುವುದು. ಇದನ್ನು ಪರಿಹರಿಸಲು ಟಪ್ಪಾಲು ಆಫೀಸುಗಳಲ್ಲಿ ಟಪ್ಪಾಲು ಪೆಟ್ಟಿಗೆಗಳಿಂದಲೂ (Post Boxes) ಮತ್ತು ಕಿಟಕಿ ಯಿಂದಲೂ (Window Delivery) ಕಾಗದಗಳನ್ನು ಕೊಡುವ ಸೌಕರ್ಯಗಳು ಇವೆ. ಇವುಗಳ ವಿವರಗಳನ್ನು

ಸ್ಥಳೀಯ ಪೋಸ್ಟ್ ಮಾಸ್ಟರನ್ನು ಕೇಳಿ ತಿಳಿದು ಅನುಷ್ಠಾನಕ್ಕೆ ತಂದರೆ ಉಭಯತ್ರರಿಗೂ ಅನುಕೂಲವಾಗುವುದು. ಟಪ್ಪಾಲಿನವನು ಕಾಗದಗಳನ್ನು ಹಂಚುವಾಗ ಮನೆಯ ಬಾಗಿಲು ಹಾಕಿದ್ದರೆ ಮನೆಯವರನ್ನು ಕೂಗಿ ಕಾಯಬೇಕಾದ ಸಂದರ್ಭಗಳೂ ಉಂಟು. ದೊಡ್ಡ ಪಟ್ಟಣಗಳಲ್ಲಿ ನಾಲ್ಕು ಐದು ಮಹಡಿಗಳನ್ನು ಹತ್ತಿ ಕಾಗದಗಳನ್ನು ಕೊಡಬೇಕಾಗುತ್ತದೆ. ಮನೆಯ ಕೆಳಭಾಗದಲ್ಲಿ ಹೆಸರನ್ನು ಬರೆದ ಪೆಟ್ಟಿಗೆಯನ್ನು ಇಟ್ಟರೆ ಆಯಾ ವಿಳಾಸದಾರರ ಕಾಗದಗಳನ್ನು ಅವರವರ ಪೆಟ್ಟಿಗೆಗಳಲ್ಲಿ ಹಾಕಿ ಮುಂದೆ ಬೇಗನೆ ಹೋಗಲು ಅನುಕೂಲವಾಗುತ್ತದೆ. ಈ ಪದ್ಧತಿಯನ್ನು ಆಚರಣೆಗೆ ತರುವುದು ಒಳ್ಳೆಯದು.

ಟಪ್ಪಾಲು ಹಾಸಲನ್ನು ಕೊಡದೆ "ನಾಟ್ ಪೇಡ್" (Not Paid) ಕಾಗದ ಬರೆದರೆ ಖಾತ್ರಿಯಾಗಿ ವಿಳಾಸದಾರರಿಗೆ ತಲಪುತ್ತದೆಯೆಂಬ ಮೂಢಭಕ್ತಿಯೋ ಅಥವಾ ನಂಬಿಕೆಯೋ ಅನೇಕ ಜನರಲ್ಲಿದೆ. ಇದಕ್ಕೆ ತಕ್ಕ ಕಾರಣಗಳಾವುವೂ ಇರುವ ಹಾಗೆ ಕಾಣುವುದಿಲ್ಲ. ವಿಳಾಸದಾರರಿಂದ ರುಸುಂ ವಸೂಲ್ಮಾಡುವ ಪದ್ಧತಿಯು ಹೆಚ್ಚು ಕಾಲ ಹಿಡಿಯುವ ಕಾರಣ ಕಾಗದ ತಲಪುವುದಕ್ಕೆ ಸಾವಕಾಶವಾಗುವುದರಲ್ಲಿ ಸಂಶಯವಿಲ್ಲ.

ನಿಯಮಗಳಿಗನುಸಾರವಾಗಿ ನಡೆಯಲಪೇಕ್ಷೆಯುಳ್ಳವರು ಎರಡು ಮೂರು ವಿಷಯಗಳಿಗೆ ಗಮನ ಕೊಡಬೇಕು. (೧) ಬುಕ್ ಪ್ಯಾಕೆಟ್ (Book Packet) ಗಳನ್ನು ಸರಿಯಾದ ರೀತಿಯಲ್ಲಿ ಕಳುಹಿಸುವುದು. ಅಂದರೆ ಸುಲಭ

ವಾಗಿ ಒಳಗಿನ ವಿಷಯಗಳನ್ನು ಪರೀಕ್ಷಿಸಲು ಅನುಕೂಲವಾಗುವಂತೆ ಪ್ಯಾಕ್ ಮಾಡುವುದು. (೨) ಯೋಗಕ್ಷೇಮ ವಿಚಾರವಾವುದನ್ನೂ ಬರೆಯದೇ ಇರುವುದು. ಹಾಗೆ ಬರೆದದ್ದೇ ಆದರೆ ಅಂಥದನ್ನು ಕಾಗದವೆಂದೋ, ಭಾಂಗಿ ಎಂದೋ ಭಾವಿಸಿ ತಕ್ಕ ಹಾಸಲನ್ನು ವಸೂಲ್ಮಾಡುತ್ತಾರೆ. ಈ ಪ್ಯಾಕೆಟ್‌ಗಳನ್ನು ಪರೀಕ್ಷಿಸಲು ಹಿಡಿಯಬಹುದಾದ ಕಾಲವನ್ನು ಉಳಿಸುವ ಉಪಾಯವು ಜನಗಳಿಗೆ ಸೇರಿದ್ದಾಗಿದೆ. (೩) ಕರೆನ್ಸಿ ನೋಟುಗಳನ್ನು ಕಳುಹಿಸಬೇಕಾದರೆ ಅವುಗಳನ್ನೊಳಗೊಂಡಿರುವ ಕಾಗದಗಳನ್ನು ವಿಮೆ ಮಾಡಲೇಬೇಕೆಂಬ ನಿಯಮವಿದೆ. ಆಚರಣೆಯಲ್ಲಾದರೊ ವಿದ್ಯಾವಂತರೂ ನೋಟುಗಳನ್ನು ಸಾದಾ ಕಾಗದದಲ್ಲೊ, ವಿಮೆ ಮಾಡದ ರಿಜಿಸ್ಟರ್ಡ್ ಕಾಗದದಲ್ಲೊ ಕಳುಹಿಸುತ್ತಾರೆ. ಈ ಪದ್ಧತಿಯಿಂದ ಜನಗಳಿಗೆ ನಷ್ಟವೂ ಇಲಾಖೆಯವರಿಗೆ ತೊಂದರೆಯೂ ಆಗುವುವು. (೪) ಲಾಟರಿ (Lottery) ಸಂಬಂಧವಾದ ಪ್ರಕಟನೆ ಪತ್ರಗಳನ್ನು ಟಪ್ಪಾಲಿನ ಮೂಲಕ ಕಳುಹಿಸಕೂಡದೆಂಬ ನಿಯಮವಿದೆ. ತಿಳಿದದ್ದೇ ಆದರೆ ಇವನ್ನು ವಾಪಸು ಕಳುಹಿಸುತ್ತಾರೆ. ಈ ನಿಯಮವನ್ನು ಕೆಲವರು ಆಶೋತ್ತರದಿಂದ ಉಲ್ಲಂಘಿಸಿ ಕಳುಹಿಸುತ್ತಾರೆ.

ಟಪ್ಪಾಲ್ ಆಫೀಸಿಗೆ ಕಾಗದಗಳು ತಲಪಿದವೆಂಬ ದಾಖಲೆಯ (Certificate of Posting) ಅರ್ಥವನ್ನು ತಿಳಿದುಕೊಳ್ಳುವುದು ಆವಶ್ಯಕ. ಜನಗಳು ನೌಕರರ ಮುಖಾಂತರ ಟಪ್ಪಾಲಿನಲ್ಲಿ ಹಾಕಲು ಕಳುಹಿಸಿದ ಪತ್ರಗಳು ನಿಜವಾಗಿ ಟಪ್ಪಾಲಾಫೀಸಿಗೆ ಸೇರಿದುವೆಂಬುದನ್ನು ತಿಳಿಸಲು

ಈ ದಾಖಲೆ ಏರ್ಪಾಡಾಗಿದೆ. ಟಪ್ಪಾಲಾಫೀಸಿನಲ್ಲಿ ಮಿಕ್ಕ ಎಲ್ಲಾ ಕಾಗದಗಳಂತೆ ಇವುಗಳನ್ನೂ ರವಾನಿಸುತ್ತಾರೆ. ಈ ದಾಖಲೆಯಿಂದ ರಿಜಿಸ್ಟರ್ ಮಾಡಿದ ಫಲವುಂಟಾಗುತ್ತದೆ ಯೆಂಬ ಭಾವನೆಯು ತಪ್ಪು ತಿಳಿವಳಿಕೆಯಾಗಿರುವುದು.

ಈಚೆಗೆ ಕಲ್ಪಿಸಿರುವ ಸೌಕರ್ಯಗಳ ಪೈಕಿ ತ್ವರೆಯ ಪಾವತಿ (Express Delivery) ಎಂಬುದು ಒಂದು. ಕಾಗದವು ಎಂದಿನಂತೆಯೆ ರವಾನೆಯಾದರೂ ಪಾವತಿ ಯಾಗುವ ಊರಿನಲ್ಲಿ ತಂತಿಯಂತೆ ತ್ವರೆಯಿಂದ ವಿಳಾಸ ದಾರರಿಗೆ ತಲಪುವುದು. ಇಂತಹ ಕಾಗದಗಳನ್ನು ಸುಲಭ ವಾಗಿ ಆರಿಸಲು ಅನುಕೂಲವಾಗುವುದಕ್ಕೋಸ್ಕರ ಕೆಂಪು ಬಣ್ಣದ Express Delivery ಚೀಟಿಗಳನ್ನು ಅಂಟಿಸು ವುದು ಮೇಲು. ಈ ಚೀಟಿಗಳನ್ನು ಉಚಿತವಾಗಿ ಟಪ್ಪಾಲ್ ಆಫೀಸಿನಿಂದ ಪಡೆಯಬಹುದು.

ನವೀನ ಸೌಕರ್ಯಗಳ ಪೈಕಿ ಮತ್ತೊಂದು ವ್ಯಾಪಾರದ ಪ್ರತ್ಯುತ್ತರ (Business Reply)ಗಳ ವ್ಯವಸ್ಥೆ. ವ್ಯಾಪಾ ರಸ್ಥರು ತಲೆಚೀಟಿಗಳನ್ನು ಹಚ್ಚಿದ ಕಾಗದಗಳನ್ನೂ, ಕಾರ್ಡುಗಳನ್ನೂ ಗಿರಾಕಿಗಳಿಗೆ ಪೂರ್ವದಲ್ಲಿ ಕಳುಹಿಸು ತ್ತಿದ್ದರು. ಇದರಲ್ಲಿ ಒಂದು ದೊಡ್ಡ ನ್ಯೂನತೆಯಿತ್ತು. ವಿಳಾಸದಾರರು ಅಂತಹ ಕಾಗದಗಳನ್ನು ತಮಗೆ ಬೇಕಾದ ಬೇರೆ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಬಹುದಾಗಿದ್ದಿತು. ಈ ದುರುಪಯೋಗದಿಂದ ವ್ಯಾಪಾರಸ್ಥರಿಗೆ ನಷ್ಟವೇ ಹೆಚ್ಚಾ ಗಿದ್ದಿತು. ಈ ಹೊಸ ಏರ್ಪಾಡು ಮೇಲೆ ಹೇಳಿದ ನ್ಯೂನತೆ ಯನ್ನು ಹೋಗಲಾಡಿಸುವುದಕ್ಕೆ ಮಾಡಿದುದು. ಇದರ

ಪ್ರಕಾರ ತಲೆಚೀಟಿ ಹಚ್ಚದೆ ಕವರು ಕಾರ್ಡುಗಳನ್ನು ಗಿರಾಕಿದಾರರು ಕಳುಹಿಸಬಹುದು. ಆದರೆ ಅವರ ಮೇಲೆ ಕೆಲವು ವಿಧಾಯಕವಾದ ವಿಷಯಗಳನ್ನು ಸೂಚಿಸಬೇಕು. ಅಂತಹ ಕಾಗದಗಳು ಗಿರಾಕಿಗಳಿಂದ ಬಂದರೆ ಅವುಗಳಿಗಾಗಿ ಒಂದೇ ಹಾಸಲನ್ನು ವಸೂಲ್ಮಾಡಿ ವ್ಯಾಪಾರಗಾರರಿಗೆ ತಲಪಿಸುತ್ತಾರೆ. ಇಂತಹ ವ್ಯವಸ್ಥೆಯನ್ನು ಆಚರಣೆಗೆ ತರಲು ಕೊಡುವ ಅನುಮತಿ ಪತ್ರಕ್ಕೆ (Permit) ವರ್ಷಕ್ಕೆ ಹತ್ತು ರೂಪಾಯಿಗಳನ್ನು ಕೊಡಬೇಕು.

ಪರಸ್ಥಳಗಳಿಗೆ ಹೋಗುವವರು ಟಪ್ಪಾಲ್ ಆಫೀಸಿನಿಂದ ಹಣವನ್ನೇ ಆಗಲಿ, ರಿಜಿಸ್ಟರ್ಡ್ ಕಾಗದಗಳನ್ನೇ ಆಗಲಿ ಹೊಂದಲು ಬಹಳ ಪಾಡುಪಡುತ್ತಾರೆ. ಟಪ್ಪಾಲ್ ಆಫೀಸಿನವರಿಗೆ ತಿಳಿದಂತಹ ಸ್ಥಳೀಕರ ಗುರುತು ಕೊಡಬೇಕು. ಇದು ಅನೇಕ ಸಂದರ್ಭಗಳಲ್ಲಿ ಸಾಧ್ಯವಾಗುವುದಿಲ್ಲ. ಈ ಕಷ್ಟವು ಯಾತ್ರಿಕರಿಗೆ ಹೆಚ್ಚಾಗಿ ಅನ್ವಯಿಸುತ್ತದೆ. ಪ್ರಯಾಣ ಬೆಳಸುವುದಕ್ಕೆ ಮುಂಚೆ ತಮ್ಮ ಊರಿನ ಟಪ್ಪಾಲಾಫೀಸಿನ ಮುಖಾಂತರ ಒಂದು ಗುರ್ತೀಕರಿಸುವ ಕಾರ್ಡನ್ನು (Identification Card) ಪಡೆದು ಈ ತೊಂದರೆಗೆ ಒಳಗಾಗದೆ ಇರಬಹುದು. ಅಂತಹ ಕಾರ್ಡನ್ನು ಪಡೆಯಬೇಕಾದರೆ ಒಂದು ಫೋಟೋವಿನೊಡನೆ ಒಂದು ರೂಪಾಯನ್ನು ಕೊಡಬೇಕು. ಆ ಕಾರ್ಡು ಮೂರು ವರ್ಷದ ಪರ್ಯಂತರ ಉಪಯೋಗಕ್ಕೆ ಬರುತ್ತದೆ.

ಟಪ್ಪಾಲಾಫೀಸಿನ ಸೇವಿಂಗ್ಸ್ ಬ್ಯಾಂಕಿನ ಠೇವಣಿದಾರರು ಎರಡು ಮೂರು ವಿಷಯಗಳನ್ನು ನೆನಪಿನಲ್ಲಿಡ

ಬೇಕಾದುದು ಆವಶ್ಯಕ: ಚಿಕ್ಕ ಟಪ್ಪಾಲಾಫೀಸಿನಲ್ಲಿ ಹಣ ವನ್ನು ತೀವಣಿ ಕಟ್ಟಿದರೆ ಮುಖ್ಯ ಕಛೇರಿ (Head Office) ಯಿಂದ ಒಂದು ಒಪ್ಪಿಗೆ ರಸೀತಿ ಬರುವುದನ್ನು ನಿರೀಕ್ಷಿಸಿ ಅದರಲ್ಲಿ ಸರಿಯಾಗಿ ಹಣ ಜಮಾ ಆಗಿರುವುದೆಂಬ ವಿಷಯ ವನ್ನು ಅರಿತುಕೊಳ್ಳುವುದು. ಹಾಗೆ ಆ ಒಪ್ಪಿಗೆ ರಸೀತಿ ಬಾರದಿದ್ದರೆ, ಅಥವಾ ಬಂದುದರಲ್ಲಿ ತಪ್ಪೇನಾದರೂ ಕಂಡು ಬಂದರೆ ಮುಖ್ಯ ಕಛೇರಿಯ ಪೋಸ್ಟ್ ಮಾಸ್ಟರಿಗೆ ದೂರು ಹೇಳುವುದು. ಪಾಸ್‌ಬುಕ್ಕನ್ನು ಜೋಪಾನವಾಗಿ ತಮ್ಮಲ್ಲಿಯೇ ಇಟ್ಟುಕೊಂಡಿರುವುದು ಒಳ್ಳೆಯದು. ಏನಾದರೂ ಕೆಲಸಕ್ಕೆ ಟಪ್ಪಾಲಾಫೀಸಿಗೆ ಆ ಪುಸ್ತಕವನ್ನು ಕೊಟ್ಟರೆ ಅದಕ್ಕೆ ರಸೀತಿ ಪಡೆದಿಟ್ಟಿರಬೇಕು. ಮೂರನೆಯ ವಿಷಯವೇನೆಂದರೆ ಸಹಿಯ ನಮೂನೆಯನ್ನು ಎಂದಿಗೂ ಪುಸ್ತಕದಲ್ಲಿಡಬಾರದು. ಇದ ರಿಂದ ಬಹು ಅನರ್ಥವಾಗುವ ಸಂಭವವಿದೆ.

ಟಪ್ಪಾಲಿನ ನೌಕರರ ಪೈಕಿ ಕಾಗದಗಳನ್ನು ಹಂಚುವವ ರಿಗೆ, ಕಾಗದಗಳನ್ನು ಪೆಟ್ಟಿಗೆಗಳಿಂದ ಟಪ್ಪಾಲಾಫೀಸಿಗೆ ತೆಗೆದುಕೊಂಡು ಹೋಗುವವರಿಗೆ ಮತ್ತು ಟಪ್ಪಾಲು ಚೀಲ ಗಳನ್ನು ಹೊರುವವರಿಗೆ ಅವರವರ ಕಾರ್ಯಕ್ಕನುಗುಣವಾದ ಬಿಲ್ಲೆಗಳನ್ನು ಸರ್ಕಾರದವರು ಕೊಟ್ಟಿರುತ್ತಾರೆ. ಸರ್ಕಾರಿ ಕೆಲಸ ಮಾಡುವಾಗ ಆ ಬಿಲ್ಲೆಗಳನ್ನು ಅವರು ಧರಿಸದೆ ಹೋದರೆ ಈ ಅಂಶವನ್ನು ಆಯಾ ಸ್ಥಳದ ಅಧಿಕಾರಿಗಳ ಗಮನಕ್ಕೆ ತರುವುದು ಒಳ್ಳೆಯದು. ಹಾಗೆ ಮಾಡುವುದ ರಿಂದ ಈ ಇಲಾಖೆಗೆ ಸಂಬಂಧವಿಲ್ಲದವರ ಮೂಲಕ

ಕಾರ್ಯವು ಜರುಗುವುದೇನಾದರೂ ಇದ್ದರೆ ಅದು ಪೂರ್ಣ ವಾಗಿ ನಿಂತುಹೋಗುವುದು.

ಟಪ್ಪಾಲ್ ಇಲಾಖೆಯು ಎಷ್ಟು ಸುವ್ಯವಸ್ಥಿತವಾಗಿದ್ದರೂ ಅಪಾರವಾದ ಕಾರ್ಯವನ್ನು ಸ್ವಲ್ಪ ಕಾಲದಲ್ಲಿ ಜರುಗಿಸುವ ನಿಮಿತ್ತ ಅಲ್ಲಲ್ಲಿ ಲೋಪಗಳಿರಬಹುದು. ಅಂತಹ ಲೋಪ ಗಳನ್ನು ಉತ್ಪ್ರೇಕ್ಷೆ ಇಲ್ಲದೆ ಯೋಗ್ಯರೀತಿಯಿಂದ ತಿಳಿಸಿದರೆ, ತಿದ್ದುಪಾಡು ಮಾಡಲು ಸಹಕಾರಿಯಾಗುತ್ತದೆ. ಇಂತಹ ದೂರುಗಳನ್ನು ಕವರಿನಲ್ಲಿ ಹಾಕದೆ ಯಾವುದಾದರೂ ಟಪ್ಪಾಲಾಫೀಸಿನ ಮಾಸ್ಟರಿನ ಕೈಗೆ ಕೊಟ್ಟರೆ ಅದನ್ನು ಉಚಿತವಾಗಿ ಕಳುಹಿಸುವರು. ದೂರು ಹೇಳಿದರೆ ತಮ್ಮ ಕಾಗದಗಳು ನಾಶವಾಗುವುವೆಂಬ ನಿಷ್ಕಾರಣವಾದ ಭೀತಿಯು ಕೆಲವೆಡೆಗಳಲ್ಲಿರುತ್ತದೆ. ಈ ವಿಷಯದಲ್ಲಿ ಸ್ವಲ್ಪವೂ ಭಯ ಪಡಬೇಕಾಗಿಲ್ಲ. ಹಾಗೆ ಯಾರಾದರೂ ಕಾಗದಗಳನ್ನು ನಾಶಮಾಡಲು ಯತ್ನಿಸಿದರೆ ಅಂಥವರು ಘೋರ ಶಿಕ್ಷೆಗೆ ಗುರಿಯಾಗುತ್ತಾರೆ. ನ್ಯೂನತೆಗಳನ್ನು ಸರಿಯಾದ ರೀತಿ ಯಿಂದ ತೋರಿಸಿದರೆ ಜನ ಸೇವೆಯು ಇನ್ನೂ ಉತ್ತಮ ವಾಗುವುದಕ್ಕೆ ಮಾರ್ಗವಾಗುವುದು.

೭. ಟೆಲಿಗ್ರಾಫ್ ಮತ್ತು ಟೆಲಿಫೋನ್

ಮನುಷ್ಯನು ತನ್ನ ಮನೋಭಿಪ್ರಾಯವನ್ನು ಇತರರಿಗೆ ಶಬ್ದದಿಂದ ತಿಳಿಸುವುದೇ ರೂಢಿಯಲ್ಲಿರುವುದು. ನಾವು ಮಾತನಾಡುವಾಗ ಒಂದು ತೆರದ ಅಲೆಗಳು ಗಾಳಿಯಲ್ಲಿ ಉಂಟಾಗುತ್ತವೆ. ಆ ಅಲೆಗಳು ಕಿವಿಗೆ ಕೇಳಿಬಂದರೆ ಶಬ್ದಗಳ ಅರ್ಥವು ತಿಳಿಯುತ್ತದೆ. ದೂರವು ಹೆಚ್ಚಿದ ಹಾಗೆಲ್ಲಾ ಶಬ್ದವು ಕೇಳಿಸುವುದು ಕಡಮೆಯಾಗುತ್ತದೆ. ಹಾಗೆ ಕೇಳದ ಸಂದರ್ಭಗಳಲ್ಲಿ ದೃಷ್ಟಿಗೆ ಬೀಳಬಹುದಾದ ಸಂಕೇತಗಳಿಂದ ಒಬ್ಬರಿಗೊಬ್ಬರು ಮನೋಭಿಪ್ರಾಯಗಳನ್ನು ತಿಳಿಸುತ್ತಿದ್ದರು. ಈ ಸಂಕೇತಗಳು ಮೊದಲು ಬಾವುಟಗಳಿಂದಲೂ ಅನಂತರ ದೀಪಗಳಿಂದಲೂ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಜರುಗುತ್ತಿದ್ದುವು. ಈ ರೀತಿ ಸಂಜ್ಞೆಗಳ ಮೂಲಕ ಊರಿಂದ ಊರಿಗೆ ಸಮಾಚಾರವನ್ನು ಕಳುಹಿಸುವುದಕ್ಕೆ ನಮ್ಮ ದೇಶದಲ್ಲಿ ಟೆಲಿಗ್ರಾಫ್ ಎಂದು ಹೆಸರು ಬಂದಿತು. ೧೮೨೦ ರಿಂದ ೧೮೩೦ ರ ವರೆಗಿನ ಮಧ್ಯಕಾಲದಲ್ಲಿ, ಕಲ್ಕತ್ತೆಯಿಂದ ಬೊಂಬಾಯಿನ ವರೆಗೆ ೮ ಮೈಲಿಗಳಿಗೊಂದರಂತೆ ೧೦೦ ಅಡಿಗಳು ಎತ್ತರವಿರುವ ಗೋಪುರಗಳನ್ನು ಕಟ್ಟಿ, ಅವುಗಳಿಂದ ಸಂಜ್ಞೆಗಳನ್ನು ಕಳುಹಿಸುವ ಯೋಚನೆಯನ್ನು ಸರ್ಕಾರದವರು ಮಾಡಿದ್ದರು. ಆದರೆ ಇದು ಆಚರಣೆಗೆ ಬರಲಿಲ್ಲ. ಈಗಲೂ ಹೂಗ್ಲಿ ಡಿಸ್ಟ್ರಿಕ್ಟ್‌ನಲ್ಲಿ ಅಂತಹ ಗೋಪುರಗಳಿರಬಹುದೆಂದು ತೋರುತ್ತದೆ. ೧೮೩೨ರಲ್ಲಿ ಕಲ್ಕತ್ತೆಯಿಂದ ಚುನಾರ್ ಎಂಬ

ಊರಿಗೆ ಸುಮಾರು ೪೦೦ ಮೈಲಿಗಳ ದೂರ ಈ ರೀತಿಯಲ್ಲಿ ಸಮಾಚಾರವನ್ನು ಕಳುಹಿಸಿ ಉತ್ತರವನ್ನು ಪಡೆಯುತ್ತಿದ್ದರು. ಇದಕ್ಕೆ ಸುಮಾರು ಎಂಟು ನಿಮಿಷಗಳು ಹಿಡಿಯುತ್ತಿದ್ದುವು. ಈ ಸಂಜ್ಞೆಗಳನ್ನು ಕಳುಹಿಸಲು ೧೦೦ ಮೈಲಿಗಳಿಗೆ ಒಂದು ನಿಮಿಷ ಬೇಕಾಗಿದ್ದಿತು. ೧೮೫೧ನೆಯ ಸಾಲಿನಲ್ಲಿ ಕಲ್ಕತ್ತೆಯ ಮೆಡಿಕಲ್ ಕಾಲೇಜಿನ ಪಂಡಿತ (Professor) ನೊಬ್ಬನು ಹಡಗಿನ ಕೆಲಸಕ್ಕೆ ಸಹಕಾರಿಯಾಗುವಂತೆ ಕಲ್ಕತ್ತೆಯಿಂದ ಡೈಮಂಡ್ ಹಾರ್ಬರಿಗೂ ಇನ್ನೂ ಎರಡು ಮೂರು ಸ್ಥಳಗಳಿಗೂ ಅಜಮಾಯಿಷಿಗಾಗಿ ತಂತಿಗಳನ್ನು ಹಾಕಿ ವಿದ್ಯುತ್ ಶಕ್ತಿಯ ಸಹಾಯದಿಂದ ಸಂಕೇತಗಳನ್ನು ಕಳುಹಿಸಲು ಸರ್ಕಾರದ ಅಪ್ಪಣೆಯನ್ನು ಪಡೆದನು. ಈ ಯತ್ನಗಳು ಸಫಲವಾಗಲು ಕಲ್ಕತ್ತೆಯಿಂದ ಆಗ್ರಾ ಮಾರ್ಗವಾಗಿ ಬೊಂಬಾಯಿಗೂ, ಬೊಂಬಾಯಿನಿಂದ ಮದ್ರಾಸಿಗೂ, ಆಗ್ರಾದಿಂದ ಪೆಷಾವರಿಗೂ ಲಾರ್ಡ್ ಡಾಲ್‌ಹೌಸಿಯು ವೈಸರಾಯಿಯಾಗಿದ್ದಾಗ, ೧೮೫೫ರಲ್ಲಿ, ತಂತೀ ಸಮಾಚಾರವನ್ನು ಕಳುಹಿಸುವ ಏರ್ಪಾಡಾಯಿತು. ಎರಡು ವರ್ಷಗಳನಂತರ ನಡೆದ ದಂಗೆಯಲ್ಲಿ ಸುಮಾರು ೭೦೦ ಮೈಲಿಗಳ ಉದ್ದದ ತಂತಿಗಳು ಹಾಳಾಗಿ ಅವರಿಂದ ಬಹಳ ಕಷ್ಟನಷ್ಟಗಳುಂಟಾದುವು.

ಟಪ್ಪಾಲಿನಂತೆಯೇ ಮೊದಲು, ತಂತೀ ಸಮಾಚಾರಗಳನ್ನು ಕಳುಹಿಸಲು ಶಬ್ದಗಳ ಸಂಖ್ಯೆ ಮತ್ತು ದೂರ – ಇವೆರಡನ್ನೂ ಲೆಕ್ಕಿಸುತ್ತಿದ್ದರು. ಸುಮಾರು ೧೬ ಮಾತುಗಳನ್ನು ೪೦೦ ಮೈಲಿ ದೂರ ಕಳುಹಿಸಲು ಒಂದು ರೂಪಾಯಿ ಕೊಡಬೇಕಾಗಿದ್ದಿತು. ೧೮೮೨ರಲ್ಲಿ ಒಳದೇಶದಲ್ಲಿ ದೂರದ ಗಣನೆ

ಯನ್ನು ಬಿಟ್ಟು ಒಂದೇ ತೆರನಾದ ಹಾಸಲನ್ನು ವಿಧಿಸಿದರು. ೧೮೮೩ರಲ್ಲಿ ಎಲ್ಲಾ ಟಪ್ಪಾಲಾಫೀಸುಗಳಲ್ಲಿಯೂ ತಂತೀ ಸಮಾಚಾರಗಳನ್ನು ಕಳುಹಿಸಲು ಕೊಟ್ಟರೆ ತೆಗೆದುಕೊಂಡು, ಅವನ್ನು ಹತ್ತಿರ ಇರುವ ತಂತೀ ಆಫೀಸಿಗೆ ಕಳುಹಿಸ ಬೇಕೆಂದು ವಿಧಿಸಿದರು. ಅದರ ಮುಂದಿನ ವರ್ಷ ಅನೇಕ ಟಪ್ಪಾಲಾಫೀಸುಗಳಲ್ಲಿಯೇ ತಂತಿಯ ಮೂಲಕ ಸಮಾಚಾರ ವನ್ನು ಕಳುಹಿಸುವ ಏರ್ಪಾಡಾಯಿತು. ಇದರಿಂದ ಟೆಲಿಗ್ರಾಂಗಳ ಕೆಲಸವು ಟೆಲಿಗ್ರಾಫ್ ಆಫೀಸುಗಳಿಗಿಂತ ಟಪ್ಪಾಲಾಫೀಸುಗಳಲ್ಲಿ ಹೆಚ್ಚಾಗಿ ನಡೆಯಲು ಅವಕಾಶ ವಾಯಿತು. ಏತಕ್ಕೆಂದರೆ ಬರಿಯ ಟೆಲಿಗ್ರಾಫ್ ಆಫೀಸುಗಳು ನಮ್ಮ ಹಿಂದೂಸ್ಥಾನದಲ್ಲೆಲ್ಲಾ ಒಟ್ಟು ೮೯ ಇವೆ. ಒಟ್ಟು ೫,೬೦೦ ಸಬ್ ಪೋಸ್ಟ್ ಆಫೀಸುಗಳ ಪೈಕಿ ೪,೦೦೦ ಆಫೀಸುಗಳಲ್ಲಿ 'ತಂತಿ' ಕೆಲಸಗಳು ಜರುಗುತ್ತವೆ. ಅಂತಹ ಆಫೀಸುಗಳಿಗೆ (Combined) ಸಂಯುಕ್ತ ಪೋಸ್ಟ್ ಮತ್ತು ಟೆಲಿಗ್ರಾಫ್ ಆಫೀಸು ಎಂಬ ಹೆಸರು. ಸಾಮಾನ್ಯವಾಗಿ ಬ್ರಾಂಚ್ ಪೋಸ್ಟ್ ಆಫೀಸುಗಳಲ್ಲಿ ತಂತೀ ಕೆಲಸವು ಜರುಗುವುದಿಲ್ಲ.

ತಂತೀ ಸಹಾಯವಿಲ್ಲದೆ (Wireless) ಸಮಾಚಾರ ಗಳನ್ನು ಕಳುಹಿಸುವ ಏರ್ಪಾಡು ೧೯೦೫ರಲ್ಲಿ ಆರಂಭವಾ ಯಿತು. ನಮ್ಮ ದೇಶದಲ್ಲಿ ಮೊದಲು, ಅಂಡಮಾನ್ ದ್ವೀಪ ದಲ್ಲಿರುವ ಪೋರ್ಟ್ ಬ್ಲೇರ್‌ನಿಂದ ಬರ್ಮಾ ದೇಶದ ದಡ ದಲ್ಲಿರುವ ಡೈಮಂಡ್ ದ್ವೀಪಕ್ಕೆ ಈ ರೀತಿ (ತಂತೀ ಸಹಾಯ ವಿಲ್ಲದೆ) ಸಮಾಚಾರವನ್ನು ಕಳುಹಿಸಿದರು. ವಿಮಾನದ

ಮೂಲಕ ಟಪ್ಪಾಲನ್ನು ಕಳುಹಿಸುವುದು ಆರಂಭವಾದ ಮೇಲೆ ವಿಮಾನಗಳು ತಂಗುವ ಸ್ಥಳಗಳಲ್ಲೆಲ್ಲಾ Wireless ಸ್ಟೇಷನ್‌ಗಳನ್ನು ಏರ್ಪಡಿಸಿರುತ್ತಾರೆ. ಇವುಗಳ ಮೂಲಕ ವಿಮಾನಗಳ ದಿಕ್ಕನ್ನು ಕಂಡುಹಿಡಿಯುವುದಕ್ಕೂ ಮತ್ತು ವಿಮಾನಗಳೊಡನೆ ಸಂಭಾಷಣೆ ಮಾಡುವುದಕ್ಕೂ ಆಗುತ್ತದೆ.

೧೯೦೮ನೆಯ ವರ್ಷಕ್ಕೆ ಮುಂಚೆ ನಮ್ಮ ದೇಶದಲ್ಲಿ ಮಾರ್ಸ್ (Morse) ಟೆಲಿಗ್ರಾಫ್ ವ್ಯವಸ್ಥೆ ಮಾತ್ರವಿದ್ದಿತು. ಅಲ್ಲಿಂದೀಚೆಗೆ ತಂತೀ ಸುದ್ದಿಗಳು ಬರುತ್ತಿದ್ದ ಹಾಗೆಯೆ ಟೈಪು (Type) ಮಾಡುವ ವ್ಯವಸ್ಥೆಯಾಯಿತು. ಇದರಿಂದ ಕೈಬರವಣಿಗೆಯಿಂದ ಉಂಟಾಗುತ್ತಿದ್ದ ಲೋಪದೋಷಗಳ ನಿವಾರಣೆಯಾಯಿತು. ೧೯೧೯ರಲ್ಲಿ Universal Battery ಎಂಬ ಸಲಕರಣೆಯ ಉಪಯೋಗದಿಂದ ಹೆಚ್ಚು ದೂರದ ಪ್ರದೇಶಗಳಿಗೆ ಹೆಚ್ಚು ವೇಗದಿಂದ ಸುದ್ದಿಗಳನ್ನು ಕಳುಹಿಸಲು ಅನುಕೂಲವಾಯಿತು.

೧೯೧೩ನೆಯ ಸಾಲಿನಲ್ಲಿ Wheatstone ಪದ್ಧತಿಯು ಆಚರಣೆಗೆ ಬಂದಿತು. ಈ ಪದ್ಧತಿಯ ಪ್ರಕಾರ ನಾವು ಬರೆದುಕೊಟ್ಟ ಸುದ್ದಿಯನ್ನು ಒಂದು ಟೇಪಿನ (Tape) ಮೇಲೆ ರಂಧ್ರಗಳಿಂದ ಕೊರೆದು ಅದರ ಸಹಾಯದಿಂದ ಮುಂದಕ್ಕೆ ಕಳುಹಿಸಲಾಗುತ್ತಿದ್ದಿತು. ಈ ರೀತಿಯಲ್ಲಿ ಒಂದು ನಿಮಿಷಕ್ಕೆ ೧೫೦ರಿಂದ ೨೦೦ ಮಾತುಗಳನ್ನು ಕಳುಹಿಸುತ್ತಿದ್ದರು. ಕೆಲವೆಡೆಗಳಲ್ಲಿ ವೇಗವನ್ನು ಇನ್ನೂ ಹೆಚ್ಚಿಸಬಹುದಾಗಿದ್ದಿತು. ನಾವು ಕಳುಹಿಸಿದ ಸುದ್ದಿಯು ತಲಪಿದ ಊರಿನಲ್ಲಿ ಮಾರ್ಸ್ (Morse) ಸಂಕೇತಗಳಿಂದ ಟೇಪಿನ

ಮೇಲೆ ಬರೆಯಲ್ಪಡುತ್ತಿದ್ದಿತು. ಆ ಸಂಕೇತಗಳನ್ನು ಬಿಡಿಸಿ ಸಾಮಾನ್ಯವಾದ ಶಬ್ದಗಳನ್ನು ಬರೆಯುವುದು ಆವಶ್ಯಕವಿದ್ದಿತು. ಬೇಗನೆ ಕಳುಹಿಸಿದರೂ ಸಂಕೇತಗಳ ಅರ್ಥವನ್ನು ಬಿಡಿಸಿ ಬರೆಯಲು ಹೆಚ್ಚುಕಾಲ ಹಿಡಿಯುತ್ತಿದ್ದಿತು. ಈ ನ್ಯೂನತೆಯನ್ನು ಬೋಡೋ (Baudot) ಎಂಬ ಫ್ರೆಂಚ್ ಪಂಡಿತನು ತಾನು ಕಂಡುಹಿಡಿದ ಪದ್ಧತಿಯಿಂದ ಪರಿಹರಿಸಿದನು. ಇವನು ಕಂಡುಹಿಡಿದ ಯಂತ್ರವು ಒಂದು ಸಣ್ಣ ಪಿಯಾನೋ ಅಂತೆ ಇದ್ದು, ಅದರಲ್ಲಿ ಐದು ಮನೆಗಳಿದ್ದುವು. ವಿವಿಧ ರೀತಿಗಳಲ್ಲಿ ಈ ಮನೆಗಳನ್ನು ಜೋಡಿಸುವುದರಿಂದ ಇಂಗ್ಲೀಷ್ ಭಾಷೆಯ ಎಲ್ಲಾ ಅಕ್ಷರಗಳನ್ನೂ ಕೆಲವು ವಿರಾಮ ಚಿಹ್ನೆಗಳನ್ನೂ ಬರೆಯಬಹುದು. ಈ ಯಂತ್ರದಿಂದ ಕಳುಹಿಸಿದ ಸಮಾಚಾರಗಳು ತಲಪಿದ ಊರಿನಲ್ಲಿ ಟೇಪಿನ ಮೇಲೆ ಅಚ್ಚಾಗಿ ಬರುತ್ತವೆ. ಈ ಪದ್ಧತಿಯ ಪ್ರಕಾರ ಒಂದು ನಿಮಿಷಕ್ಕೆ ಸುಮಾರು ೩೫ ಮಾತುಗಳನ್ನು ಕಳುಹಿಸಬಹುದು. ಒಂದೇ ತಂತಿಯ ಸಹಾಯದಿಂದ ಎರಡಕ್ಕಿಂತ ಹೆಚ್ಚಾದ ಸ್ಥಳಗಳ ನಡುವೆ ಈ ಪದ್ಧತಿಯನ್ನು ಉಪಯೋಗಿಸಬಹುದು.

ದೂರ ಪ್ರದೇಶಗಳೊಡನೆ ಟೆಲಿಫೋನ್ ಸಂಬಂಧವು ಹೆಚ್ಚಿದ ಹಾಗೆಲ್ಲಾ ಈ ಯಂತ್ರದ ಪ್ರಯೋಜನವು ಕಡಮೆಯಾಯಿತು. ಮರ್ರೆಯ (Murray) ಪದ್ಧತಿಯು ೧೯೩೫ರಲ್ಲಿ ಜಾರಿಗೆ ಬಂದು ವೇಗವನ್ನು ಹೆಚ್ಚು ಮಾಡಿತು. ತದನಂತರ ಒಂದೇ ಟೆಲಿಫೋನ್ ತಂತಿಯ ಮೇಲೆ ಟೆಲಿಫೋನ್ ಜೊತೆಗೆ ಎರಡು ಮೂರು ವಿಧದಲ್ಲಿ (Carrier

Channels) ತಂತೀ ಸಮಾಚಾರಗಳನ್ನು ಕಳುಹಿಸಬಹುದೆಂಬುದನ್ನು ಕಂಡುಹಿಡಿದರು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈಗ ಈ ರೀತಿಯ ಏರ್ಪಾಡಿನಿಂದ ತಂತೀ ಸಮಾಚಾರಗಳು ಮುಟ್ಟುತ್ತವೆ.

Teleprinters ಎಂಬ ನವೀನ ಯಂತ್ರಗಳ ಉಪಯೋಗದಿಂದ ಟೈಪು ಮಾಡುವ ರೀತಿಯಲ್ಲಿ ಸಮಾಚಾರಗಳನ್ನು ಕಳುಹಿಸಬಹುದು.

ಹೋದ ವರುಷ ಒಂದು ಕೋಟಿ ಅರುವತ್ತುನಾಲ್ಕು ಲಕ್ಷ ತಂತೀ ಸುದ್ದಿಗಳು ಕಳುಹಿಸಲ್ಪಟ್ಟುವು. ಕಳೆದ ಸಾಲಿನ ಕೊನೆಯಲ್ಲಿ ಕಂಬಗಳ ಮೇಲೆ ಒಂದು ಲಕ್ಷ ಮೈಲಿಗಳಿಗಿಂತ ಹೆಚ್ಚಾದ ದೂರದ ತಂತಿಗಳು ಪಸರಿಸಿದ್ದುವು. ಒಟ್ಟು ತಂತಿಗಳ ಉದ್ದವು ೫ ಲಕ್ಷ ೧೦ ಸಾವಿರ ಮೈಲಿಗಳಿಗಿಂತ ಹೆಚ್ಚಾಗಿದ್ದುವು. ಇಷ್ಟೇ ಅಲ್ಲದೆ ಬೇರೆ ವಿಧವಾಗಿ ಭೂಮಿಯ ಮೇಲೆ ಮತ್ತು ಭೂಮಿಯೊಳಗೆ ೧,೪೩೦ ಮೈಲಿಗಳಷ್ಟು ತಂತಿಯು ಉಪಯೋಗಿಸಲ್ಪಟ್ಟದ್ದಿತು.

ನಮ್ಮ ದೇಶಕ್ಕೂ, ಇಂಗ್ಲೆಂಡಿಗೂ ಮತ್ತು ಇತರ ದೇಶಗಳಿಗೂ ತಂತೀ ಸಂಬಂಧವು ನೀರಿನೊಳಗಿನಿಂದ ಹಾದು ಬರುತ್ತದೆ. ಅವುಗಳನ್ನು ಕೇಬಲ್ಸ್ (Cables) ಎಂದು ಕರೆಯುತ್ತಾರೆ. ಇವುಗಳನ್ನು ರಕ್ಷಿಸುವುದು ಮತ್ತು ಕಡಿದು ಹೋದಾಗ ಸರಿಮಾಡುವುದು ಬಹಳ ಕಷ್ಟಸಾಧ್ಯವಾಗಿರುವುದರಿಂದ ಈ ಏರ್ಪಾಡಿನ ಜೊತೆಗೆ ತಂತಿಯ ಸಹಾಯವಿಲ್ಲದೆ ಸಮಾಚಾರಗಳನ್ನು ಕಳುಹಿಸುವ (Wireless Beem Service) ಏರ್ಪಾಡು ಈಚೆಗೆ ಬೊಂಬಾಯಿಂದ

ಗ್ರೇಟ್ ಬ್ರಿಟನ್ನಿಗೂ ಮತ್ತು ಬೊಂಬಾಯಿಂದ ಟೋಕಿಯೋ ನಗರಕ್ಕೂ ಇರುತ್ತದೆ.

೧೯೩೬ನೆಯ ಸಾಲಿನಲ್ಲಿ ನಡೆದ ಮೈಸೂರು ದಸರಾ ಪ್ರದರ್ಶನದಲ್ಲಿ ಈ ಮೇಲೆ ಹೇಳಿದ ಅನೇಕ ಸಲಕರಣೆಗಳನ್ನು ಅನೇಕರು ನೋಡಿರಬಹುದು. ಕಳೆದ ವರ್ಷ ವಿಮಾನಗಳಿಗೆ ಸಂಬಂಧಿಸಿದಂತೆ ತಂತಿಯ ಸಹಾಯವಿಲ್ಲದ (Wireless) ಮಾರ್ಗದಲ್ಲಿ ಒಟ್ಟು ೨,೭೯,೦೦೦ ಸುದ್ದಿಗಳು ಕಳುಹಿಸಲ್ಪಟ್ಟುವು. ಮತ್ತು ಹಡಗಿಗೆ ಸಂಬಂಧಿಸಿದಂತೆ, ,ಮದ್ರಾಸಿನಿಂದ ರಂಗೂನಿಗೆ ಇದೇ ರೀತಿಯ ೪,೩೫,೬೦೦ ಸುದ್ದಿಗಳನ್ನು ಕಳುಹಿಸಿದರು.

ಅಭಿನಂದನೆ (Greetings) ತಂತಿಗಳನ್ನೂ ಹಬ್ಬ, ಮದುವೆ ಮುಂತಾದ ಶುಭ ಸಮಯಗಳಲ್ಲಿ ಸುಲಭ ದರದಿಂದ ಕಳುಹಿಸುವ ವ್ಯವಸ್ಥೆ ಇದೆ. ಈ ಸುದ್ದಿಗಳು ಬಣ್ಣದ ಚಿತ್ರಗಳನ್ನೊಳಗೊಂಡ ಫಾರಂಗಳಲ್ಲಿಯೂ ಮತ್ತು ಲಕ್ಕೋಟಿಗಳಲ್ಲಿಯೂ ಪಾವತಿ ಮಾಡಲ್ಪಡುತ್ತವೆ. ತಂತೀ ಸಮಾಚಾರ ಬಂದಿತೆಂದರೆ ಜನರಲ್ಲಿ ಸಾಮಾನ್ಯವಾಗಿ ಸ್ವಲ್ಪ ಗಾಬರಿಗೆ ಆಸ್ಪದ ಉಂಟಾಗುತ್ತದೆಯಷ್ಟೆ. ಈ ಮೇಲೆ ಹೇಳಿದ ನಮೂನೆಯ ತಂತೀ ಸುದ್ದಿಗಳನ್ನು ಕಳುಹಿಸುವುದರಿಂದ ಈ ಗಾಬರಿಯನ್ನು ಬಹುಮಟ್ಟಿಗೆ ಕಡಮೆ ಮಾಡಬಹುದು.

ತಂತೀ ಸುದ್ದಿಗಳನ್ನು ಕಳುಹಿಸಲು ಸಾಮಾನ್ಯವಾಗಿ ತಂತೀ ಆಫೀಸಿಗೆ ಹೋಗಿ ಕಳುಹಿಸಬೇಕೆಂಬ ಭಾವನೆಯಿದೆ. ತಂತೀ ಆಫೀಸಿಗೆ ಹೋಗದೆ ಒಬ್ಬನ ವಾಸಸ್ಥಾನದಿಂದಲೇ ತಂತೀ ಸಮಾಚಾರವನ್ನು ಟೆಲಿಫೋನ್ ಮೂಲಕ ಕಳುಹಿ

ಸುವ ಏರ್ಪಾಡು ದೊಡ್ಡ ದೊಡ್ಡ ಪಟ್ಟಣಗಳಲ್ಲಿರುತ್ತದೆ. ಇದಕ್ಕೆ Phonogram ಎಂದು ಹೆಸರು. ಇದಕ್ಕೆ ಎರಡಾಣೆ ಹೆಚ್ಚು ಹಾಸಲನ್ನು ಕೊಡಬೇಕು. ಮನೆಯಲ್ಲಿ ಟೆಲಿಫೋನನ್ನು ಇಟ್ಟುಕೊಂಡಿರುವವರು ಅಪೇಕ್ಷಿಸಿದಲ್ಲಿ ತಂತೀ ಸಮಾಚಾರಗಳನ್ನು ಇದೇ ರೀತಿಯಲ್ಲಿ ಪಡೆಯಬಹುದು. ಇದಕ್ಕೆ ಹೆಚ್ಚು ದುಡ್ಡನ್ನು ಕೊಡಬೇಕಾಗಿಲ್ಲ.

ಅಮೆರಿಕಾ ಖಂಡದ ಸಂಯುಕ್ತ ಸಂಸ್ಥಾನಗಳಲ್ಲಿ (United States of America) ತಂತೀ ಇಲಾಖೆಯ ಕೆಲಸಗಳು ಕಂಪೆನಿಗಳ ಮುಖಾಂತರ ನಡೆಯುತ್ತವೆ. ಇವು ಸರಕಾರಕ್ಕೆ ಸೇರಿರುವುದಿಲ್ಲ.

International Telegraph Union ಎಂಬ ಸಂಘವು ಅಂತಹ ಟಪ್ಪಾಲಿನ ಸಂಘದಂತೆಯೇ ಬರ್ನ್ (Berne)ನಲ್ಲಿ ಕಛೇರಿಯನ್ನಿಟ್ಟುಕೊಂಡು ನಾನಾ ದೇಶಗಳ ತಂತೀ ವ್ಯವಸ್ಥೆಯನ್ನು ಏಕೀಕರಿಸುವ ಪ್ರಯತ್ನವನ್ನು ಮಾಡುತ್ತದೆ. ಈ ಸಂಘವು ೧೮೬೫ರಲ್ಲಿ ಆರಂಭವಾಗಿ ಆಗಾಗ್ಗೆ (ನಾಲ್ಕು ವರುಷಗಳಿಗೊಂದಾವರ್ತಿ) ಒಂದೊಂದು ದೇಶದಲ್ಲಿ ಸಭೆಯನ್ನು ಕೂಡಿಸಿ, ಎಲ್ಲ ದೇಶಗಳಿಗೂ ಅನ್ವಯಿಸಬಹುದಾದ ವಿಷಯಗಳನ್ನು ಚರ್ಚಿಸಿ, ಅನುಮೋದಿಸಲ್ಪಟ್ಟ ಸಲಹೆಗಳನ್ನು ಆಯಾ ಸರಕಾರದ ಮೂಲಕ ಆಚರಣೆಗೆ ತರುತ್ತದೆ.

೧೮೮೧ರಲ್ಲಿ ಇಂಡಿಯಾ ಸರಕಾರದವರು ನಮ್ಮ ದೇಶದಲ್ಲಿ ಟೆಲಿಫೋನ್ ಕೆಲಸವನ್ನು ನಡೆಸುವುದಕ್ಕೆ ಓರಿಯಂಟಲ್ ಟೆಲಿಫೋನ್ ಕಂಪೆನಿಗೆ (Oriental

Tele-phone Company) ಎಕ್ಸ್‌ಛೇಂಜ್ (Exchange) ಗಳನ್ನು ಏರ್ಪಡಿಸಲು ಹಕ್ಕನ್ನು (Licence) ಕೊಟ್ಟರು. ಮಿಕ್ಕ ಊರುಗಳಲ್ಲಿ ಸರ್ಕಾರದವರೇ ಈ ಕೆಲಸವನ್ನು ಕೈಗೊಂಡರು.

ಈ ಯಂತ್ರದ ಸೂಕ್ಷ್ಮವನ್ನು ಬೆಲ್ (Bell) ಎಂಬಾತನು ೧೮೭೬ರಲ್ಲಿ ಕಂಡುಹಿಡಿದನು. ಈ ಯಂತ್ರದ ಉಪಯೋಗವು ಯಾವ ರೀತಿಯಲ್ಲಿ ಹೆಚ್ಚಿ ದ್ರವ್ಯಾರ್ಜನೆಗೆ ಮಾರ್ಗವಾಗುವುದೆಂದೂ ಈತನೇ ಸೂಚಿಸಿದನು. ಅಮೆರಿಕಾದಲ್ಲಿ ೧೮೭೮–೭೯ರ ವರೆಗೆ ದೊಡ್ಡ ಕಂಪೆನಿಗಳು ಸ್ಥಾಪಿತವಾಗಿ ಈ ಕೆಲಸವನ್ನು ಹರಡಿದುವು. ಇಂಗ್ಲೆಂಡಿನಲ್ಲಿ ೧೮೭೯ರಲ್ಲಿ ಟೆಲಿಫೋನ್ ವ್ಯವಸ್ಥೆಯು ಆರಂಭವಾಯಿತು. ಮೊದಮೊದಲು ಯಾರೊಡನೆ ಮಾತನಾಡಬೇಕೊ ಅಂಥವರ ಸಂಖ್ಯೆಗಳನ್ನು ಕೇಳಿ ಎಕ್ಸ್‌ಛೇಂಜಿನವರು ಆ ಸಂಖ್ಯೆಯೊಡನೆ ಸಂಬಂಧ ಬೆಳಸಿದನಂತರ ಮಾತನಾಡಬಹುದಾಗಿದ್ದಿತು. ಕೆಲವು ವರ್ಷಗಳಾದ ಮೇಲೆ, ಸಂಖ್ಯೆಗಳನ್ನು ಕೇಳಿ ಸಂಬಂಧ ಪಡೆಯುವುದಕ್ಕೆ ಬದಲಾಗಿ ತಾವೇ ಯಂತ್ರದ ಮೂಲಕ ಸಂಬಂಧವನ್ನು ಕಲ್ಪಿಸಿಕೊಳ್ಳುವ ಸಾಧನವು ಆಚರಣೆಗೆ ಬಂದಿತು. ಇದಕ್ಕೆ ಆಟೋಮ್ಯಾಟಿಕ್ ಟೆಲಿಫೋನ್ (Automatic Telephone) ಎಂದು ಹೆಸರು. ಈ ಎರಡು ಬಗೆಯ ಟೆಲಿಫೋನುಗಳೂ ಬೆಂಗಳೂರಿನಲ್ಲಿ ಈಗ ಉಪಯೋಗದಲ್ಲಿರುತ್ತವೆ. ಸಿಟಿ ಸರಹದ್ದಿನಲ್ಲಿ ಎರಡನೆಯ ಪದ್ಧತಿಯೂ ಕಂಟೋನ್ಮೆಂಟ್ ಭಾಗದಲ್ಲಿ ಮೊದಲನೆಯ ಪದ್ಧತಿಯೂ ಆಚರಣೆಯಲ್ಲಿವೆ.

ಟೆಲಿಗ್ರಾಫಿಗೂ ಟೆಲಿಫೋನಿಗೂ ಅನೇಕ ವಿಧವಲ್ಲಿ ಸಂಬಂಧವಿದೆ. ಒಂದೇ ತಂತಿಯ ಮೇಲೆ ಎರಡರ ಕಾರ್ಯವೂ ನಡೆಯುತ್ತದೆ. ಟೆಲಿಫೋನಿನ ಮೂಲಕ ಉತ್ಪತ್ತಿಯು ಹೆಚ್ಚಿದ ಹಾಗೆಲ್ಲಾ ಟೆಲಿಗ್ರಾಫ್‌ನ ಕೆಲಸವು ಕಡಮೆಯಾಗುವ ಸಂಭವವಿದೆ. ಟೆಲಿಫೋನಿನ ದರಗಳ ವಿಧಾಯಕದಲ್ಲಿ ದೂರ ಮತ್ತು ಕಾಲಗಳೆರಡನ್ನೂ ಗಣನೆಗೆ ತೆಗೆದುಕೊಳ್ಳುತ್ತಾರೆ. ಊರಿಂದೂರಿಗೆ ಸಾಮಾನ್ಯವಾಗಿ ಮೂರು ನಿಮಿಷಗಳು ಮಾತನಾಡುವ ಕಾಲಕ್ಕೆ ಹಾಸಲು ನಿರ್ಣಯಿಸಲ್ಪಟ್ಟಿದೆ. ವಾಣಿಜ್ಯವು ಹೆಚ್ಚಿದಂತೆ ಈ ಸೌಕರ್ಯಗಳ ಆವಶ್ಯಕತೆಯು ಹೆಚ್ಚುತ್ತದೆ. ಆದರೆ ನಮ್ಮ ದೇಶದಲ್ಲಿ ವ್ಯಾಪಾರದಿಂದ ಟೆಲಿಫೋನ್ ಕೆಲಸವು ಹೆಚ್ಚುತ್ತದೆಯೋ ಅಥವಾ ಟೆಲಿಫೋನಿನಿಂದ ವ್ಯಾಪಾರವು ಹೆಚ್ಚುತ್ತದೆಯೋ ಎಂಬುದು ಒಂದು ಸಮಸ್ಯೆ.


ಕಳೆದ ಸಾಲಿನ ಕೊನೆಯಲ್ಲಿ ಹಿಂದೂಸ್ಥಾನದಲ್ಲಿ ೨೭೪ ಸರ್ಕಾರಿ ಎಕ್ಸ್‌ಛೇಂಜು (Exchange) ಗಳಿದ್ದುವು. ಅವುಗಳಿಂದ ೨೪,೧೧೩ ಸ್ಥಳಗಳಿಗೆ ಟೆಲಿಫೋನುಗಳು ಜೋಡಿಸಲ್ಪಟ್ಟುವು. ಇದರ ಜೊತೆಗೆ ಬೇರೆ ಇಲಾಖೆಗಳು ಮತ್ತು ಮುನಿಸಿಪಾಲಿಟಿಗಳಂಥ ಸಂಸ್ಥೆಗಳ ಉಪಯೋಗಕ್ಕೆ ಮಾತ್ರ ೩೦೪ ಎಕ್ಸ್‌ಛೇಂಜುಗಳಿದ್ದು, ೩,೪೦೭ ಸ್ಥಳಗಳಲ್ಲಿ ಟೆಲಿಫೋನುಗಳಿದ್ದುವು. ಒಟ್ಟು ೫೦ ಲಕ್ಷ ರೂಪಾಯಿಗಳು ಟೆಲಿಫೋನುಗಳ ಬಾಡಿಗೆಯಾಗಿಯೂ ೪೩ ಲಕ್ಷ ರೂಪಾಯಿಗಳು ಮಾತನಾಡುವ ಭಾರ್ಜನ (Call Fees) ರೂಪವಾಗಿಯೂ ಉತ್ಪತ್ತಿಯಾದುವು. ದೊಡ್ಡ ಊರುಗಳ ಹಕ್ಕನ್ನು ಪಡೆದಿದ್ದ

ಕಂಪೆನಿಗಳ ಉತ್ಪತ್ತಿಯು ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿದ್ದಿತು. ಆ ಕಂಪೆನಿಗಳಿಂದ ೪,೮೫,೦೦೦ ರೂಪಾಯಿಗಳು ಪೊಗದಿ (Royalty) ಯಾಗಿ ಬಂದುವು. ಕಲ್ಕತ್ತಾ ಮತ್ತು ಬೊಂಬಾಯಿ ಈ ಊರುಗಳಲ್ಲಿ ೧೭,೦೦೦ ಸ್ಥಳಗಳಲ್ಲಿ ಟೆಲಿಫೋನುಗಳಿದ್ದುವು. ಮದರಾಸು ಮತ್ತು ದೆಹಲಿಯಲ್ಲಿ ೩,೦೦೦ಕ್ಕಿಂತಲೂ ಹೆಚ್ಚಾಗಿವೆ. ಲಾಹೋರಿನಲ್ಲಿ ೨,೦೦೦, ಕರಾಚಿ ಮತ್ತು ಅಹಮದಾಬಾದ್ ಈ ಸ್ಥಳಗಳಲ್ಲಿ ೧,೫೦೦ ಇವೆ. ಪಾಶ್ಚಾತ್ಯ ದೇಶಗಳಲ್ಲಿ ದೊಡ್ಡ ದೊಡ್ಡ ಕಾರ್ಖಾನೆಯೊಂದರಲ್ಲೇ ಸಾವಿರಾರು ಟೆಲಿಫೋನುಗಳು ಉಪಯೋಗದಲ್ಲಿವೆ ಎಂದಮೇಲೆ, ನಮ್ಮ ದೇಶವು ಎಷ್ಟು ಹಿಂದುಳಿದಿದೆ ಎನ್ನುವುದು ವ್ಯಕ್ತವಾಗುತ್ತದೆ.

ಪ್ರಜಾ ಸಂಖ್ಯೆಯ ಪ್ರಕಾರ ಪ್ರತಿ ನೂರು ಜನರಿಗೆ, ವಾಷಿಂಗ್‌ಟನ್ನಿನಲ್ಲಿ ೪೦ ಟೆಲಿಫೋನುಗಳೂ, ಲಂಡನ್ನಿನಲ್ಲಿ ೧೮ ಟೆಲಿಫೋನುಗಳೂ, ಟೋಕಿಯೋ ನಗರದಲ್ಲಿ ೪ ಮತ್ತು ಬೊಂಬಾಯಿ–ಕಲ್ಕತ್ತೆಯಲ್ಲಿ ೧ ಉಪಯೋಗದಲ್ಲಿರುತ್ತವೆ. ಈ ವಿಚಾರವು ಸುಲಭವಾಗಿ ತಿಳಿಯುವಂತೆ ಎರಡು ನಕ್ಷೆ (Graph) ಗಳನ್ನು ಕೆಳಗೆ ಕೊಟ್ಟಿದೆ.


ಪ್ರತಿ 100 ಜನರಿಗ ಟಲಿಫೋನುಗಳು

(1 ಜನವರಿ 1939)



ಪ್ರತಿ 100 ಜನರಿಗೆ ಟೆಲಿಫೋನುಗಳು

(ದೊಡ್ಡ ಪಟ್ಟಣಗಳಲ್ಲಿ) 1 ಜನವರಿ 1939



ಜನಗಳ ಅನುಕೂಲಕ್ಕೋಸ್ಕರ ಕೆಲವು ಟಪ್ಪಾಲ್ ಮತ್ತು ತಂತೀ ಕಛೇರಿಗಳಲ್ಲಿ 'ಪಬ್ಲಿಕ್ ಕಾಲ್ ಆಫೀಸು' (Public Call Office) ಗಳಿವೆ. ಅಂತಹ ಸ್ಥಳಗಳಿಂದ ಮುಂಗಡವಾಗಿ ಹಣ ಕೊಟ್ಟು, ಟೆಲಿಫೋನ್ ಇಟ್ಟುಕೊಂಡಿರುವ ಯಾರೊಡನೆಯಾದರೂ ಮಾತನಾಡಬಹುದು.

೮. ಉಪಸಂಹಾರ

ಹಿಂದೂಸ್ಥಾನದ ವಿಸ್ತೀರ್ಣವು ಒಂದೂವರೆ ಲಕ್ಷ ಚದರ ಮೈಲಿಗಳು. ಗ್ರೇಟ್ ಬ್ರಿಟನ್ನಿಗಿಂತ ಇಪ್ಪತ್ತರಷ್ಟು ದೊಡ್ಡದಾಗಿದ್ದು ಕೆಲವು ಕಡೆ ದೊಡ್ಡ ಕಾಡುಗಳನ್ನೂ ಮರುಭೂಮಿಯನ್ನೂ ಒಳಗೊಂಡಿದೆ. ೧೯೩೧ನೆಯ ವರ್ಷದ ಖಾನೇಷುಮಾರಿಯ ಪ್ರಕಾರ ಜನಸಂಖ್ಯೆಯು ೩೫ ಕೋಟಿ ೮೦ ಲಕ್ಷವಿದ್ದಿತು. ಈಗ ಮೂವತ್ತೈದು ಕೋಟಿಗಿಂತಲೂ ಹೆಚ್ಚಿರಬಹುದು. ಅಮೆರಿಕಾ ಖಂಡದ ಸಂಯುಕ್ತ ಸಂಸ್ಥಾನಗಳಲ್ಲಿನ (United States of America) ಜನಸಂಖ್ಯೆಯು ಹಿಂದೂಸ್ಥಾನದ ಅರ್ಧದಷ್ಟಿದೆ. ಇಲ್ಲಿ ಜನಗಳು ಹೆಚ್ಚಾಗಿ ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಅಂತಹ ೭ತ್ತಿ ಲಕ್ಷ ಹಳ್ಳಿಗಳಿವೆ. ನೂರರಲ್ಲಿ ೧೧ ಮಂದಿ ಮಾತ್ರ ದೊಡ್ಡ ಪಟ್ಟಣಗಳಲ್ಲಿರುವರು. ವ್ಯವಸಾಯವೇ ಜನಗಳ ಮುಖ್ಯವಾದ ಜೀವನೋಪಾಯ. ಕೈಗಾರಿಕೆಯ ಸಂಸ್ಥೆಗಳು ಈಚೆಗೆ ಹೆಚ್ಚಿದ್ದರೂ, ಇವುಗಳು ದೊಡ್ಡ ಊರುಗಳಲ್ಲಿವೆ; ಅದರೆ ಅಂತಹ ದೊಡ್ಡ ಊರುಗಳು ಹಲವು ಮಾತ್ರ; ಒಂದು

ಊರಿಂದ ಇನ್ನೊಂದೂರಿಗೆ ಬಹು ದೂರದಲ್ಲಿವೆ. ವಿಸ್ತೀರ್ಣ ಮತ್ತು ಜನಸಂಖ್ಯೆಯ ಬಾಹುಳ್ಯದ ಜೊತೆಗೆ ಭಾಷೆಗಳ ಮತ್ತು ಲಿಪಿಗಳ ತೊಡಕುಗಳೂ ಸೇರಿವೆ. ಇನ್ನೂರಕ್ಕಿಂತ ಹೆಚ್ಚಾದ ಭಾಷೆಗಳು ನಮ್ಮ ದೇಶದಲ್ಲಿರುವಂತೆ ಕಳೆದ ಖಾನೇಷುಮಾರಿಯಿಂದ ತಿಳಿಯಬರುತ್ತದೆ. ಅವುಗಳ ಪೈಕಿ ಮುಖ್ಯವಾಗಿ ಹನ್ನೆರಡು ಭಾಷೆಗಳು ಹೆಚ್ಚು ಆಚರಣೆಯಲ್ಲಿವೆ. ಕೆಲವು ಭಾಷೆಗಳು ಒಂದಕ್ಕಿಂತ ಹೆಚ್ಚಾದ ಲಿಪಿಯನ್ನು ಹೊಂದಿವೆ.

ಸ್ಥಳದಿಂದ ಸ್ಥಳಕ್ಕೆ ಸಮಾಚಾರಗಳನ್ನು ಒಯ್ಯಬೇಕಾದರೆ ಬೆಟ್ಟಗುಡ್ಡಗಳಲ್ಲಿನ ಕಾಲು ಹಾದಿಗಳು, ಕಾಡುಮಾರ್ಗಗಳು, ಮೋಟಾರ್, ರೈಲ್ವೆ ಮತ್ತು ವಿಮಾನಗಳು, ಇವೆಲ್ಲವೂ ನೆರವಾಗಿವೆ. ಅಕ್ಷರಸ್ಥರ ಸಂಖ್ಯೆಯು ಬಹು ಅಲ್ಪ – ನೂರರಲ್ಲಿ ಏಳು ಜನಕ್ಕೆ ಮಾತ್ರ ಓದು ಬರಹ ಬರುತ್ತದೆ. ಪೂರ್ವಾಚಾರವನ್ನು ಅನುಸರಿಸುವುದೇ ಜನರ ಸಾಮಾನ್ಯ ಸ್ವಭಾವ.

ಇಂತಹ ದೇಶದಲ್ಲಿ ಟಪ್ಪಾಲ್, ಟೆಲಿಗ್ರಾಫ್ ಮತ್ತು ಟೆಲಿಫೋನ್ ಸಂಸ್ಥೆಯು ಸಂದೇಶಗಳನ್ನು ಸಾಗಿಸಬೇಕಾಗಿದೆ. ಯುದ್ಧಕ್ಕೆ ಮುಂಚೆ ವಿಮಾನಗಳಲ್ಲಿ ೧ ಲಕ್ಷ ೫೫ ಸಾವಿರ ಮೈಲಿ ದೂರ ಟಪ್ಪಾಲು ಸಾಗಿಸಲ್ಪಡುತ್ತಿದ್ದಿತು. ನಾನಾ ಮಾರ್ಗಗಳಿಂದ ಕಳೆದ ವರ್ಷ ಒಯ್ಯಲ್ಪಟ್ಟ ಕಾಗದ ಪತ್ರಗಳ ಸಂಖ್ಯೆಯು ೧೨೦ ಕೋಟಿಯನ್ನು ಮೀರಿತ್ತು. ಈಚೆಗೆ ಛಾಪಿಸಿರುವ ಕೆಲವು ತಲೆಚೀಟಿಗಳಲ್ಲಿ ಈ ವಿವಿಧ ಮಾರ್ಗಗಳು ನಿದರ್ಶಿಸಲ್ಪಟ್ಟಿವೆ.

ತಃಖ್ತೆ ೧

ವಿಸ್ತೀರ್ಣ ಮತ್ತು ಜನಸಂಖ್ಯೆಗೂ ಟಪ್ಪಾಲಾಫೀಸುಗಳು, ಟಪ್ಪಾಲು ಪೆಟ್ಟಿಗೆಗಳು ಮತ್ತು ಜನರು ಬರೆದ ಕಾಗದಗಳು ಇವುಗಳಿಗೂ ಇರುವ ಪ್ರಮಾಣವನ್ನು ಸೂಚಿಸುವ ತಃಖ್ತೆ

ಪ್ರಾಂತದ ಹೆಸರು	೧೯೩೧ನೆಯ ಖಾನೇಷುಮಾರಿ			ಪ್ರತಿ ಒಂದು ಟಪ್ಪಾಲಾಫೀಸಿಗೆ			ಪ್ರತಿ ಒಂದು ಟಪ್ಪಾಲು ಪೆಟ್ಟಿಗೆಗೆ			ಒಟ್ಟು ಕಾಗದ ಪತ್ರಗಳು (ಮನಿ ಆರ್ಡರನ್ನು ಬಿಟ್ಟು)	ಕಾಗದ ಪತ್ರಗಳ ಸಂಖ್ಯೆ ಪ್ರತಿಯೊಬ್ಬ	
	ವಿಸ್ತೀರ್ಣ (ಚದರ ಮೈಲಿ)	ಜನಸಂಖ್ಯೆ	ಅಕ್ಷರಸ್ಥರು	ಚದರ ಮೈಲಿಗಳು	ಜನಸಂಖ್ಯೆ	ಅಕ್ಷರಸ್ಥರು	ಚದರ ಮೈಲಿಗಳು	ಜನಸಂಖ್ಯೆ	ಅಕ್ಷರಸ್ಥರು		ಪ್ರಜೆಗೆ	ಅಕ್ಷರಸ್ಥನಿಗೆ
ಬಂಗಾಳ ಮತ್ತು ಅಸ್ಸಾಂ	೧೫೬,೭೫೦	೬೦,೪೭೪,೪೬೬	೫,೪೪೮,೨೦೫	೩೪	೧೩,೦೯೫	೧,೧೮೦	೧೦	೩,೯೩೩	೩೫೪	೨೬೬,೦೯೬,೪೩೨	೪.೪೦	೪೮.೮೪
ಬಿಹಾರ ಮತ್ತು ಒರಿಸ್ಸಾ	೧೩೦,೩೩೭*	೪೫,೦೭೬,೨೮೨*	೧,೯೫೩,೦೨೯*	೬೬	೨೨,೯೫೧	೯೯೪	೩೪	೧೧,೭೯೧	೫೧೧	೮೧,೨೧೯,೮೯೨	೧.೮೦	೪೧.೫೯
ಬೊಂಬಾಯಿ	೧೪೨,೭೮೯	೨೮,೫೯೯,೭೮೮	೨,೮೯೩,೧೦೫	೪೨	೮,೩೩೬	೮೪೩	೧೦	೨,೦೯೩	೨೧೨	೨೨೬,೫೭೪,೧೦೫	೭.೯೨	೭೮.೩೨
ಮಧ್ಯ ಪ್ರಾಂತ್ಯಗಳು	೩೩೧,೦೯೫*	೩೫,೨೫೯,೬೯೬	೧,೬೩೩,೭೭೪*	೧೫೧	೧೬,೧೨೨	೭೪೭	೬೪	೬,೭೮೧	೩೧೪	೭೪,೯೭೬,೪೧೦	೨.೧೩	೪೫.೮೯
ಮದರಾಸು	೨೪೯,೫೨೨*	೭೨,೦೮೯,೩೩೪*	೭,೦೪೬,೨೪೩*	೫೪	೧೫,೬೭೫	೧,೫೩೨	೧೬	೪,೬೭೬	೪೫೭	೨೩೧,೪೧೮,೩೦೮	೩.೨೧	೩೨.೮೪
ಪಂಜಾಬು ಮತ್ತು ವಾಯುವ್ಯ ಸರಹದ್ದಿನ ಪ್ರಾಂತ್ಯ	೨೨೩,೫೨೨	೩೨,೮೧೩,೭೮೨	೧,೬೪೧,೮೫೯	೫೨	೭,೬೪೦	೩೮೨	೧೮	೨,೫೯೫	೧೩೦	೧೮೮,೪೬೭,೫೬೦	೫.೭೪	೧೧೪.೭೯
ಸಿಂಧ್ ಮತ್ತು ಬೆಲೂಚಿಸ್ಥಾನ	೧೮೭,೦೬೬	೪,೯೮೨,೮೭೦	೨೮೦,೧೦೦	೩೮೨	೧೦,೧೬೯	೫೭೨	೧೫೪	೪,೧೦೮	೨೩೧	೩೯,೩೫೨,೧೭೦	೭.೯೦	೧೪೦.೪೯
ಸಂಯುಕ್ತ ಪ್ರಾಂತ್ಯಗಳು	೧೨೨,೨೭೨	೫೦,೯೦೩,೮೪೮	೨,೩೫೨,೬೮೫	೪೫	೧೮,೭೨೨	೮೬೫	೧೨	೫,೦೬೨	೨೩೪	೧೩೩,೩೫೮,೬೩೯	೨.೬೨	೫೬.೬೮
ಒಟ್ಟು	೧,೫೪೨,೮೫೮*	೩೩೦,೨೦೦,೦೬೬*	೨೩,೨೪೯,೦೦೦*	೬೩	೧೩,೫೮೭	೯೫೭	೨೦	೪,೨೬೬	೩೦೦	೧,೨೪೧,೪೬೩,೫೨೬	೩.೭೬	೫೩.೪೦

* ತಿದ್ದುಪಡಿ ಮಾಡಿದ ಸಂಖ್ಯೆಗಳು.

[ಈ ತಃಖ್ತೆಯಲ್ಲಿ ಕೆಲವು ಆಶ್ರಿತ ಸಂಸ್ಥಾನಗಳಲ್ಲಿನ ಸ್ವಂತ ಅಂಚೆಯ ವ್ಯವಸ್ಥೆಯ ವಿಷಯವು ಸೇರಿಲ್ಲ.]

ಒಟ್ಟು ೨೪,೧೬೯ ಟಪ್ಪಾಲಾಫೀಸುಗಳು, ೫೨,೨೫೩ ಕಾಗದದ ಪೆಟ್ಟಿಗೆಗಳು ಕಳೆದ ಸಾಲಿನ ಕೊನೆಯಲ್ಲಿದ್ದುವು. ಇವುಗಳ ಪೈಕಿ ೧೯,೬೬೦ ಟಪ್ಪಾಲಾಫೀಸುಗಳು ಮತ್ತು ೩೫,೨೫೯ ಕಾಗದದ ಪೆಟ್ಟಿಗೆಗಳು ಹಳ್ಳಿಗಳಲ್ಲಿರುತ್ತವೆ. ಟಪ್ಪಾಲಾಫೀಸುಗಳ ಸಂಖ್ಯೆಯು ದೊಡ್ಡದಾಗಿ ಕಂಡುಬಂದರೂ ಪ್ರತಿಯೊಬ್ಬ ಮನುಷ್ಯನು ಬರೆದ ಕಾಗದಗಳ ಸಂಖ್ಯೆಯು ಬಹು ಸ್ವಲ್ಪ. ೬೩ ಚದರ ಮೈಲಿಗೆ ಅಥವಾ ಸುಮಾರು ೧೪,೦೦೦ ಜನರಿಗೆ ಒಂದು ಟಪ್ಪಾಲಾಫೀಸು ಮತ್ತು ೨೦ ಚದರ ಮೈಲಿಗೆ ಅಥವಾ ೪,೦೦೦ ಜನರಿಗೆ ಒಂದು ಕಾಗದದ ಪೆಟ್ಟಿಗೆಯು ಇರುತ್ತದೆ. ಹಿಂದೂಸ್ಥಾನದ ಪ್ರತಿ ಪ್ರಾಂತ್ಯದಲ್ಲಿಯೂ ಯಾವ ರೀತಿ ಟಪ್ಪಾಲಿನ ಉಪಯೋಗವು ಇರುವುದೆಂಬುದು ೧ನೆಯ ತಃಖ್ತೆಯಿಂದ ಗೋಚರವಾಗುತ್ತದೆ.

ಹಳ್ಳಿಗಳಲ್ಲಿ ಟಪ್ಪಾಲಿನ ಸೌಕರ್ಯಗಳನ್ನು ಕಲ್ಪಿಸುವ ಯತ್ನಗಳು ನಡೆಯುತ್ತಲೇ ಇವೆ. ಕಳೆದ ಮೂರು ವರ್ಷಗಳಲ್ಲಿ ೨,೦೦೦ ಟಪ್ಪಾಲಾಫೀಸುಗಳು ಹೊಸದಾಗಿ ತೆರೆಯಲ್ಪಟ್ಟುವು. ಆದರೆ ತಕ್ಕಷ್ಟು ಕಾಗದ ಪತ್ರಗಳು ಬರುವುದಿಲ್ಲ. ವಿದೇಶಗಳೊಡನೆ ನಮ್ಮ ದೇಶವನ್ನು ಹೋಲಿಸಿದರೆ, ನಮ್ಮ ದೇಶವು ಎಷ್ಟು ಹಿಂದುಳಿದಿದೆ ಎನ್ನುವುದು ೨ನೆಯ ತಃಖ್ತೆಯಿಂದ ತಿಳಿಯಬರುತ್ತದೆ.

ತಃಖ್ತೆ ೨ :

ದೇಶದ ಹೆಸರು	ವಿಸ್ತೀರ್ಣ (ಚದರ ಮೈಲಿ)	ಸರಾಸರಿ ಟಪ್ಪಾಲಾಫೀಸು ಎಷ್ಟು ಚದರ ಮೈಲಿಗೆ ಇರುತ್ತದೆಂಬುದರ ಸಂಖ್ಯೆ	ಸರಾಸರಿ ಟಪ್ಪಾಲಾಫೀಸು ಎಷ್ಟು ಜನಸಂಖ್ಯೆಗೆ ಇರುತ್ತದೆಂಬುದರ ಸಂಖ್ಯೆ	ಕಾಗದ ಮತ್ತು ಕಾರ್ಡುಗಳು ತಲೆ ಒಂದಕ್ಕೆ ಒಂದು ವರ್ಷದಲ್ಲಿ ಎಷ್ಟು ಬರೆದಂತೆ ಆಗುತ್ತದೆಂಬುದರ ಸಂಖ್ಯೆ	ಮಿಕ್ಕ ಕಾಗದ ಪತ್ರಗಳು ತಲೆ ಒಂದಕ್ಕೆ ಒಂದು ವರ್ಷದಲ್ಲಿ ಎಷ್ಟು ಬರೆದಂತೆ ಆಗುತ್ತದೆಂಬುದರ ಸಂಖ್ಯೆ
ಆಸ್ಟ್ರೇಲಿಯಾ	೨,೯೭೩,೬೮೬	೩೬೨.೯	೮೩೪	೧೪೨.೩	
ಕೆನಡ	೩,೭೨೯,೬೬೫	೩೦೦.೩	೮೩೫	೧೩೦.೧	
ಜರ್ಮನಿ	೧೮೧,೬೯೦	೩.೮	೧,೪೪೬	೬೬.೯	೩೧.೬
ಗ್ರೇಟ್ ಬ್ರಿಟನ್	೯೪,೯೫೬	೩.೮	೧,೯೦೭	೧೦೧.೦	೭೦.೦
ಫ್ರಾನ್ಸ್	೨೧೨,೬೭೭	೧೨.೪	೨,೪೩೫	೪೫.೩	೯೦.೨
ಜಪಾನ್	೧೪೭,೬೬೭	೧೨.೨	೫,೮೮೪	೫೩.೦	೧೫.೩
ಇಂಡಿಯಾ	೧,೭೮೨,೪೯೦	೭೪.೦	೧೩,೯೮೪	೨.೬	೦.೫

ಸೂಚನೆ:— ಈ ಮೇಲಿನ ಸಂಖ್ಯೆಗಳೆಲ್ಲವೂ ೧೯೩೭ನೆಯ ಸಾಲಿಗೆ ಅನ್ವಯಿಸತಕ್ಕದ್ದು.


ಟಪ್ಪಾಲಾಫೀಸಿನ ಮುಖ್ಯ ಕಾರ್ಯದ ಜೊತೆಗೆ ಜನರ ಸೌಕರ್ಯದ ಸಲುವಾಗಿ ನಾನಾ ಬಗೆಯ ಕಾರ್ಯಗಳನ್ನು ಕೈಗೊಂಡಿರುತ್ತದೆ.

ತಂತೀ ಸಮಾಚಾರಗಳ ವಿಷಯದಲ್ಲಿ ನಮ್ಮ ದೇಶದ ವಿದ್ಯಮಾನಗಳು ಎರಡು ತೊಡಕುಗಳನ್ನೊಳಗೊಂಡಿವೆ. ಮೊದಲನೆಯದು, ಹೆಚ್ಚು ಸಮಾಚಾರಗಳು ಬರುವಂತಹ ಊರುಗಳ ಅಂತರವು ಬಹು ದೂರವಾಗಿರುವುದು. ಎರಡನೆಯದು, ನಾನಾ ಕಾರಣಗಳಿಂದ ಸಣ್ಣ ಸ್ಥಳಗಳಲ್ಲಿಯೂ ತಂತಿಯ ಅನುಕೂಲಗಳನ್ನು ಕಲ್ಪಿಸಿಕೊಡಬೇಕಾದ ಆವಶ್ಯಕತೆ. ಇಂತಹ ಸಣ್ಣ ಊರುಗಳಲ್ಲಿ ನಡೆಯುವ ತಂತೀ ಕೆಲಸದಿಂದ ಬರುವ ವರಮಾನಕ್ಕಿಂತ ಖರ್ಚೇ ಹೆಚ್ಚು. ಒಟ್ಟು ೨೫,೩೧೨ ಪೋಸ್ಟಾಫೀಸುಗಳ ಪೈಕಿ ೪,೦೯೭ ಪೋಸ್ಟಾಫೀಸುಗಳಲ್ಲಿ ತಂತೀ ಕೆಲಸವು ನಡೆಯುತ್ತದೆ. ಇವಲ್ಲದೆ ಬರಿಯ ತಂತೀ ಕೆಲಸ ನಡೆಯುವ ಟೆಲಿಗ್ರಾಫ್ ಆಫೀಸುಗಳು ೮೯ ಇವೆ. ಸುಮಾರು ೮,೦೦೦ ಪೋಸ್ಟ್ ಆಫೀಸುಗಳಲ್ಲಿ (Receiving Offices) ತಂತೀ ಸಮಾಚಾರಗಳನ್ನು ತೆಗೆದುಕೊಂಡು ಹತ್ತಿರವಿರುವ ತಂತೀ ಆಫೀಸುಗಳಿಗೆ ಕಳುಹಿಸುತ್ತಾರೆ. ಒಳದೇಶದಲ್ಲಿ ಒಟ್ಟು ೫ ಲಕ್ಷ ಮೈಲಿ ಉದ್ದದ ತಂತಿಗಳನ್ನು ಏರ್ಪಡಿಸಿದೆ. ೧೯೨೮–೨೯ನೆಯ ಸಾಲಿನಲ್ಲಿ ಒಟ್ಟು ಎರಡು ಕೋಟಿ ತಂತೀ ಸಮಾಚಾರಗಳು ಕಳುಹಿಸಲ್ಪಟ್ಟುವು. ಈಚೆಗೆ ಕ್ರಮೇಣ ಈ ಸಂಖ್ಯೆಯು ಕಡಮೆಯಾಗಿ ೧೯೩೩–೩೪ರಲ್ಲಿ ಒಂದೂವರೆ ಕೋಟಿಗೆ ಇಳಿಯಿತು. ಅಲ್ಲಿಂದೀಚೆಗೆ ಸ್ವಲ್ಪ ಹೆಚ್ಚಿದೆ.

ಟೆಲಿಫೋನಿನ ಅಭಿವೃದ್ಧಿಯು ಈಚೆಗೆ ಬಹು ಸಮರ್ಪಕವಾಗಿದೆ. ಜನರು ಇದನ್ನು ಬಹು ಆದರಿಸುವರು. ೧೯೨೨ ರಿಂದ ಈಚೆಗೆ ಸಾಮಾನ್ಯವಾಗಿ ಎಲ್ಲಾ ಮುಖ್ಯ ಪಟ್ಟಣಗಳಿಗೂ ಸಂಬಂಧವನ್ನು ಕಲ್ಪಿಸಿಕೊಟ್ಟಿರುವುದರಿಂದ ಯಾವ ಊರಿನವರೊಡನೆಯಾದರೂ ಟೆಲಿಫೋನಿನ ಮೂಲಕ ಮಾತನಾಡಲು ಸಾಧ್ಯವಾಗಿದೆ. ಇದಲ್ಲದೆ ಬೊಂಬಾಯಿಯಿಂದ ಲಂಡನ್ ಮೂಲಕ ಎಲ್ಲಾ ವಿದೇಶಗಳಿಗೂ ಮತ್ತು ಮದ್ರಾಸಿನಿಂದ ಬ್ರಹ್ಮದೇಶಕ್ಕೂ (Burma) ಟೆಲಿಫೋನಿನ ಸಂಬಂಧವು ಬೆಳೆದಿರುತ್ತದೆ. ಊರಿಂದೂರಿಗೆ ಒಂದು ವರ್ಷದಲ್ಲಿ ೨೩ ಲಕ್ಷಕ್ಕೆ ಮೀರಿದ ವೇಳೆ ಟೆಲಿಫೋನಿನ (Trunk Calls) ಮೂಲಕ ಜನಗಳು ಮಾತನಾಡಿದರು. ಆಕಾಶವಾಣಿಯ ಪ್ರಸಾರವು (Broadcasting) ಈ ಇಲಾಖೆಗೆ ಸಂಬಂಧಿಸದಿದ್ದರೂ ಇಲ್ಲಿನ ಟೆಲಿಫೋನುಗಳು ಮುಖ್ಯವಾದ ಪ್ರಸಾರದಲ್ಲಿ ಉಪಯೋಗಿಸಲ್ಪಡುತ್ತವೆ. ಅಂತಹ ಒಂದು ಸಂದರ್ಭದಲ್ಲಿ ಹನ್ನೊಂದು ಸಾವಿರ ಮೈಲಿಯ ಉದ್ದದ ಮಾತಿನ ಸುತ್ತುವಳಿಯನ್ನು (Speech Circuit) ಉಪಯೋಗಿಸಲಾಗಿತ್ತು. ಈ ಇಲಾಖೆಗೆ ಸಂಬಂಧಪಟ್ಟ ಆಕಾಶವಾಣಿಯ (Wireless) ಕಾರ್ಯಕ್ರಮವು ಮುಖ್ಯವಾಗಿ ವಿಮಾನಗಳ ಸಹಾಯಾರ್ಥವಾಗಿ ಏರ್ಪಾಡಾದುದು.


ಆರ್ಥಿಕಸ್ಥಿತಿಯನ್ನು ಸುಲಭವಾಗಿ ತಿಳಿಯುವ ಬಗ್ಗೆ ಎರಡು ಚಕ್ರಾಕಾರದ ನಕ್ಷೆಗಳನ್ನು ಈ ಕೆಳಗೆ ಕೊಟ್ಟಿದೆ. ಇದು ೧೯೩೮–೩೯ನೆಯ ಸಾಲಿಗೆ ಸಂಬಂಧಪಟ್ಟದ್ದು.

ಆದಾಯ



100
0
90.57
82.17
75.23
75
70.60
67 52
25
50
ರೂ.110 ಲಕ್ಷ
ಚಿಲ್ಲರೆ ಬಾಬು
9.43%
8.40%
ರೂ.81 ಲಕ್ಷ
ಟೆಲಗ್ರಾಂಗಳಿಂದ
6.94%
ರೂ.7,88 ಲಕ್ಷ
ಸ್ಟಾಂಪುಗಳ ಮಾರಾಟ
ದಿಂದ
67.52%
ರೂ.54 ಲಕ್ಷ
ತಂತಿ ಮತ್ತು ಇಲಾಖೆಯ ಸಾಮಾನುಗಳ
ಬಾಡಿಗೆಯ ಮುಖಾಂತರ (ಕೇಲ್ಲೈ ಮತ್ತು
ಕಾಲುವೆಗಳಿಂದ) 4.63
ರೂ.36 ಲಕ್ಷ
ಟಪ್ಪಾಲು ದಾಸಲು ನಗದು
ವಸೂಲಾದದ್ದು.
3.08%

ವ್ಯಯ



100
0
25
50
75
ರೂ.100 ಲಕ್ಷ
ರೈಲು, ವಿಮಾನ, ಜಹಜು
ಇವುಗಳಿಗಾಗಿ
8·71%
ರೂ.77 ಲಕ್ಷ
ಚಿಲ್ಲರೆ
ಬಾಬತು
6·7%
ರೂ.7,61 ಲಕ್ಷ
ಸಂಬಳಗಳಿಗಾಗಿ
66·29%
ರೂ.113 ಲಕ್ಷ
ಪೆಷನ್‌ಗಳಿಗೆ
9·84%
ರೂ.97 ಲಕ್ಷ
ಬಡ್ಡಿ ಮತ್ತು ರಿಸರ್ವ್‌ಫಂಡ್
ಇವುಗಳಿಗೆ
8·45%
ಒಟ್ಟು ಲಾಭ:
ರೂ. 19 ಲಕ್ಷ

ವಿದ್ಯಾಪ್ರಚಾರವೂ ವಾಣಿಜ್ಯವೂ ಹೆಚ್ಚುವ ರೀತಿಯಲ್ಲಿ ಈ ಇಲಾಖೆಯ ಕಾರ್ಯಕ್ರಮಗಳೂ ಹೆಚ್ಚುತ್ತವೆ. ಇಂತಹ ಕಾರ್ಯಕ್ರಮಗಳನ್ನು ಜರುಗಿಸುವುದರಲ್ಲಿ ಜನಗಳೂ ನೌಕರರೂ ಒಟ್ಟುಗೂಡಿ ತಮ್ಮ ತಮ್ಮ ಕರ್ತವ್ಯಗಳನ್ನು ಕೈಗೊಂಡರೆ ಜನಸೇವೆಯು ಅತ್ಯುತ್ತಮವಾಗಿ ನಡೆಯುವುದರಲ್ಲಿ ಸಂಶಯವಿಲ್ಲ.

ಗ್ರಂಥಾಧಾರ

೧. *An Outline of Postal History and Practice*
By I. Hamilton (1910). Thacker Spink & Co., Calcutta.

೨. *Indian Post Office and its Story*
By Geoffrey Clarke. ಇವರು ಟಪ್ಪಾಲ್ ಮತ್ತು ತಂತೀ ಇಲಾಖೆಯ ಡೈರೆಕ್ಟರ್ ಜನರಲ್‌ರಾಗಿದ್ದರು. ಈ ಗ್ರಂಥಕಾರರ ಅನುಮತಿ ಪಡೆದು ಮ|| ರಾ|| ಆರ್. ನರಸಿಂಹಮೂರ್ತಿಯವರು ಐದು ವರ್ಷಗಳ ಹಿಂದೆ ಕನ್ನಡಿಸಿದರು. ಪ್ರೋತ್ಸಾಹವಿಲ್ಲದ ಕಾರಣ ಇನ್ನೂ ಅಚ್ಚಾಗಿಲ್ಲ.

೩. *Encyclopædia Britannica*, 14th Edition, Vol. 18.

೪. *A Gazetteer Compiled for Government*
By Lewis Rice (1897).

೫. *Imperial Gazetteer of India*, Vols. III & IV.

೬. Director General's Report on the work of the Indian Posts & Telegraphs Department for 1938-39.

೭. Official Hand Book & Guide of Mysore Dasara Exhibition 1935 & 1936.

೮. *Posts and Telegraphs Guide :* Classified List of Indian Post Offices, Telephone Directories, etc.

article on *Indian Post Office* written in
ecember 1938 for the London Times
ngineering and Trade Supplement
G. V. Bewoor, C.I.E., I.C.S., Director General
Posts and Telegraphs, India. ಇದರ
ಕಲಿನೊಡನೆ ಇನ್ನೂ ಅನೇಕ ವಿಷಯ ಸಂಗ್ರಹಗಳನ್ನೂ ಕಳುಹಿಸಿ
ಟ್ಟುದಲ್ಲದೆ ಬೇರೆ ರೀತಿಯಲ್ಲಿಯೂ ಸರ್ ಗುರುನಾಥ ಬೇವೂರ್
ವರು ಸಹಾಯ ಮಾಡಿರುವುದರಿಂದ ಗ್ರಂಥಕಾರನು ಅವರಿಗೆ
ಹುಮಟ್ಟಿಗೆ ಋಣಿಯಾಗಿರುತ್ತಾನೆ.

atistique Generale (Postal) of the International Bureau, Berne, for 1937.

lephone Statistics of the World: Jan. 1, 1940. merican Telephone & Telegraph Co., Comptroller's Department, 1st March 1940.